
ಹಿತ್ತಲ ಗಿಡ

ಚಾತುರ್ಮಾಸಿಕ
ಪೈರು 6, ಕೊಯಿಲು 2, ಮೇ-ಆಗಸ್ಟ್, 2000

'ಹಿತ್ತಲಗಿಡ' ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಬಿಡಿ ಪತ್ರಿಕೆ : ರೂ. 20/-

ಸುಸ್ಥಿರತೆ ಮತ್ತು ಸ್ವಾವಲಂಬನೆಯ ಸಂಕೇತ ಮನೆನಾಡಿನ ಹಿತ್ತಲು



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಆನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಕಲೆ: ಸುಧೀರ್ ಮತ್ತು ಪಿ. ಅಭಿಬೋಧ್

ಸಂಪಾದಕೀಯ

ಜೀವ ವಿವಿಧತೆ ಮತ್ತು ಪೇಟೆಂಟ್ ಮಸೂದೆಗಳ ಮಂಡನೆ, ಜೈವಿಕ ತಂತ್ರಜ್ಞಾನ ಪ್ರೇರಿತ ಬಿಟಿ (Bt) ಹತ್ತಿಯ ಪ್ರಯೋಗ, ಡಾ. ವಂದನಾಶಿವ ನೇತೃತ್ವದಲ್ಲಿ **ಬೀಜ ಪಂಚಾಯ್ತಿ**, ಪ್ರೊ.ನಂಜುಂಡಸ್ವಾಮಿ ನೇತೃತ್ವದಲ್ಲಿ ತೃತೀಯ **ವಿಶ್ವ ರೈತ ಸಮ್ಮೇಳನ** ..... ಈ ಎಲ್ಲಾ ಅಬ್ಬರಗಳ ನಡುವೆ ಸಕ್ಕರೆ, ಹಾಲು, ಅಡಿಕೆ, ತರಕಾರಿ, ತೆಂಗು ಇತ್ಯಾದಿ ಮಾರಾಟದ ಬೆಳೆಗಳ ಬೆಲೆ ಕುಸಿದು ಕರ್ನಾಟಕದ ರೈತರು ಕಂಗಾಲಾಗಿರುವರು. ಇನ್ನೊಂದೆಡೆ, ಬೆಳೆದ ಪೈರು ಕೈಗೆಟುಕದೇ, ಕೈಗೆ ಸಿಕ್ಕರೂ ಬೆಲೆ ಸಿಗದೆ, ಬೆಳೆಯುವ ಖರ್ಚಿನ ಹೊಡೆತ ತಾಳಲಾರದೇ ದೇಶದಾದ್ಯಂತ ರೈತರ ಆತ್ಮಹತ್ಯೆ ಮುಂದುವರೆಯುತ್ತಿದೆ. ಇವೆಲ್ಲಕ್ಕೂ ಜಾಗತೀಕರಣ, ಗ್ಯಾಟ್‌ಗಳೇ ಮುಖ್ಯ ಕಾರಣವೆಂದರೂ ಪರ್ಯಾಯ ಕಾಣದೆ ರೈತರು ಕಂಗಾಲಾಗಿದ್ದಾರೆ. ಒಟ್ಟಾರೆ, ಹೊಸ ಸಹಸ್ರಮಾನ ದೇಶದ ರೈತರಿಗೆ ಭರವಸೆ, ನೆಮ್ಮದಿ ತರುವ ಬದಲು ಆತಂಕ, ನಿರಾಸೆಗಳನ್ನೇ ಎದುರಿಡುವಂತಿದೆ. ಇವೆಲ್ಲವುಗಳಕ್ಕೂ ಪರಿಹಾರ ಮತ್ತು ಪರ್ಯಾಯಗಳನ್ನು ಚಿಂತಿಸಿ, ಚರ್ಚಿಸಿ ದೃಢ ಹೆಜ್ಜೆಗಳನ್ನಿಡುವತ್ತ ಸಂಬಂಧಿಸಿರುವವರೆಲ್ಲಾ ಒಟ್ಟಾಗಿ ಪ್ರಯತ್ನಿಸುವ ಒಂದು ವೇದಿಕೆಯ ನಿರ್ಮಾಣಕ್ಕೆ ನಮ್ಮ ನಿಮ್ಮ ಕಾಣಿಕೆ ಏನೆಂಬುದರತ್ತ ಈಗ ಗಮನ ಹರಿಸುವುದು ಅತ್ಯಗತ್ಯವಾಗಿದೆ.

ಈ ನಿಟ್ಟಿನಲ್ಲಿ ಪ್ರೊ. ಅನಿಲ್ ಗುಪ್ತರವರ ತಳಮಟ್ಟದ ಅನುಶೋಧನೆಗಳ ಮೂಲಕದ ಪ್ರಗತಿ ಸ್ವಲ್ಪ ಆಸೆಯ ಕುಡಿ ಚಿಗುರುವಂತೆ ಮಾಡಿದರೆ, ಕೇಂದ್ರ ಕೃಷಿ ಕಾರ್ಯಪಡೆಯ ನೂತನ ಮುಂದಾಳು ಶರತ್ ಜೋಶಿಯ ಜಾಗತೀಕರಣದ ಬಗೆಗಿನ ಆ ಒಲವು ನಮ್ಮೆಲ್ಲರನ್ನೂ ತಬ್ಬಿಬ್ಬಾಗುವಂತೆ ಮಾಡುತ್ತದೆ. ಇವೆಲ್ಲವುಗಳ ನಡುವೆ ನಮ್ಮ ಮಾನ್ಯ ಕೃಷಿ ಮಂತ್ರಿ ಶ್ರೀ. ಟಿ.ಬಿ. ಜಯಚಂದ್ರರವರು ಹಿತ್ತಲಗಿಡದ ಬಗ್ಗೆ ಅಪಾರ ಆಸಕ್ತಿ ತೋರಿಸಿ ಇದು ಗಟ್ಟಿಯಾಗಿ, ತಮ್ಮ ನೇತೃತ್ವದ ರಾಜ್ಯ ಕೃಷಿಕ ಸಮಾಜದ ಮುಖ್ಯಸ್ಥರಿಗೆ ಮತ್ತು ರೈತರಿಗೆ ಈ ದೇಶೀಯ ಜ್ಞಾನ ವ್ಯವಸ್ಥೆ ತಲುಪುವಂತೆ ನೆರವು ನೀಡಲು ಮುಂದಾಗಿದ್ದು ಹಿತ್ತಲಗಿಡಕ್ಕೆ ಅಪಾರ ಬಲ ತಂದಿದೆ.

ಹಿತ್ತಲ ಗಿಡದ ಪೋಷಣೆ

ಪ್ರೊ. ಅನಿಲ್ ಕೆ. ಗುಪ್ತ, SRISTI (Society for Research and Initiatives for Sustainable Technologies and Institutions), Indian Institute of Management, Vastvapur, Ahmedabad - 380 015

ಮತ್ತು

ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ಬೆಂಗಳೂರು - 560 001

ಜೀವ ವೈವಿಧ್ಯ ಮಸೂದೆ 2000 - ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯಂತೆ !

ಜಾಗತಿಕ ರಿಯೊ ಸಮ್ಮೇಳನದ ಫಲವಾಗಿ ಅತ್ಯಂತ ಮಹತ್ವದ 'ಜೀವ ವೈವಿಧ್ಯ ಒಡಂಬಡಿಕೆ' (Convention on Biological Diversity) ಏರ್ಪಾಡಾಗಿ ಇದಕ್ಕೆ ಭಾರತವೂ ಸೇರಿದಂತೆ 121ಕ್ಕೂ ಅಧಿಕ ರಾಷ್ಟ್ರಗಳು ಸಹಿ ಹಾಕಿರುವವು. ಈ ಒಡಂಬಡಿಕೆಯ ಅನ್ವಯ ಒಂದು ದೇಶಕ್ಕೆ ಸಂಬಂಧಿಸಿದ ಜೀವ ವಿವಿಧತೆಯೂ ಸೇರಿದಂತೆ ಎಲ್ಲಾ ಜೈವಿಕ ಸಂಪನ್ಮೂಲಗಳ ಮೇಲೆ ಆ ದೇಶಕ್ಕೆ ಸಂಪೂರ್ಣ ಸಾರ್ವಭೌಮತ್ವ ನೀಡಿ, ಅವುಗಳು ಸುಸ್ಥಿರ ರೀತಿಯಲ್ಲಿ ಬಳಕೆಯಾಗುವಂತೆ ಮಾಡಿ ಅದರ ಲಾಭವು ನ್ಯಾಯವೂ, ಸಮಾನವೂ ಆದ ರೀತಿಯಲ್ಲಿ ಹಂಚಿಕೆಯಾಗುವಂತಹ ಶಾಸನ ತರಬೇಕೆಂದು ತೀರ್ಮಾನಿಸಲಾಯಿತು. ಭಾರತ ಈಗಾಗಲೇ ವಿಶ್ವದ 12 ಮೆಗಾ ಜೀವ ವೈವಿಧ್ಯ ರಾಷ್ಟ್ರಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತ, ವಿಶ್ವದ ಭೂಭಾಗದಲ್ಲಿ ಶೇಖಡ 2.5 ರಷ್ಟನ್ನು ಆಕ್ರಮಿಸಿದ್ದರೂ ಇದುವರೆಗೆ ದಾಖಲಾಗಿರುವ ಜಗತ್ತಿನ ಒಟ್ಟು ಜೀವ ವಿವಿಧತೆಯಲ್ಲಿ 8 ರಷ್ಟನ್ನು ಹೊಂದಿರುವುದರಿಂದ, ಈ ನಿಟ್ಟಿನಲ್ಲಿ ಒಂದು ಸೂಕ್ತ ರೀತಿಯ ಶಾಸನ ತರುವುದು ಅತ್ಯಗತ್ಯವಾಗಿತ್ತು. ಜೊತೆಗೆ, ಗ್ಯಾಟ್‌ನ ಪ್ರಬಲ ಅಸ್ತ್ರವಾದ ಪೇಟೆಂಟ್ ಕಾಯ್ದೆಗಳಿಂದ ನಮ್ಮ ಜೀವ ವಿವಿಧತೆಯನ್ನು ರಕ್ಷಿಸುವುದೂ ಅತ್ಯಗತ್ಯವಾಗಿತ್ತು. ಈ ಎಲ್ಲಾ ಕಾರಣಗಳಿಂದ, ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯವು ರಾಷ್ಟ್ರೀಯ ಕಾನೂನು ಆಯೋಗದ ಮೂಸೆಯಲ್ಲಿ ಹದಗೊಳಿಸಿ 'ಜೀವ ವೈವಿಧ್ಯ ಮಸೂದೆ (Biodiversity Bill)-2000'ನ್ನು ಈ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವಂತಾಗಿದೆ.

ಈ ಮಸೂದೆಯ ಅನ್ವಯ ದೇಶಮಟ್ಟದಲ್ಲಿ 'ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ' (National Bio-Diversity Authority), ರಾಜ್ಯಕ್ಕೊಂದು 'ರಾಜ್ಯ ಜೀವ ವೈವಿಧ್ಯ ಮಂಡಳಿ' (State Bio-Diversity Board) ಮತ್ತು ಸ್ಥಳೀಯ, ಪಂಚಾಯ್ತಿ ಮಟ್ಟದಲ್ಲಿ 'ಜೀವ ವೈವಿಧ್ಯ ನಿರ್ವಹಣಾ ಸಮಿತಿ' (Bio-Diveristy Management Committees)ಗಳ ರಚನೆಗೆ ಅವಕಾಶ ಮಾಡಿಕೊಡಲಾಗಿದೆ. ಜೊತೆಗೆ, ಈ ನಿಟ್ಟಿನಲ್ಲಿನ ಹಣಕಾಸು ನಿರ್ವಹಣೆಗೆ ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ 'ಜೀವ ವೈವಿಧ್ಯ ನಿಧಿಗಳ' (Bio-Diversity Funds) ಸ್ಥಾಪನೆಗೂ ಅವಕಾಶ ಮಾಡಿಕೊಡಲಾಗಿದೆ. ಜೀವ ವೈವಿಧ್ಯತೆಯ ಬಳಕೆಯಲ್ಲಿನ ನಿರ್ಬಂಧನೆಗಳು (Regulations), ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಕರ್ತವ್ಯ ಮತ್ತು ಅಧಿಕಾರ, ಹಣಕಾಸು, ನಿಧಿಗಳ ನಿರ್ವಹಣೆ ಬಗ್ಗೆ, ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯದ ಬಗ್ಗೆ ವಿವರಣೆ ಕೊಡಲಾಗಿದೆ. ರಾಷ್ಟ್ರೀಯ ಪ್ರಾಧಿಕಾರದ ಕೇಂದ್ರ ಕಛೇರಿಯು ಚೆನ್ನೈನಲ್ಲಿದ್ದು, ಜೀವ ವೈವಿಧ್ಯತೆ ಬಗ್ಗೆ ಆಳವಾದ ಅರಿವು, ಅನುಭವದ ಜೊತೆಗೆ ಇದರ ಲಾಭದ ಸಮಾನ ಹಂಚಿಕೆ ವಿಚಾರದಲ್ಲೂ ಸ್ಪಷ್ಟ ನಿಲುವಿರುವ ಉನ್ನತ ವ್ಯಕ್ತಿಯೊಬ್ಬರನ್ನು ಇದರ ಮುಖ್ಯಸ್ಥರನ್ನಾಗಿ ನೇಮಿಸಬೇಕಾಗಿದೆ. ಜೀವ ವಿವಿಧತೆಯಂತಹ ಅತ್ಯಂತ ನಾಜೂಕಿನ ಅಷ್ಟೇ ಮಹತ್ವದ ಸಂಪನ್ಮೂಲವನ್ನು ವಿವರವಾದ ಕಾಯಿದೆ ಮತ್ತು ಕಾರ್ಯಕ್ರಮಗಳ ವ್ಯಾಪ್ತಿಗೆ ತರುವ ಪ್ರಯತ್ನ ಇದಾಗಿದ್ದು, ಬೌದ್ಧಿಕ ಸನದಿನ ಹಕ್ಕು (Intellectual Property Rights)ನಂತಹ ಅತ್ಯಂತ ಆತಂಕದ ಗ್ಯಾಟ್ ನಿಯಮಾವಳಿಯಿಂದ ನಮ್ಮ ಜೀವ ವಿವಿಧತೆಯನ್ನು ರಕ್ಷಿಸಲು 'ಯಾವುದೇ ದೇಶೀಯ ಅಥವಾ ವಿದೇಶೀಯ ವ್ಯಕ್ತಿ ನಮ್ಮ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಅನುಶೋಧನೆ ಅಥವ ಅವಿಷ್ಕಾರಗಳ ಮೇಲೆ ಪೇಟೆಂಟ್ ಕಾಯಿದೆಯನ್ನು ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರದ ಒಪ್ಪಿಗೆ ಇಲ್ಲದೆ ತರಲಾಗದು' ಎಂಬ ದಿಟ್ಟ ನಿರ್ಬಂಧವನ್ನು ಹೇರಿರುವುದು ಸ್ವಾಗತಾರ್ಹ. ಇವೆಲ್ಲವುಗಳ ನಡುವೆಯೂ, ಈ ಮಸೂದೆ ಹಲವು ವಾದ ವಿವಾದಗಳಿಗೆ ಎಡೆಮಾಡಿಕೊಡುವಂತಾಗಿದೆ.

ಲೋಪದೋಷಗಳು: ಇದರ ದೊಡ್ಡ ಲೋಪವೆಂದರೆ, ಜೀವ ವಿವಿಧತೆಯ ನಿಜ ವಾರಸುದಾರರಾದ ಗ್ರಾಮೀಣ ಜನತೆಗೆ ಇದರ ಮೇಲೆ ಅತ್ಯಧಿಕ ಹಕ್ಕು ನೀಡುವ ಬದಲು, ರಾಷ್ಟ್ರೀಯ ಪ್ರಾಧಿಕಾರದಲ್ಲಿ ಅಧಿಕಾರವನ್ನು ಪೂರ್ತಿ ಕೇಂದ್ರೀಕರಿಸಲಾಗಿರುವುದು. ಗ್ರಾಮ ಮಟ್ಟದ ಜೀವ ವೈವಿಧ್ಯ ಸಮಿತಿಗಳ ಕೆಲಸವೇನಿದ್ದರೂ ತಮ್ಮ ವ್ಯಾಪ್ತಿಯ ಜೀವ ವೈವಿಧ್ಯತೆಯನ್ನು ಸಂರಕ್ಷಿಸಿ ದಾಖಲಿಸಿಡುವುದು ಮಾತ್ರ. ಇದರ ಬಳಕೆಯ ಮೇಲಿನ ಪೂರ್ತಿ ಹಕ್ಕು ರಾಷ್ಟ್ರೀಯ ಪ್ರಾಧಿಕಾರಕ್ಕೆ, ಸ್ವಲ್ಪ ಮಟ್ಟಿಗೆ, ರಾಜ್ಯ ಮಂಡಳಿಗೂ ನೀಡಲಾಗಿದೆ. ಜೊತೆಗೆ ದೇಶವಿದೇಶಗಳ ವ್ಯಕ್ತಿ, ಸಂಸ್ಥೆಗಳಿಗೆ ಜೀವ ವೈವಿಧ್ಯತೆಯ ಉಪಯೋಗದ ಪರವಾನಗಿಯನ್ನು ಈ ಸ್ಥಳೀಯ ಸಂಸ್ಥೆಗಳ ಒಪ್ಪಿಗೆ ಪಡೆದೇ ನೀಡಬೇಕೆಂಬ ನಿರ್ಬಂಧವೇನೂ ಇಲ್ಲ. ಅಂದ ಮೇಲೆ ಈ ಮೂಲ ವಾರಸುದಾರರಿಗೆ ಇಲ್ಲಿ ಪರಮಾಧಿಕಾರದ ಮಾತೆಲ್ಲಿ? ಇನ್ನು ರಾಜ್ಯಮಟ್ಟದ ದೊಡ್ಡಣ್ಣ 'ರಾಜ್ಯ ಜೀವ ವೈವಿಧ್ಯ ಮಂಡಳಿ' ಯಂತೂ ಈ ಸ್ಥಳೀಯ ಸಂಸ್ಥೆಗಳಿಂದ ಅಳಿದುಳಿದ ಹಕ್ಕನ್ನೂ ಕಸಿದುಕೊಳ್ಳದಿದ್ದಲ್ಲಿ ಅದೇ ಅದೃಷ್ಟ. ಅಭಯಾರಣ್ಯದ ರೀತಿಯಲ್ಲಿ ಜೀವ ವೈವಿಧ್ಯ ಅಧಿಕವಾಗಿರುವ ಪ್ರದೇಶಗಳನ್ನು 'ರಾಷ್ಟ್ರೀಯ ಪಾರಂಪರಿಕ ಜಾಗ' (National Heritage Sites) ಎಂದು ಘೋಷಿಸಬೇಕೆಂಬುದಾಗಿ ಸೂಚಿಸಲಾಗಿದೆ. ಈ ರೀತಿ ಘೋಷಿಸಿ, ಅದರ ಉಸ್ತುವಾರಿಯನ್ನು ಅರಣ್ಯ ಇಲಾಖೆಗೆ ನೀಡಿದ್ದೇ ಆದಲ್ಲಿ ಸ್ಥಳೀಯ ಬಡಬಗ್ಗರಿಗೆ ನಾಟಿ ಸಸ್ಯ, ಗಿಡ ಮೂಲಿಕೆ, ಹಣ್ಣು ಹಂಪಲು ಇತ್ಯಾದಿ ಉಪ ಅರಣ್ಯ ಉತ್ಪನ್ನಗಳಂತಹ ಜೀವ ವೈವಿಧ್ಯತೆ ಮೇಲಿನ ಬಳಕೆಗೇ ಅಡ್ಡಿಯಾಗುವ ಅಪಾಯವಿದೆ. ಇದು ಒಂದು ವಿಧದಲ್ಲಿ ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆಯ ರೀತಿ, ಜೀವ ವಿವಿಧತೆಯ ಉಪಯೋಗಕ್ಕೆ ಸಂಚಕಾರ ಬಂದು ಬಡವರ 'ಜೀವನ ಭದ್ರತೆ'ಗೇ ಕಂಠಕ ಬರುವ ಭಯವಿದೆ.

ಜೀವ ವಿವಿಧತೆಯೆಂಬುದು ಎಂದೆಂದೂ ಬತ್ತದ ಆಗರ, ಇದರ ನಿರ್ವಹಣೆ ಮತ್ತು ಉಪಯೋಗಗಳೇ ಪ್ರಮುಖ ಎಂಬ ಸರಳ ಅಭಿಪ್ರಾಯದ ಮೇಲೆ ಇಡೀ ಮಸೂದೆಯನ್ನು ರೂಪಿಸಿದಂತಿದೆ. ಹಾಗಾಗಿ ಇದರ ಸಂರಕ್ಷಣೆಯ ಬಗೆಗಿನ ಮಾರ್ಗಗಳತ್ತ ಗಮನ ಹರಿಸುವ ವ್ಯವಧಾನವೇ ಇಲ್ಲವಾಗಿದೆ. ಗ್ರಾಮ ಪಂಚಾಯ್ತಿಯಲ್ಲಿ ಒಂದು ಕಂಪ್ಯೂಟರ್ ಗಟಕ ಇಟ್ಟರಾಯ್ತು, ಈ ಡಿಜಿಟಲ್ ವ್ಯವಸ್ಥೆಯ ಮೂಲಕ ಅಲ್ಲಿನ ಜೀವ ವೈವಿಧ್ಯ ನಿರಂತರವಾಗಿ ದಾಖಲಾಗುತ್ತಾ ಇದ್ದು ರಾಜ್ಯ/ರಾಷ್ಟ್ರ ಮಟ್ಟದಲ್ಲಿ ಇದರ ಬಳಕೆಯನ್ನು

ಯೋಚಿಸುತ್ತಾ ಕೂರಬಹುದೆನ್ನುವ ಬಾಲಿಶ ಕಲ್ಪನೆ ಇದ್ದಂತಿದೆ. ಜೀವ ವಿವಿಧತೆಯೆಂಬುದು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದು ನಮ್ಮ ನಾಟೀ ಸಂಸ್ಕೃತಿಗಳ ಮೂಲ ಬೇರೂ ಇದಾಗಿದೆ. ನಮ್ಮ ಹಾಲಕ್ಕಿ ಒಕ್ಕಲಿಗರು ನೂರಾರು ಗಿಡಮೂಲಿಕೆಗಳನ್ನು ಬಳಸಿ ಬದುಕುತ್ತಿರುವರು. ಉತ್ತರ ಕನ್ನಡ ಸಿದ್ಧಿ ಬುಡಕಟ್ಟು ಜನಾಂಗ ಒಮ್ಮದ್ದು, ಶೇವ್‌ಕಾರ್‌ನಂತಹ ಹತ್ತಾರು ನಾಟೀ ಭತ್ತದ ತಳಿಗಳನ್ನು ಉಳಿಸಿ ಬೆಳಸುತ್ತಿರುವರು. ಹೊರನಾಡಿನ ಅನ್ನಪೂರ್ಣೇಶ್ವರಿ ದೇವಿಗೆ 'ಹೆಗ್ಗ' ಭತ್ತದ ತಳಿಯ ಅನ್ನ ನೈವೇದ್ಯ ಮಾಡಿದಲ್ಲಿ ತಮ್ಮ ಸೇವೆ ಪೂರ್ತಿಯಾಗುತ್ತದೆ ಎಂದು ಪಶ್ಚಿಮ ಘಟ್ಟದ ಜನ ನಂಬಿರುವರು. ಮಲೆನಾಡ ಮಹಿಳೆಯರು ನೂರಾರು ನಾಟೀ ತರಕಾರಿ, ಹೂವುಗಳ ತಳಿಯನ್ನು ತಮ್ಮ ಹಿತ್ತಲಲ್ಲಿ ಬೆಳೆಸದೇ ಇದ್ದಲ್ಲಿ ಕುಟುಂಬಕ್ಕೆ ಏನೋ ಅಪಚಾರ ಮಾಡಿದಂತಾಗುತ್ತದೆ ಎಂದು ಭಾವಿಸುವರು. ಬಿಳಿಗಿರಿ ರಂಗನ ಬೆಟ್ಟದ ಸೋಲಿಗರಂತಹ ಅರಣ್ಯ ವಾಸಿಗಳು ಕಾಡಿನಲ್ಲಿ ಜೇನು, ಅಂಟುವಾಳ, ಸೀಗೆಪುಡಿ ಹೀಗೆ ಹಲವು ಹತ್ತಾರು ಉತ್ಪನ್ನಗಳ ಸಂಗ್ರಹಣೆಗಳ ಕಲೆಯನ್ನು ಕರತಲಾಮಲಕಗೊಳಿಸಿ ಅದೇ ತಮ್ಮ ಬದುಕಿನ ರೀತಿಯನ್ನಾಗಿಸಿಕೊಂಡಿರುವರು. ಈ ರೀತಿ ನಮ್ಮ ದೇಶದ ಬಹು ಸಂಖ್ಯಾತ ಬಡಜನತೆಯನ್ನೊಳಗೊಂಡಿರುವ ನಾಟೀ ಸಂಸ್ಕೃತಿಗಳಿಗೂ ಈ ಜೀವ ವಿವಿಧತೆಗೂ ಇರುವ ಅನನ್ಯ ಸಂಬಂಧವನ್ನು ಅರಿತು, ಗಟ್ಟಿ ಮಾಡುವ ಪ್ರಯತ್ನ ಮಾತ್ರ ಜೀವ ವಿವಿಧತೆಯ ಸುಸ್ಥಿರ ಬಳಕೆಯ ನಿಟ್ಟಿನಲ್ಲಿ ಒಂದು ಅರ್ಥಪೂರ್ಣ ಕೆಲಸವಾಗಬಹುದು.



ಇವೆಲ್ಲಾ ಜೀವ ವಿವಿಧತೆಗೆ ತಳುಕು ಹಾಕಿಕೊಂಡಿರುವ 'ಸಂಸ್ಕೃತಿ ಮತ್ತು ಸಮಾನತೆ'ಯ ವಿಚಾರಗಳಾಗಿದ್ದರೆ; ಇವುಗಳು ಇಂದು ಜಾಗತೀಕರಣದ ವಾತಾವರಣದಲ್ಲಿ ಮೇಲೇಳುತ್ತಿರುವ ಸದ್ಯದ ಜೀವ ವೈವಿಧ್ಯ ಶಾಸನದಲ್ಲಿ ಕಲ್ಪನೆಗೂ ನಿಲುಕದ ಮಾತಾಗಿವೆ. ಬದಲಿಗೆ ಇಡೀ ಜೀವ ವಿವಿಧತೆಯನ್ನು ಕಿರು ಅರಣ್ಯ ಉತ್ಪನ್ನಗಳ ಮಟ್ಟಕ್ಕೆ ಇಳಿಸಿ ಇವುಗಳಿಂದ ನಗರ ಅಥವಾ ಕೈಗಾರಿಕೆಗಳಿಗೆ ಅಗತ್ಯವಿರುವ ಔಷಧಿ, ಸೌಂದರ್ಯವರ್ಧಕಗಳು, ಬೆಳವಣಿಗೆ ನಿಯಂತ್ರಕಗಳು (Growth regulaters) ಇತ್ಯಾದಿ ಕೊನೆ ಉಪಯೋಗದ ವಸ್ತುಗಳತ್ತ ಮಾತ್ರ ಕೇಂದ್ರೀಕರಿಸಿ ನೋಡಬೇಕೆನ್ನುವ ಹಲವು ವಿಜ್ಞಾನಿಗಳ ಮತ್ತು ಅರ್ಥಶಾಸ್ತ್ರಜ್ಞರ ವಾದವೂ ಜೀವ ವಿವಿಧತೆಯ ಬಗೆಗಿನ ನಮ್ಮ ಬುದ್ಧಿಜೀವಿ ವರ್ಗಗಳ ಸಂಕುಚಿತ ದೃಷ್ಟಿಕೋನವನ್ನು ಎತ್ತಿತೋರಿಸುತ್ತದೆ. ಹಾಗೇ ಈ ಜೀವ ವಿವಿಧತೆಯನ್ನು ನಮ್ಮ ನಾಟೀ ಜನಾಂಗಗಳು ತಮ್ಮ ಆ ಅಗಾಧ ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಅರಿತು, ಬೆಳೆಸಿ ಸಂರಕ್ಷಿಸುತ್ತಾ ಬಂದಿದ್ದು, ಈ ಬಗ್ಗೆಯೂ ನಿಖರವಾದ ಉಲ್ಲೇಖನವೇನೂ ಇಲ್ಲದಿರುವುದು ಆಶ್ಚರ್ಯಪಡಬೇಕಾದ ಸಂಗತಿಯಾಗಿದೆ. ಹಾಗೇ ಹಲವಾರು ರೀತಿ, ರಿವಾಜು, ಕಟ್ಟಳೆಗಳ ಒಂದು 'ದೇಶೀಯ ಸಾಂಸ್ಥಿಕ ವ್ಯವಸ್ಥೆ' (Indigenous institutions) ಗಳು ಈ ಜೀವ ವಿವಿಧತೆಯ ಸುಸ್ಥಿರ ಬಳಕೆಗೆ ಸಹಕಾರಿಯಾಗಿದ್ದು, ಇದು ನಮ್ಮ ವಿಜ್ಞಾನಿಗಳ, ಕಾನೂನು ತಜ್ಞರ ಅವಗಾಹನೆಗೂ ಇಲ್ಲಿ ನಿಲುಕದ ವಿಚಾರಗಳಾಗಿವೆ.

ಪರಿಹಾರ ಕ್ರಮಗಳು:- ನಮ್ಮ ಜೀವ ವಿವಿಧತೆ ಮೇಲಿನ ಮಸೂದೆ ಸಮಗ್ರ ವ್ಯಾಪ್ತಿ ಪಡೆಯಲು ಈ ಮೇಲೆ ಚರ್ಚಿಸಿರುವಂತೆ 'ಸಂಸ್ಕೃತಿ, ಸಮಾನತೆ ಮತ್ತು ಅಭಿವೃದ್ಧಿ' ಆಯಾಮಗಳನ್ನು ಜೀವ ವಿವಿಧತೆಯ ಸಂರಕ್ಷಣೆ ಮತ್ತು ಬಳಕೆಯ ವಿಚಾರಗಳಲ್ಲಿ ಕೊಂಡಿ ಹಾಕಬೇಕಾಗಿದೆ. ಇದಕ್ಕಾಗಿ ಆಗಬೇಕಾಗಿರುವ ಮುಖ್ಯ ಕಾರ್ಯಗಳೆಂದರೆ:

a) ಈ ಜೀವ ವಿವಿಧತೆಯ ಮೇಲೆ ನಮ್ಮ ನಾಟೀ ಸಮುದಾಯಗಳು, ಗ್ರಾಮೀಣ ವ್ಯಕ್ತಿಗಳು, ರೈತರು ಮತ್ತು ಮಹಿಳೆಯರಿಗೆ ಸಂಪೂರ್ಣ ಸಾರ್ವಭೌಮತ್ವ ಮತ್ತು ಒಡೆತನದ ಹಕ್ಕು ನೀಡುವಂತಹ ಕಾಯ್ದೆ ಕೂಡಲೇ ಜಾರಿಗೆ ತರಬೇಕು.

b) ಜೀವ ವಿವಿಧತೆಯ ಮೇಲಿನ ಈ ಒಡೆತನದ ನಿರ್ವಹಣೆ ಮಾರುಕಟ್ಟೆಗೆ ಆಯಾ ಸ್ಥಳ, ಜನ, ಸನ್ನಿವೇಶಕ್ಕೆ ಹೊಂದಿಕೊಂಡಂತೆ ವಿಕೇಂದ್ರೀಕೃತ ರೀತಿಯಲ್ಲಿ ಸಹಕಾರಿ ಸಂಸ್ಥೆಗಳು ಅಥವಾ ಟ್ರಸ್ಟ್‌ಗಳು ಅಥವಾ ಸ್ವಸಹಾಯ ಸಂಸ್ಥೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಬೇಕು. ಇದು ರಾಜ್ಯ ಜೀವ ವಿವಿಧತೆ ಮಂಡಳಿಗಳ ಕರ್ತವ್ಯವಾಗಬೇಕು.

c) ಜೀವ ವಿವಿಧತೆಯೊಡನೆ ಹಾಸು ಹೊಕ್ಕಾಗಿ ಹೊಂದಿಕೊಂಡಂತಹಾ ಆ ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳ ಮೇಲಿನ ಬೌದ್ಧಿಕ ಸನದಿನ ಹಕ್ಕನ್ನು ಆಯಾ ಸನ್ನಿವೇಶಕ್ಕೆ ಹೊಂದಿಕೊಂಡಂತೆ ಸಾಮೂಹಿಕವಾಗಲೀ ಅಥವಾ ವೈಯುಕ್ತಿಕವಾಗಲೀ ಆಯಾ ನಾಟೀ ಸಮುದಾಯ ಅಥವಾ ವ್ಯಕ್ತಿಗಳಿಗೇ ನೀಡಬೇಕು. ನಂತರ ದೇಶ ವಿದೇಶಗಳಲ್ಲಿ ಜೀವ ವಿವಿಧತೆ ಬಗ್ಗೆ ವಾಣಿಜ್ಯ ದೃಷ್ಟಿಯಿಂದ ವ್ಯವಹಾರ ನಡೆಸುವಾಗ, 'ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರ' ಈ ನಿಟ್ಟಿನಲ್ಲಿ ಯೋಗ್ಯ ರೀತಿಯಲ್ಲಿ ಲಾಭಾಂಶದ ಹಂಚಿಕೆಯಾಗುವ ಹಾಗೆ ಕಾಯಿದೆ ರೂಪಿಸಬೇಕು.

d) ಈ ಜೀವ ವಿವಿಧತೆ ಇದುವರೆಗೂ ಉಳಿಯಲು ಸಹಕಾರಿಯಾದ 'ದೇಶೀಯ ಸಂಸ್ಥೆಗಳನ್ನು' ಗಟ್ಟಿ ಮಾಡಿ ಇವುಗಳೇ 'ಸ್ಥಳೀಯ ಪಾರಂಪಾರಿಕಾ ಸ್ಥಳಗಳು' ಎಂಬುದಾಗಿ ಘೋಷಿಸಬೇಕು. ಇದನ್ನು ಈಗಾಗಲೇ ನಮ್ಮ ಖ್ಯಾತ ಪರಿಸರವಾದಿ ಶ್ರೀ ಯಲ್ಲಪ್ಪರೆಡ್ಡಿಯವರು ತಾವು ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದಾಗ ವೃಕ್ಷ ವೈವಿಧ್ಯತೆ ಸಂರಕ್ಷಿಸಲು ಹುಟ್ಟು ಹಾಕಿದ್ದ, 'ದೇವ ವನ, ಮೂಲಿಕಾ ವನ, ಔಷಧ ವನ' ಪರಿಕಲ್ಪನೆ ಆಧಾರದಲ್ಲೇ ಗಟ್ಟಿಮಾಡಬಹುದಾಗಿದೆ.

ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ

ಬೆಳೆಗಳ ಕೀಟ ನಿಯಂತ್ರಣಕ್ಕೆ ಬೆಳ್ಳುಳ್ಳಿಯ ಬಳಕೆ


ಬೆಳ್ಳುಳ್ಳಿಯು ಲಿಲಿಯೇಸಿಯೇ ಕುಟುಂಬಕ್ಕೆ ಸೇರಿದ್ದು ಇದನ್ನು ವೈಜ್ಞಾನಿಕವಾಗಿ *Allium sativum* ಎಂದು ಕರೆಯುತ್ತಾರೆ. ಇಂದು ಆಧುನಿಕ ಪದ್ಧತಿಯನ್ನು ಅನುಸರಿಸುತ್ತಿರುವಂತಹ ರೈತರು ಹಲವಾರು ಸಮಸ್ಯೆಗಳ ಸುಳಿಯಿಂದ ಹೊರಬರಲಾರದೆ ಹೆಣಗಾಡುತ್ತಿದ್ದಾರೆ. ತಮ್ಮ ಬೆಳೆಗಳಿಗೆ ಬರುತ್ತಿರುವ ರೋಗ ಹಾಗು ಕೀಟಗಳನ್ನು ನಿಯಂತ್ರಿಸಲು ಹಲವಾರು ವಿಶ್ವ ಆರೋಗ್ಯ ಸಂಸ್ಥೆಯಿಂದ ಬಹಿಷ್ಕರಿಸಲ್ಪಟ್ಟಂತಹ, ಪರಿಸರಕ್ಕೆ ಹಾನಿ, ಮನುಷ್ಯನಿಗೆ ತುಂಬ ಅಪಾಯಕಾರಿ ಆಗುವಂತಹ ಔಷಧಗಳ ಬಳಕೆಯನ್ನು ಮಾಡುತ್ತಿದ್ದಾರೆ. ಈ ಔಷಧಗಳಿಗಾಗಿ ಸಾವಿರಾರು ರೂಪಾಯಿ ಹಣ ವ್ಯಯ ಮಾಡುತ್ತಿದ್ದಾರೆ. ಬದಲಾಗಿ ನಮ್ಮ ಪರಿಸರಕ್ಕೆ, ಪಶು ಪಕ್ಷಿಗಳಿಗೆ ತೊಂದರೆಯಾಗದಂತಹ ಹಲವಾರು ನಾಟಿ ಔಷಧ ಪದ್ಧತಿಗಳಿವೆ. ಉದಾಹರಣೆಗೆ ಬೆಳ್ಳುಳ್ಳಿ, ಕರಿಮೆಣಸು, ಮೆಣಸಿನಕಾಯಿ, ಬೇವು, ಹಸುವಿನ ಗಂಜಲ ಇಂತಹವುಗಳೊಂದಿಗೆ ತಯಾರಿಸಿದ ರಸವನ್ನು ಕ್ರಿಮಿ ಕೀಟ ನಾಶಕಗಳಾಗಿ ಬಳಸುವುದನ್ನು ನಮ್ಮ ಗ್ರಾಮಾಂತರ ಪ್ರದೇಶದ ಜನರು ಬಹುದಿನಗಳಿಂದಲೆ ಕಂಡುಕೊಂಡಿರುವರು.

ಬೆಳ್ಳುಳ್ಳಿ ಇತರೆ ಬೆಳೆಗಳಿಗೆ ಬೀಳುವಂತಹ ಪೀಡೆಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿದೆ. ಇಂತಹ ಬೆಳ್ಳುಳ್ಳಿ ಯಾವುದೇ ರಾಸಾಯನಿಕ ಗೊಬ್ಬರಗಳನ್ನು ಹಾಕದೆ ಬೆಳೆದಿರುವಂತಹದಾಗಿರಬೇಕು. ಏಕೆಂದರೆ ಬೆಳ್ಳುಳ್ಳಿಗೆ ರಾಸಾಯನಿಕ ಗೊಬ್ಬರವನ್ನು ಬಳಸಿ ಬೆಳೆದಿದ್ದರೆ, ಈ ರಾಸಾಯನಿಕ ಗೊಬ್ಬರಗಳು ಬೆಳ್ಳುಳ್ಳಿಯಲ್ಲಿರುವ ಸಹಜ ರಾಸಾಯನಿಕಗಳ ಶಕ್ತಿಯನ್ನು ನಿಸ್ಸಾರಗೊಳಿಸುತ್ತವೆ. ಬೆಳ್ಳುಳ್ಳಿಯಲ್ಲಿರುವಂತಹ ಕೀಟವಿಕರ್ಷಕ ಗುಣವು ಅತ್ಯಂತ ಕಹಿ ಮತ್ತು ತೀಕ್ಷ್ಣವಾದ ಬಾಷ್ಪತೈಲದಲ್ಲಿನ ಡೈಯಲಿಲ್ ಡೈಸಲ್ಫೈಡ್, ಡೈಯಲಿಲ್ ಟ್ರೈಸಲ್ಫೈಡ್ ಮತ್ತು ಸಲ್ಫೋಕ್ಸೈಡ್‌ಗಳ ಪ್ರಭಾವದಿಂದ ಕೂಡಿದೆ. *ಈ ರೀತಿ ನಾಟೀ ಔಷಧಿಗಳ ವ್ಯವಸ್ಥಿತ ರೀತಿಯ ಬಳಕೆಯಲ್ಲಿ ಬೆಳ್ಳುಳ್ಳಿಯ ಮಹತ್ವ ತಿಳಿಸುವ 'ಪೀಡೆಗಳ ಹತೋಟಿಗಾಗಿ ಸಸ್ಯಗಳು' ಎಂಬ ಪುಸ್ತಕವನ್ನು ಬೆಂಗಳೂರು ಇಕ್ರಾ* (Institute for Cultural Research and Action) *ಸಂಸ್ಥೆ ಪ್ರಕಟಿಸಿದೆ. ಇದರಿಂದ ಸಂಗ್ರಹಿಸಲಾಗಿರುವ ಕೆಲ ಮುಖ್ಯ ಹತೋಟಿ ಕ್ರಮಗಳನ್ನು ಈ ಕೆಳಗೆ ಕೊಡಲಾಗಿದೆ.*

ಕಂಬಳಿ ಹುಳುಗಳ ನಿಯಂತ್ರಣ

ಎರಡು ಚಮಚದಷ್ಟು ಕರಿ ಮೆಣಸನ್ನು ಎರಡು ಬೆಳ್ಳುಳ್ಳಿಯೊಂದಿಗೆ ಚೆನ್ನಾಗಿ ಅರೆದು, ನಾಲ್ಕು ಲೀಟರ್ ನೀರಿನೊಂದಿಗೆ, 200 ಗ್ರಾಂ ಸಾಬೂನು ಬೆರೆಸಿ ಚೆನ್ನಾಗಿ ಕುದಿಸಿ ಕಲಕಬೇಕು. ನಂತರ ಇದನ್ನು ಕಂಬಳಿ ಹುಳು ಬಿದ್ದಂತಹ ಹಣ್ಣಿನ ಗಿಡಕ್ಕೆ ಸಿಂಪಡಿಸಬೇಕು. ಇದಲ್ಲದೆ ಬೇವಿನ ಜೊತೆಯಲ್ಲಿ ಬೆಳ್ಳುಳ್ಳಿಯನ್ನು ಸೇರಿಸಿದ ದ್ರಾವಣವನ್ನು ಕಂಬಳಿ ಹುಳು ನಿಯಂತ್ರಣಕ್ಕೆ ಬಳಸಬಹುದು.

10 ಕೆ. ಜಿ. ಬೇವಿನ ಚಿಗುರೆಲೆಯೊಂದಿಗೆ 250 ಗ್ರಾಂ ಒಣಗಿದ ಬೇವಿನ ಬೀಜ ಅಥವಾ 50 ಗ್ರಾಂ ಬೇವಿನ ಎಣ್ಣೆ, 1 ಕೆ.ಜಿ. ಬೆಳ್ಳುಳ್ಳಿ ಹಾಗು ಒಂದು ಕೆ.ಜಿ. ಬೇವಿನ ಕಾಂಡದ ಅಥವಾ ಬೇರಿನ ಪುಡಿ ಇವುಗಳನ್ನೆಲ್ಲ ಒಟ್ಟಾಗಿ ಸೇರಿಸಿ ಚೆನ್ನಾಗಿ ಅರೆದು ಗೊಜ್ಜನ್ನು ತಯಾರಿಸಿಕೊಳ್ಳಬೇಕು. ನಂತರ 12 ಲೀಟರ್ ನೀರನ್ನು ಬೆರೆಸಿಕೊಂಡು ತಾಮ್ರ ಅಥವಾ ಮಣ್ಣಿನ ಪಾತ್ರೆಯಲ್ಲಿ ಕಡಿಮೆ ಉಷ್ಣತೆಯಲ್ಲಿ ಇದರ ಪ್ರಮಾಣ ಅರ್ಧದಷ್ಟು ಕಡಿಮೆಯಾಗುವ ತನಕ ಕುದಿಸತಕ್ಕದ್ದು. ಈ ಮಿಶ್ರಣ ತಂಪಾದ ಮೇಲೆ ಶೋಧಿಸಿ, ಉಳಿಯುವ ವಸ್ತುವು ನಾರುಯುಕ್ತವಾಗಿರುತ್ತದೆ. ಇದನ್ನು ಮತ್ತೆ ಚೆನ್ನಾಗಿ ಜಜ್ಜಿ ಬೇವಿನ ಎಣ್ಣೆ ಹಾಗೂ ಸ್ವಲ್ಪ ಪ್ರಮಾಣದ ಅರಿಶಿನವನ್ನು ಕುದಿಸಿದ ನೀರಿನಲ್ಲಿ ಬೆರೆಸಬೇಕು. ಇದನ್ನು ಸಾಗುವಳಿಗೆ ಮುನ್ನ ಹಾಗು ಬೆಳೆಗಳ ಮೇಲೆ ಎರಚಬಹುದು. ಹೀಗೆ ಕುದಿಸಿದ ಸಾರವನ್ನು ಶೋಧಿಸಿದ ನಂತರ 4 ರಿಂದ 5 ವಾರಗಳ ಕಾಲದವರೆಗೆ ಮುಚ್ಚಳವಿರುವ ಜಾಡಿಯಲ್ಲಿ ಹಾಕಿ ಇಡಬೇಕು. ನಂತರ ಇದನ್ನು ಮತ್ತೊಮ್ಮೆ ಶೋಧಿಸಿ ಬೆಳೆಗಳಿಗೆ ಸಿಂಪಡಿಸಬಹುದು. ಇದನ್ನು ಪ್ರತಿ ಮೂರು ದಿನಗಳಿಗೊಮ್ಮೆ ಪ್ರಾರಂಭದಲ್ಲಿ ಸಿಂಪಡಿಸಿ, ಸಸ್ಯಗಳು ಬೆಳೆದಂತೆ ಪ್ರತಿ 7 ದಿನಗಳಿಗೊಮ್ಮೆ ಸಿಂಪಡಿಸಬಹುದು.



ಸಸ್ಯಗಳ ಹೇನು ನಿಯಂತ್ರಿಸಲು

ಹಸಿ ಮೆಣಸಿನ ಕಾಯಿ ಮತ್ತು ಬೆಳ್ಳುಳ್ಳಿಯನ್ನು ಸಮ ಪ್ರಮಾಣದಲ್ಲಿ ಬೆರೆಸಿಕೊಂಡು ಚೆನ್ನಾಗಿ ಜಜ್ಜಿ ಸಾರವನ್ನು ಸಿದ್ದಪಡಿಸಿಕೊಳ್ಳಬೇಕು. ಇದರ ಎರಡರಷ್ಟು ನೀರು ಬೆರೆಸಿಕೊಂಡು ಬೆಳೆಗಳ ಮೇಲೆ ಸಿಂಪಡಿಸಬೇಕು. ಇದರಿಂದ ಬೆಳೆಗಳಿಗೆ ಸಾಮಾನ್ಯವಾಗಿ ಬೀಳುವ ಹೇನು ನಿಯಂತ್ರಿಸಬಹುದು.



ಹತ್ತಿಗೆ ಬೀಳುವಂತಹ ಕೀಟಗಳನ್ನು ನಿಯಂತ್ರಿಸಲು

ಸುಮಾರು 72 ಗಂಟೆಯಷ್ಟು ಹಳೆಯದಾದ ಹಸುವಿನ ಗಂಜಲದಲ್ಲಿ ಬೆಳ್ಳುಳ್ಳಿ, ಹಸಿ ಮೆಣಸಿನ ಕಾಯಿ, ಶುಂಠಿ, ಬೇವಿನ ಎಣ್ಣೆ, ತಂಬಾಕು ಇವುಗಳನ್ನು ಹಾಕಬೇಕು. ಇದನ್ನು ಸಿಂಪಡಿಸುವುದಕ್ಕಿಂತ ಮುಂಚೆ ಸಾಬೂನಿನ ದ್ರಾವಣವನ್ನು ಬೆರೆಸಬೇಕು. 30 ರಿಂದ 40 ಮಿಲಿ ಲೀಟರ್‌ನ ಈ ಸಾರಕ್ಕೆ 15 ಲೀಟರ್ ನೀರನ್ನು ಬೆರೆಸಿ ಸಿಂಪಡಿಸಬಹುದು. ತೊಗರಿ ಬೆಳೆಗೆ 70 ಮಿಲಿ ಲೀಟರ್‌ನ ಈ ಮಿಶ್ರಣಕ್ಕೆ 15 ಲೀಟರ್‌ನಷ್ಟು ನೀರನ್ನು ಸೇರಿಸಿ ಸಿಂಪಡಿಸಬೇಕು.

ಮಿಶ್ರ ಬೆಳೆಯಿಂದ ಕೀಟ ಹತೋಟಿ

ಸಾವಯವ ವಿಧಾನದಲ್ಲಿ ಎಲೆಕೋಸು ಬೆಳೆಸುವ ರೈತರು ಮೂರು ಸಾಲು ಎಲೆಕೋಸುಗಳ ನಡುವೆ ಒಂದು ಸಾಲು ಸಾಸಿವೆ ಬೆಳೆಯುತ್ತಾರೆ. ಕೋಸಿಗೆ ಬರುವ ನೊಣಗಳು ಮೊಟ್ಟೆಯಿಡಲು ಸಾಸಿವೆಗೆ ಹೋಗಿ ಕೂರುವುದರಿಂದ ಕೋಸು ಸುರಕ್ಷಿತ.



ಟೊಮಾಟೋ ಗಿಡಗಳ ಮಧ್ಯೆ ಚೆಂಡು ಹೂವಿನ ಗಿಡ ಬೆಳೆಸಿದರೆ, ಟೊಮಾಟೋಕ್ಕೆ ಬರುವ ಹುಳ ಹಾಗೂ ರೋಗ ತಡೆಯಬಹುದೆಂಬುದು ಹಲವರ ಅನುಭವ.

ಎಕ್ಕದ ಕಷಾಯ

ಹತ್ತು ಲೀಟರ್ ನೀರಿನಲ್ಲಿ ಒಂದು ಕಿಲೋ ಎಕ್ಕದ ತಾಜ ಎಲೆಗಳನ್ನು ತುಂಡು ತುಂಡಾಗಿ ಮಾಡಿ ನೆನೆ ಹಾಕಿ, ಬಿಸಿ ನೀರಾದರೆ 24 ಗಂಟೆ ನೆನೆಸಿಟ್ಟರೆ ಸಾಕು. ತಣ್ಣೀರಾದರೆ 6 ರಿಂದ 8 ದಿನಗಳು ನೆನೆಸಿಡಿ, ನಂತರ ಕುದಿಸಿ ಕಷಾಯವನ್ನು 10 ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಬೆಳೆಗೆ ಸಿಂಪಡಿಸಬೇಕು. ಇದರಿಂದ ಎಲೆ ಕತ್ತರಿಸುವ, ಕಾಂಡ ಕೊರೆಯುವ ಹುಳಗಳು ನಿಯಂತ್ರಣವಾಗುತ್ತದೆ. ಹೀಗೆ ತಯಾರಿಸಿದ ಕಷಾಯವನ್ನು ಸಂಜೆ ವೇಳೆ ಗಿಡಗಳ ಬುಡದಲ್ಲಿ ಹಾಕಿದರೆ ಮಣ್ಣಿನಲ್ಲಿ ಅಡಗಿ ಕೂತಿರುವ ಬೇರು ತಿನ್ನುವ ಹುಳು, ಜರಿ ಹುಳು, ಕಾಂಡ ಕೊರೆಯುವ ಹುಳು ನಿಯಂತ್ರಣವಾಗುತ್ತವೆ. ನಮ್ಮ ಪೂರ್ವಿಕರು ಭತ್ತದ ಮಡಿಯಲ್ಲಿ ಇದರ ಎಲೆ ಹಾಕಿ ನಂತರ ನಾಟಿ ಮಾಡುವ ರೂಢಿ ಇತ್ತು. ಇದರಿಂದ ಮಣ್ಣು ರೋಗ ಮುಕ್ತವಾಗುತ್ತದೆಂಬ ನಂಬಿಕೆ.

ಬೇವಿನ ಪುಡಿಯಿಂದ ಧಾನ್ಯ ಸಂರಕ್ಷಣೆ

ಬೇವಿನ ಎಲೆಯ ಪುಡಿಯನ್ನು ಶೇಖರಿಸುವ ಬೀಜಗಳಿಗೆ ಬೆರೆಸಿದರೆ, ಬೀಜಗಳಿಗೆ ಬರುವ ಹುಳದ ಬಾಧೆಯಿಲ್ಲದೆ ಕಾಪಾಡಲು ಸಾಧ್ಯ ಎಂದು ಭಾರತದ ಹಾಗೂ ಪಾಕಿಸ್ಥಾನ ರೈತರ ಆಂಬೋಣ.

ಹೊಂಗೆಯಿಂದ ಹಿಲಿಯೋಥೀಸ್ ನಿರ್ವಹಣೆ

ಸಾಮಾನ್ಯವಾಗಿ ಧಾನ್ಯಗಳ ಕಾಯಿ ಕಟ್ಟಿದಾಗ ಹಿಲೀಯೋಥೀಸ್ ಅವುಗಳನ್ನು ಹಾಳು ಮಾಡುತ್ತದೆ. ಇದರಿಂದಾಗಿ ಕೆಲವು ಸಾರಿ ಇಳುವರಿ ಶೇಕಡ 15 ರಿಂದ 80 ರಷ್ಟು ನಷ್ಟವಾಗುವ ಸಂಭವವಿದೆ. ಇದಕ್ಕೆ 1 ಕೆ.ಜಿ. ಹೊಂಗೆ (*Pongamia pinnata*)ಯ ಎಲೆಗಳನ್ನು ಹಾಗೂ ಚಕ್ಕೆಯನ್ನು 5 ಲೀಟರ್ ನೀರಿನಲ್ಲಿ ನೆನಸಿ ಅರ್ಧ ಘಂಟೆಗಳ ಕಾಲ ಕುದಿಸಬೇಕು. ಈ ದ್ರಾವಣವನ್ನು ಸೋಸಿ 15 ಲೀಟರ್ ನೀರಿನೊಂದಿಗೆ ಬೆರೆಸಿ ಸಿಂಪಡಿಸಿದರೆ ಈ ಹುಳುವನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಿಸಬಹುದಾಗಿದೆ ಎಂದು ಹೇಳಿದವರು ಗುಜರಾತಿನ ಕಲಿಜಿ ಬಾಯಿ ಮಲ್‌ಜಿಬಾಯಿ ದೊಂಗಿ.

ಕಂಬಳಿ ಹುಳಕ್ಕೆ ಲಿಂಬೆ ಪಾನಕ

ಗುಜರಾತಿನ ರೈತ ಬನಿದನ್ ಮಾವ್‌ಲ್‌ಜೀ ಗದಾವಿ ಅವರು ಹೇಳುವಂತೆ ಕೂದಲಿರುವ ಎಲೆಗಳನ್ನು ಹಾಳುಮಾಡುವ ಕಂಬಳಿ ಹುಳಗಳ ಹತೋಟಿಗೆ ನೀವು ಮಾಡಬೇಕಾಗಿರುವುದಿಷ್ಟೆ, 150 ಮಿಲಿಲೀಟರ್‌ನಷ್ಟು ನಿಂಬೆಯ ರಸ ಹಾಗೂ 150 ಮಿಲಿ ಲೀಟರ್‌ನಷ್ಟು ಹುಣಸೆ ರಸದ ಮಿಶ್ರಣಕ್ಕೆ 15 ಲೀಟರ್ ನೀರನ್ನು ಬೆರೆಸಿ ಸಿಂಪಡಿಸಬೇಕು. ಇಷ್ಟು ದ್ರಾವಣ ಕಾಲು ಹೆಕ್ಟೇರಿಗೆ ಸಾಕಾಗುತ್ತದೆ. ಕನಿಷ್ಠ ಪಕ್ಷ ಮೂರು ಸಾರಿ ಸಿಂಪಡಿಸಿದರೆ ಉತ್ತಮ ಫಲಿತಾಂಶ.

ನೀರಾ (ಹೆಂಡ) ದಿಂದ ಬ್ಯಾಕ್ಟೀರಿಯಾಗಳ ನಿಯಂತ್ರಣ

ತರಕಾರಿಗಳಿಗೆ ಸಾಮಾನ್ಯವಾಗಿ ಬ್ಯಾಕ್ಟೀರಿಯಾ ಹಾಗೂ ವೈರಸ್ ರೋಗಗಳ ಕಾಟ ಬಹಳ, ಇದರ ಜತೆ ಬಿಳಿ ಹುಳು ಏಫಿಡ್ ಕೂಡ ಸಾಮಾನ್ಯ. ಇವು ಇಳುವರಿ ಇಳಿಸಿ ಬಿಡುತ್ತವೆ. ಇವಕ್ಕೆ ಉತ್ತರವಾಗಿ ಗುಜರಾತ್‌ನ ಝೋಲಾದ್ ಪ್ರಾಂತ್ಯದ ರೈತರು ನೀರಾ ರಸವನ್ನು *(Phoenix sylvestris)* ಬಳಸುತ್ತಾರೆ. 1.5 ಲೀಟರ್ ನೀರಾ ರಸಕ್ಕೆ 15 ಲೀಟರ್ ನೀರು ಬೆರೆಸಿ ಸಿಂಪಡಿಸಿದರೆ ಹುಳಗಳ ಹಾಗೂ ರೋಗದ ಬಾಧೆ ತಡೆಯಬಹುದು.

ಬೀಜ ಉಪಚಾರ

ಕರ್ನಾಟಕದ ರೈತ ಮಲ್ಲಪ್ಪ , ರಾಗಿ ಮತ್ತು ಜೋಳದ ಬೀಜವನ್ನು ಉಪಯೋಗಿಸುವ ಮೊದಲು 250 ಗ್ರಾಂ ಅಶ್ವಗಂಧಿ (*Withania somnifera)* ಬೇರಿನೊಂದಿಗೆ 50 ಗ್ರಾಂ. ವಿಷ ಉಮ್ಮತ್ತಿಯ ದತ್ತೂರದ ಎಲೆಗಳನ್ನು *(Datura metel)* ಜಜ್ಜಿ 1 ಲೀಟರ್ ನೀರನ್ನು ಬೆರೆಸುತ್ತಾರೆ. ಈ ದ್ರಾವಣವು 1ಕೆ.ಜಿ. ಬೀಜವನ್ನು ನೆನೆಸಲು ಸಾಕಾಗುತ್ತದೆ. ಈ ಬೀಜಗಳನ್ನು ಬಿತ್ತನೆಗೆ ಮುಂಚೆ ನೆರಳಿನಲ್ಲಿ ಒಣಗಿಸಬೇಕು. ಇವರು ಹೀಗೆ ಸತತವಾಗಿ ಏಳು ವರ್ಷದಿಂದ ಮಾಡುತ್ತಾ ಬಂದಿದ್ದಾರೆ. ಈಗ ಕರ್ನಾಘಟ್ಟಿಯ ಹಳ್ಳಿಯ ರೈತರು ಇದನ್ನು ಅನುಸರಿಸುತ್ತಿದ್ದಾರೆ. ಹೀಗೆ ಉಪಚರಿಸಿದ ಬೀಜಗಳು ಅದ್ಭುತವಾಗಿ ಮೊಳಕೆ ಒಡೆದಿರುವುದಲ್ಲದೆ ಕೀಟಗಳ ಬಾಧೆಯಿಂದ ಮುಕ್ತವಾಗಿವೆಯಂತೆ.

ಬೆಳೆಯ ರೋಗ ನಿಯಂತ್ರಣಕ್ಕೆ ಗಾಳಿಮರ

20 ಕೆ.ಜಿ. ಗಾಳಿಮರದ ಎಲೆಗಳನ್ನು *(Casuarina equiseci)* ನೀರಿನಲ್ಲಿ 20 ನಿಮಿಷ ಕುದಿಸಬೇಕು. ಆರಿದ ಈ ರಸವನ್ನು ಸೋಸಿ. ಇಷ್ಟು ದ್ರಾವಣ ಒಂದು ಎಕರೆಗೆ ಸಾಕಾಗುತ್ತದೆ. ಬ್ಯಾಕ್ಟೀರಿಯಾ ಹಾಗು ಶಿಲೀಂಧ್ರ ರೋಗಕ್ಕೆ ಇದು ಬಹಳ ಪರಿಣಾಮಕಾರಿ.ತಮಿಳುನಾಡಿನ ಕುರಿಂಬೆ ಸಾವಯವ ತೋಟದಲ್ಲಿ ಇದನ್ನು ಬಳಸಲಾಗುತ್ತದೆ.

ಲಂಟಾನದಿಂದ ಶಿಲೀಂದ್ರ ನಿಯಂತ್ರಣ


ಲಂಟಾನ *(Lantana camara)* ದ 5 ಕೆ.ಜಿ ಎಲೆಗಳನ್ನು 5 ಲೀಟರ್ ಹಸುವಿನ ಗಂಜಲದಲ್ಲಿ ಮೂರುದಿನ ನೆನೆಸಿ, ಇದಕ್ಕೆ 90 ಲೀಟರ್ ನೀರು ಬೆರೆಸಿ ಸಾರ ತಗ್ಗಿಸಿ ಶಿಲೀಂಧ್ರ ರೋಗದ ನಿಯಂತ್ರಣಕ್ಕೆ ಬಳಸಲಾಗುತ್ತಿದೆ ತಮಿಳುನಾಡಿನ ಕುರಿಂಬೆ ಸಾವಯವ ತೋಟದಲ್ಲಿ.

ಸಸಿಗಳಿಗೆ ಬೇವು ಮತ್ತು ಬೂದಿಯ ಉಪಚಾರ

ತಮಿಳುನಡಿನ ಪೆರಂಬದೂರಿನ ಜಿಲ್ಲೆಯ ರೈತರು ಅನಾದಿ ಕಾಲದಿಂದಲೂ ರೂಢಿಸಿಕೊಂಡಿರುವ ವಿಧಾನವೆಂದರೆ, ಭತ್ತದ ಸಸಿ ನಾಟಿ ಮಾಡುವ ಮುಂಚೆ ನೀರು ನಿಂತ ಒಂದು ಮಡಿಯಲ್ಲಿ ಬೂದಿ ಹಾಗೂ ಕುಟ್ಟಿದ / ಪುಡಿ ಮಾಡಿದ ಬೇವಿನ ಬೀಜ ಬೆರೆಸಿರುತ್ತಾರೆ. 15 ಚದರ ಅಡಿ ಮಡಿಗೆ ಅರ್ಧ ಕೆ.ಜಿ. ಪುಡಿ ಮಾಡಿದ ಬೇವಿನ ಬೀಜ ಹಾಗೂ 1 ಕೆ.ಜಿ. ಬೂದಿ ಸಾಕಾಗುತ್ತದೆ. ಈ ದ್ರಾವಣದಲ್ಲಿ 50 ಕಟ್ಟು ನಾಟಿ ಸಸಿಗಳನ್ನು ಇಡಬಹುದು. ಅರ್ಧ ಗಂಟೆಯಿಂದ 1 ಗಂಟೆ ಇಟ್ಟರೆ ಸಾಕು. ಹೀಗೆ ಉಪಚಾರ ಪಡೆದ ಸಸಿಗಳು ಕೀಟ ಹಾಗೂ ರೋಗಗಳಿಂದ ಮುಕ್ತವಾಗಿರುತ್ತವೆ.

ಮೂಲ: ಹನಿಬೀ 11(1) 2000
ಸಂಗ್ರಹ ಮತ್ತು ಅನುವಾದ: ಬಿ. ಎನ್. ಶಾರದ

ತೆಂಗಿನ ಮರಗಳ ಅಂಟು ಸೋರುವ ಕಾಯಿಲೆಗೆ ನಿಸರ್ಗ ಚಿಕಿತ್ಸೆ



ತೆಂಗಿನ ಮರಕ್ಕೆ ದುಂಬಿಯ ಬಾಧೆ ಒಂದಾದರೆ ಚೆನ್ನಾಗಿ ಫಸಲು ಬಿಡುವ ತೆಂಗಿನ ಮರಕ್ಕೆ ಅಂಟುಸೋರಿ ಟೊಳ್ಳಾಗಿ ಮುರಿದು ಬೀಳುತ್ತವೆ. ಇಂತಹ ಸಮಸ್ಯೆಗೆ ಸಿದ್ದಾಪುರ ಬಳಿಯ ರೈತ ರಮೇಶ್ ರವರು ಪ್ರಜಾವಾಣಿ ಪತ್ರಿಕೆಯ ಕೃಷಿರಂಗದಲ್ಲಿ ರೋಗವನ್ನು ತಿಳಿಸಿ ಓದುಗರಿಂದ ಈ ರೋಗಕ್ಕೆ ಔಷಧವೇನಾದರು ಗೊತ್ತಿದ್ದರೆ ತಿಳಿಸಿ ಎಂದು ಕೇಳಿದ್ದರು. ಅದಕ್ಕೆ 3 ಜನ ರೈತರು ತಮ್ಮ ಅನುಭವದಿಂದ ಕೆಲವೊಂದು ಸಲಹೆಗಳನ್ನು ನೀಡಿದರು, ಆ ಸಲಹೆಗಳು ಇಂತಿವೆ.

1. ಸಾವಯವ ಕೃಷಿಕರಾದ ಮೈಸೂರಿನ ಎ.ಪಿ. ಚಂದ್ರಶೇಖರ್ ತಿಳಿಸಿದಂತೆ 'ಇದು ಭಯಡುವಂತಹ ರೋಗವೇನಲ್ಲ. ತೆಂಗಿನ ಮರದ ಬುಡದಲ್ಲೆ ನಾಲ್ಕು ಮೂಲೆಯಲ್ಲಿ ನಾಲ್ಕು ಔಷಧ ಗಿಡಗಳನ್ನು ನೆಟ್ಟು ಆಗಿಂದಾಗ್ಗೆ ಈ ಸಸ್ಯಗಳ ಸೊಪ್ಪನ್ನೆ ಹಚ್ಚಿದರೆ ರೋಗ ವಾಸಿಯಾಗಬಹುದು ಎನ್ನುತ್ತಾರೆ. ಈ ಔಷಧ ಸಸ್ಯಗಳು ಇಂಥದೆ ಎಂದು ಏನಿಲ್ಲ. ತುಳಸಿ, ಬೇವು, ಹೊಂಗೆ, ಲಕ್ಕಿ, ಲಂಟಾನ, ಪಂಚಪತ್ರೆ, ಕಾಸರ್ಕ, ಬೆಳ್ಳುಳ್ಳಿ ಇಂತಹವುಗಳು. ಈ ರೋಗ ಬೇಗ ವಾಸಿಯಾಗಬೇಕೆಂದರೆ ಪ್ರತಿ ಮರದ ಬುಡಕ್ಕೆ 5 ಕಿಲೊ ಬೇವಿನ ಹಿಂಡಿ ಹಾಕಿ ಕಾಂಡ ಹಾಗು ಬುಡಕ್ಕೆ ದನದ ಗಂಜಲವನ್ನು ಎರಚಬೇಕು ಮತ್ತು ಗೋಡಂಬಿ ಎಣ್ಣೆ ಅಥವ ಟಾರು ಬಿಸಿ ಮಾಡಿ ಜಾಗಕ್ಕೆ ಹಾಕಬಹುದು' ಎನ್ನುವುದಾಗಿ ಚಂದ್ರಶೇಖರ್ ಅಭಿಪ್ರಾಯ ಪಡುತ್ತಾರೆ.

2. ಕೊಡಗಿನ ಗಮ್ಮನ ಕೊಲಿಯ ಡಾ. ನಂಜುಂಡಸ್ವಾಮಿಯವರ ಸಲಹೆಯಂತೆ ಶಾಖದ ಚಿಕಿತ್ಸೆಯಿಂದ ಈ ಅಂಟು ಸೋರು ರೋಗ ವಾಸಿಯಾಗುತ್ತದೆಯಂತೆ. ಅಂಟು ಸುರಿಯುವಂತಹ ರಂಧ್ರಕ್ಕೆ ಬಿಸಿನೀರನ್ನು ಹಾಕಿದರೆ ಕೀಟ, ಕ್ರಿಮಿ ಅಥವ ಶಿಲೀಂಧ್ರಗಳಿದ್ದರೆ ಅವು ನಾಶವಾಗುತ್ತವೆಯಂತೆ.

3. ಬೆಂಗಳೂರಿನ ಆರ್.ಎಸ್. ವೀರರಾಜೇಂದ್ರ ಅರಸ ಅವರ ಸಲಹೆಯಂತೆ ಒಂದು ಮುಷ್ಠಿ ಕಡಲುಪ್ಪು, ಒಂದು ಹಿಡಿ ಬೇವಿನ ಸೊಪ್ಪು, ಇಷ್ಟೆ ಪ್ರಮಾಣದ ತುಂಬೆ, ಅಷ್ಟೇ ಕರಿ ತುಳಸಿ ಮತ್ತು 4 ಬೆಳ್ಳುಳ್ಳಿ, 5 ಈರುಳ್ಳಿ, ಒಂದು ಮುಷ್ಠಿ ಅರಿಶಿನ ಇವುಗಳನ್ನೆಲ್ಲ ಸೇರಿಸಿ ಅರೆದು ಸಮ ಪ್ರಮಾಣದಲ್ಲಿ ಗಟ್ಟಿ ಸಗಣಿಯನ್ನು ಸೇರಿಸಿ ರಂಧ್ರಗಳಿಗೆ ಹಾಕಿ ಮುಚ್ಚಿದ ಮೇಲೆ ಬೂದಿಯನ್ನು ಚಿಮುಕಿಸಬೇಕು. ಅವರ ತೆಂಗಿನ ಮರಗಳು ಈ ಚಿಕಿತ್ಸೆ ಮಾಡಿದ್ದರಿಂದ ವಾಸಿಯಾಗಿದೆಯಂತೆ.

ಕೃಪೆ: ಪ್ರಜಾವಾಣಿ, ದಿನಾಂಕ, 26 ಜುಲೈ 2000

ಹಿತ್ತಲ ಗಿಡದ ಕುಟುಂಬ

Honeybee	ಇಂಗ್ಲೀಷ್
Nam Vazhi Velanmai	ತಮಿಳು
Lakasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bhuj	ಹಿಂದಿ
Khoj Bhai	ಪಂಜಾಬಿ
Makhir	ಹಿಮಾಚಲ ಪ್ರದೇಶ
Abeja	ಕೊಲಂಬಿಯಾ

ಜಾನುವಾರಿಗೆ ನಾಟಿ ಚಿಕಿತ್ಸೆಗಳು - ಶಿವಮೊಗ್ಗಿಯ ಸವಳಂಗ ರೈತರ ಅನುಭವ

ನರಡಿ ಕಾಯಿಲೆ

ಈ ಕಾಯಿಲೆ ದನ, ಕರು, ಮೇಕೆ, ಕುರಿ, ಎಮ್ಮೆ ಇವುಗಳಿಗೆ ಬರುತ್ತದೆ. ಈ ಕಾಯಿಲೆ ತುಂಬಾ ಅಪಾಯಕಾರಿಯಾದುದು. ಈ ಕಾಯಿಲೆ ಬಂದ ತಕ್ಷಣವೇ ಚಿಕಿತ್ಸೆಯನ್ನು ನೀಡಬೇಕು. ಕೆಲವೊಂದು ಪಶುಗಳು ಈ ಕಾಯಿಲೆ ಬಂದ ಅರ್ಧ ಗಂಟೆ ಒಳಗೆ ಸಾವನ್ನಪ್ಪುತ್ತವೆ. ಕೆಲವೊಂದು ನಾಟಿ ಪಶುಗಳು 3-4 ಗಂಟೆಯವರೆವಿಗೂ ಜೀವಿಸುತ್ತವೆ.

ಈ ರೋಗದ ಲಕ್ಷಣಗಳು:

ಈ ರೋಗವು ಎರಡು ಲಕ್ಷಣಗಳನ್ನು ಹೊಂದಿರುತ್ತದೆ. ಒಂದು ರೀತಿಯ ಲಕ್ಷಣವೆಂದರೆ ಪಶುವಿನ ಮುಖ ಒಣಗುತ್ತದೆ, ಕಣ್ಣಿನ ಬಳೆಗಳು ಕಾಣುತ್ತವೆ. ಇದನ್ನು ಒಣನರಡಿ ಎಂದು ಕರೆಯುತ್ತಾರೆ. ಇನ್ನೊಂದು ರೀತಿಯ ಲಕ್ಷಣವೆಂದರೆ ಕತ್ತಿನ ಭಾಗದಿಂದ ಎದೆಯ ಭಾಗದವರೆಗೆ ಹರಡಿರುವಂತಹ ನರಗಳು ಊದುತ್ತವೆ. ಅವುಗಳ ಬಡಿತ ಹೆಚ್ಚಾ ಗುತ್ತದೆ. ದೇಹದ ಯಾವುದಾದರೂ ಒಂದು ಭಾಗದಲ್ಲಿ ಗಂಟು ಕಾಣುತ್ತದೆ. ಕೆಲವೊಂದು ಪಶುಗಳು ಆಹಾರವನ್ನು ಸೇವಿಸುತ್ತವೆ, ಕೆಲವೊಂದು ಪಶುಗಳು ಆಹಾರ-ನೀರು ಏನನ್ನೂ ಸೇವಿಸುವುದಿಲ್ಲ, ಚರ್ಮ ಸುಕ್ಕಲುಗಟ್ಟುತ್ತದೆ, ಕೂದಲು ನಿಮಿರುತ್ತದೆ. ಕೆಲವೊಂದು ಬಾರಿ ಈ ಯಾವುದೇ ಲಕ್ಷಣ ಕಾಣದಿದ್ದರೂ ಸಹ ನರಗಳು ಊದುತ್ತಾ ಬಡಿತ ಹೆಚ್ಚಾಗುತ್ತದೆ. ಇದು ಈ ರೋಗದ ಸಾಮಾನ್ಯ ಲಕ್ಷಣವಾಗಿರುತ್ತದೆ. ಇದನ್ನು ಸುಕ್ಕು ನರಡಿ ಎನ್ನುತ್ತಾರೆ. ಎಷ್ಟೋ ಪಶುಗಳು ಈ ರೋಗದ ಸಾಮಾನ್ಯ ಲಕ್ಷಣಗಳನ್ನು ಕಂಡುಕೊಳ್ಳುವಷ್ಟರಲ್ಲಿಯೇ ಸಾವನ್ನಪ್ಪುತ್ತವೆ. (ಈ ಕಾಯಿಲೆಯ ಹೆಸರನ್ನು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ಕರೆಯುತ್ತಾರೆ).

ಈ ರೋಗವನ್ನು ಗುಣಪಡಿಸುವುದು:

ತಪ್ಪಿ ಚಕ್ಕೆ, ಕಾಡುಮೆಣಸು, ವಂಗಲು ಚಕ್ಕೆ, ಮೆಣಸಿನ ಕಾಯಿ, ಮೆಣಸಿನ ಕಾಳು, ಒಣ ಶುಂಠಿ, ಸಾಸುವೆ, ಇವು ಈ ರೋಗಕ್ಕೆ ಬಳಸುವಂತಹ ಪದಾರ್ಥಗಳು. ತಪ್ಪಿ ಚಕ್ಕೆ, ವಂಗಲು ಚಕ್ಕೆಯನ್ನು 1/2 ಕೆ.ಜಿ. ಯಷ್ಟು ಸಮ ಪ್ರಮಾಣದಲ್ಲಿ ಕಾಡು ಮೆಣಸು ಅಥವಾ ಮೆಣಸಿನ ಕಾಳು 1/4 ಕೆ.ಜಿ.ಯಷ್ಟು, 56 ಮೆಣಸಿನ ಕಾಯಿ, 34 ಒಣಶುಂಠಿ, 10 ಚಿಟಕಿಯಷ್ಟು ಸಾಸುವೆಯನ್ನು ಕುಟ್ಟಿ, ಅರೆದು ಕಷಾಯ ಮಾಡಿ ದಿನಕ್ಕೆ 3 ಗೊಟ್ಟ ಹಾಕಬೇಕು, ಇದು ಒಂದು ರೀತಿಯ ಔಷಧೋಪಚಾರ.

ಇನ್ನೊಂದು ರೀತಿಯ ಔಷಧೋಪಚಾರವೆಂದರೆ ಚೌಡಿಚಕ್ಕೆ, ತಪ್ಪಿ ಚಕ್ಕೆ, ಬೆಳ್ಳುಳ್ಳಿ, ಸೋಂಪಿನ ಕಾಳು, ಮೆಣಸಿನ ಹಣ್ಣು ಇವುಗಳನ್ನು ಅರೆದು ಕಷಾಯ ಮಾಡಿ ಪಶುವಿನ ಕಿವಿಗೆ, ಕಣ್ಣಿಗೆ ಬಿಡುವುದು ಮತ್ತು ಹೊಟ್ಟೆಗೆ ಕುಡಿಸುವುದು. ಇದಕ್ಕೆ ಇಷ್ಟು ಪ್ರಮಾಣವೆಂದಿಲ್ಲ, ಪಶುವಿನ ವಯಸ್ಸಿನ ಆಧಾರದ ಮೇಲೆ ಕುಡಿಸಬಹುದು.

ಸಲೆ ರೋಗ

ರೋಗದ ಲಕ್ಷಣಗಳು:

ಈ ರೋಗವು ನಾಲ್ಕು ರೀತಿಯಲ್ಲಿ ಬರುತ್ತದೆ. ಅವುಗಳೆಂದರೆ,

1) *ಆನ್‌ಸಲೆ:* ಇದರಿಂದಾಗಿ ಪಶುವು ಕುಂಟಾಗುತ್ತದೆ ಮತ್ತು ಜೊಲ್ಲು ಸುರಿಸುತ್ತದೆ.

2) *ಕುಟ್ಟುಸಲೆ:* ಪಶುವಿನ ನಾಲ್ಕು ಕಾಲುಗಳು ಹಿಡಿಯುತ್ತವೆ. ಮಲಗಿದರೆ ಮೇಲಕ್ಕೆ ಏಳುವುದಿಲ್ಲ.

3) *ಸಲೆ :* ಪಶುವು ಜೊಲ್ಲು ಸುರಿಸುತ್ತದೆ, ಹೊಟ್ಟೆ ಉಬ್ಬರ , ಗಂಟಲು ನೋವು ಬರುತ್ತದೆ, ಆಹಾರ ಸೇವಿಸುವುದಿಲ್ಲ.

4) *ಗುಂಡಿಸಲೆ :* ಈ ರೋಗವು ಎಮ್ಮೆಗಳಿಗೆ ಬರುತ್ತದೆ. ಈ ರೋಗವು ಮಳೆಗಾಲದ ಪ್ರಾರಂಭದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹೊಂಡದ ಮಣ್ಣು ನೀರನ್ನು ಹೆಚ್ಚಾಗಿ ಕುಡಿಯುವುದರಿಂದ, ಚಿಗುರು ಮೇವಿನ ಜೊತೆಯಲ್ಲಿ ಮಣ್ಣನ್ನು ತಿನ್ನುವುದರಿಂದ ಹಾಗೂ ಮಣ್ಣನ್ನು ತಿನ್ನುವಂತಹ ಪಶುಗಳಿಗೆ ಈ ರೋಗವು ಬರುತ್ತದೆ.

ಔಷಧೋಪಚಾರ:

ಒಂದು ಹಿಡಿ ತೊಟ್ಟಿ ಸೊಪ್ಪು (*Capparis brevispina*), ಒಂದು ಹಿಡಿ ಇಸಗೆ ಸೊಪ್ಪು , ಒಂದು ಹಿಡಿ ಮಲ್ಲಿಗೆ ಸೊಪ್ಪು , ಕರಿಲಕ್ಕಿ ಸೊಪ್ಪು, ಬೆಳ್ಳುಳ್ಳಿ 10 ಬೇಳೆ, ಮೂರು ಮೆಣಸಿನ ಕಾಯಿ, ಒಂದು ಹಿಡಿ ಆಜ್ಞನ (*Carum copticum*) ಇವುಗಳನ್ನೆಲ್ಲಾ ಚೆನ್ನಾಗಿ ಅರೆದು ಬಿಸಿ ನೀರಿನಲ್ಲಿ ದಿನಕ್ಕೆ ಮೂರು ಬಾರಿ ಗೊಟ್ಟದಲ್ಲಿ ಕುಡಿಸಬೇಕು. ಹಾಗೂ ಈ ಕಾಯಿಲೆ ವಾಸಿಯಾದ 3 -4 ದಿನಗಳ ಕಾಲ ಬಿಸಿನೀರನ್ನು ಕೊಡಬೇಕು. ಇನ್ನೊಂದು ರೀತಿಯ ಔಷಧ ಕ್ರಮವೆಂದರೆ ಹರಳೆ ಸೊಪ್ಪು , ಹಿಪ್ಪೇ (*Bassia latifolia*) ಚೆಕ್ಕೆ, ತಪಸಿ (*Holoptelia integrifolia*) ಕುಡಿ, ಈ ಮೂರನ್ನೂ ಒಂದು ಅಂದಾಜಿನ ಪ್ರಮಾಣದಲ್ಲಿ ಮಿಶ್ರಮಾಡಿ ಕಷಾಯ ತಯಾರಿಸಿ ದಿನಕ್ಕೆ 3 ಗೊಟ್ಟ ಹಾಕಬೇಕು.

ಕೆಚ್ಚಲ ಬಾವು

ಈ ರೋಗವು ಸಾಮಾನ್ಯವಾಗಿ ನಾಟಿ ದನಗಳಿಗೆ ಬರುವುದಿಲ್ಲ, ಬಂದರೂ ಶೇಕಡ 1 ರಷ್ಟು ಬರಬಹುದು. ಇದು ಹೆಚ್ಚಿನದಾಗಿ ಹೈಬ್ರಿಡ್ ತಳಿ ಹಸುಗಳಿಗೆ ಬರುತ್ತದೆ. ಸಾಮಾನ್ಯವಾಗಿ ಹೆಚ್ಚು ಹಾಲನ್ನು ಕೊಡುವಂತಹ ದನಗಳಿಗೆ ಬರುತ್ತದೆ. ಈ ರೋಗ ಬರಲು ಕಾರಣವನ್ನು ವಿವಿಧ ಪ್ರದೇಶಗಳ ಜನರು ವಿವಿಧ ರೀತಿಯಲ್ಲಿ ಅರ್ಥೈಸಿಕೊಂಡಿದ್ದಾರೆ. ಮಲೆನಾಡಿನ ಜನರ ಪ್ರಕಾರ ಹಸುಗಳು ಗರ್ಭ ಧರಿಸಿದ ಮೇಲೆ ಕೆಚ್ಚಲಿನಲ್ಲಿ ಇರುವಂತಹ ರಕ್ತ ಹಾಲಾಗದೆ ಹಾಗೇ ಉಳಿದು ಗಡ್ಡೆಯಾಗುತ್ತದೆ. ಬಯಲು ಸೀಮೆಯವರ ಪ್ರಕಾರ ಪಶುಗಳು ತಮ್ಮ ಕೆಚ್ಚಲನ್ನು ಸಗಣಿ ಮೇಲೆ ಹಾಕಿ ಮಲಗುವುದರಿಂದ ಸಗಣಿಯಲ್ಲಿರುವ ಬ್ಯಾಕ್ಟೀರಿಯಾಗಳಿಂದ ಈ ರೋಗ ಬರುತ್ತದೆ.

ಈ ರೋಗದ ಲಕ್ಷಣ :

ಹಾಲನ್ನು ಕೊಡುವಂತಹ ಹಸು ಅಥವಾ ಎಮ್ಮೆಯ ಕೆಚ್ಚಲು ತುಂಬಾ ಗಟ್ಟಿಯಾಗಿರುತ್ತದೆ. ಹಸುಗಳು ಕರುಗಳಿಗೆ ಸರಿಯಾಗಿ ಕುಡಿಸುವುದಿಲ್ಲ. ಹಾಲನ್ನು ಕರೆಸುವುದು ಕಷ್ಟ. ಬಾವು ಬಂದಿರುವಂತಹ ಮೊಲೆಯ ತೊಟ್ಟಿನಲ್ಲಿ ಹಾಲಿನ ಬದಲು ರಕ್ತ ಬರುತ್ತದೆ ಮತ್ತು ಗಟ್ಟಿಯಾಗಿ ಪೇಸ್ಟ್ ತರಹದ ರಕ್ತ ಮಿಶ್ರಿತ ಹಾಲು ಬರುತ್ತದೆ.

ಚಿಕಿತ್ಸಾ ಕ್ರಮ:

150 ಗ್ರಾಂ ಚಟ್ಲೆ ಸೊಪ್ಪು, 5 ಕೆಂಪು ಈರುಳ್ಳಿ, 5 ಕೊಂಬು ಅರಿಶಿನ ಇವುಗಳನ್ನೆಲ್ಲಾ ಸೇರಿಸಿ ಅರೆದು ಪೇಸ್ಟ್ ತರಹ ಮಾಡಿ, ಪಶುವಿನ ಕೆಚ್ಚಲಿನ ಭಾಗಕ್ಕೆ ಹಚ್ಚಿದರೆ ಒಂದು ಅಥವಾ ಎರಡು ದಿನಗಳಲ್ಲಿ ವಾಸಿಯಾಗುತ್ತದೆ.

ಆಹಾರ ಸೇವಿಸದೆ ಇರುವುದಕ್ಕೆ

ಕೆಲವೊಂದು ದನಕರುಗಳು ಆಹಾರ ಸರಿಯಾಗಿ ಸೇವಿಸುವುದಿಲ್ಲ., ಹುಲ್ಲನ್ನು ಅಗಿದು ಉಗಿಯುತ್ತವೆ. ನೀರನ್ನು ಸರಿಯಾಗಿ ಕುಡಿಯುವುದಿಲ್ಲ. ಇದರಿಂದ ಪಶುಗಳು ಬಡಕಲಾಗುತ್ತವೆ.

ಚಿಕಿತ್ಸಾ ಕ್ರಮ: ಪರಂಗಿ ಹಣ್ಣು, ಪಚ್ಚಕರ್ಪೂರ ಇವುಗಳನ್ನು 15 ದಿನಗಳವರೆಗೆ ತಿನ್ನಿಸಿದರೆ ಪಶುಗಳು ಚೆನ್ನಾಗಿ ಮೇವು ತಿಂದು ಬಲಿಷ್ಠವಾಗುತ್ತದೆ. ಈ ಔಷಧ ಕ್ರಮದಿಂದ ಬೇರೆ ರೋಗಗಳು ಬರುವುದಿಲ್ಲ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಹೊಟ್ಟೆ ಉಬ್ಬರ

ಹೊಟ್ಟೆ ಉಬ್ಬರವು ಪಶುಗಳಿಗೆ ಬರುವಂತಹ ಸಾಮಾನ್ಯ ಕಾಯಿಲೆ. ಪಶುಗಳು ಆಹಾರ ತಿನ್ನುವಲ್ಲಿ ವ್ಯತ್ಯಾಸವಾದಾಗ, ಉದಾಹರಣೆಗೆ ಬಯಲು ಸೀಮೆಯಲ್ಲಿ ಬೇಸಿಗೆಯಲ್ಲಿ ಒಣ ರಾಗಿ ಹುಲ್ಲನ್ನು ತಿನ್ನುವುದು. ಹಾಗೇ ಮಳೆಗಾಲದಲ್ಲಿ ಎಳೆಯ ಹಸಿರು ಚಿಗುರನ್ನು ಆತುರಾತುರವಾಗಿ ಪಶುಗಳು ತಿನ್ನುವುದರಿಂದ ಆಹಾರ ಸರಿಯಾಗಿ ಜೀರ್ಣವಾಗದೆ ಹೊಟ್ಟೆ ಉಬ್ಬರ ಬರುತ್ತದೆ. ಆಗ ಹಸು ಮೇವನ್ನು ಮತ್ತು ನೀರನ್ನು ಬಿಡುತ್ತದೆ, ತುಂಬ ಬುಸುಗುಟ್ಟುತ್ತದೆ.

ಚಿಕಿತ್ಸಾ ಕ್ರಮಗಳು:

ಆಜ್ವನ, ಬಿಳಿ ಈರುಳ್ಳಿ, ಮೆಣಸಿನ ಕಾಳು, ಶುಂಠಿ, ಬೆಲ್ಲ ಇವುಗಳನ್ನು ಚೆನ್ನಾಗಿ ಅರೆದು ಬಿಸಿನೀರಿನಲ್ಲಿ ಒಂದು ಗೊಟ್ಟ ಕುಡಿಸಿದರೆ ಸಾಕು ಒಂದು ಗಂಟೆಯಲ್ಲಿ ಹೊಟ್ಟೆ ಉಬ್ಬರ ಇಳಿದು ಹೋಗುತ್ತದೆ.

ನಾವಳಂಗ ಪ್ರಯೋಗ ಸ್ಪಂದನ ಸಂಸ್ಥೆಯು ನಡೆಸಿದ ಔಷಧಿ ಸಸ್ಯಗಳು ಮತ್ತು ನಾಟಿ ವೈದ್ಯಕೀಯ ಪದ್ಧತಿಯ ಮೇ 12-13 ಕಾರ್ಯಾಗಾರದಲ್ಲಿ ರೈತರ ಗುಂಪು ಚರ್ಚೆಯಲ್ಲಿ ಬಂದಂತಹ ವಿಷಯ.

ಸಂಗ್ರಹ : ಚಿತ್ರಶೇಖರ್ ಡಿ.ಎಂ.

ಹೊಟ್ಟೆ ಹುಳ ನಿವಾರಣೆಗೆ

ಬಯಲು ಸೀಮೆಯಿಂದ ತಂದ ಎಮ್ಮೆಗಳು ಮಲೆನಾಡಿನ ಪ್ರಾಂತ್ಯದಲ್ಲಿ ಕರು ಹಾಕಿದಾಗ ಆ ಕರುಗಳಿಗೆ ಹೊಟ್ಟೆ ಹುಳುವಿನ ಬಾಧೆ ಸರ್ವೆ ಸಾಮಾನ್ಯ. ಇಲ್ಲಿನ ಅತಿ ಮಳೆ, ಹವಾಮಾನದ ವೈಪರೀತ್ಯಕ್ಕೊ ಏನೊ ಬಹುಪಾಲು ಎಮ್ಮೆ ಕರುಗಳು ಹೊಟ್ಟೆ ಹುಳುವಿನಿಂದ ಒಂದು ವರ್ಷದಲ್ಲೇ ಸಾಯುವುದು ಖಂಡಿತ. ಪಶು ವೈದ್ಯರು ಇದಕ್ಕೆ, ಪ್ರತೀ ತಿಂಗಳು ಹೊಟ್ಟೆ ಹುಳುವಿನ ಮಾತ್ರೆ ಹಾಕಬೇಕೆನ್ನುತ್ತಾರೆ.ಇದು ಕಷ್ಟಸಾಧ್ಯ. ಆದರೆ, ಇದಕ್ಕೆ ಕುಂಬರಕೋಡು ಜಗದೀಶ ಕಂಡುಕೊಂಡ ಪರಿಹಾರ ಸರಳವೂ, ಅಷ್ಟೇ ಪರಿಣಾಮಕಾರಿಯಾಗಿರುವಂತಹದ್ದು. ಮನೆಯ ಸುತ್ತ ನಾಟೀ ಬಿಳಿ ಹಾಗಲ ಬೆಳೆಸಿ, ಪ್ರತಿದಿನ ಎರಡು ಹಾಗಲ ಎಲೆಯನ್ನು ತಿಕ್ಕಿ ಎಮ್ಮೆ ಕರುವಿಗೆ ತಾಯಿ ಹಾಲು ಕುಡಿಯಲು ಬಿಡುವ ಮುನ್ನ ತಿನ್ನಿಸಬೇಕು. ತಾಯಿ ಹಾಲು ಕುಡಿಯುವ ಆತುರದಲ್ಲಿ ಕಹಿಯನ್ನೂ ಲೆಕ್ಕಿಸದೆ ಕರು ಹಾಗಲದ ಎಲೆಯನ್ನು ನುಂಗುವುದು. ಇದರಿಂದ ಎಮ್ಮೆಕರು ಹೊಟ್ಟೆ ಹುಳುವಿನ ಬಾಧೆಯಿಂದ ನರಳಿ ಸಾಯುವುದು ತಪ್ಪುವುದು ಮಾತ್ರವಲ್ಲ ಆಗಾಗ್ಗೆ ಬರುವ ಭೇದಿಗೂ ರಾಮಬಾಣವಾಗಿರುವುದನ್ನು ಜಗದೀಶ ಕಂಡುಕೊಂಡಿರುವರು. ಅತೀ ಮಳೆಯಲ್ಲಿ ಎಮ್ಮೆ ಕರುಗಳಿಗೆ ಈ ಹಾಗಲ ಎಲೆಯಿಂದ ಥಂಡಿಯಾಗುವುದಾದಲ್ಲಿ ಒಣಗಿಸಿ ತಿನ್ನಿಸಬಹುದು. ಪ್ರತಿದಿನ ಸಿಗದಿದ್ದಲ್ಲಿ ಎರಡು ದಿನಕ್ಕೊಮ್ಮೆ ತಿನ್ನಿಸಿದರೂ ಸಾಕು. ಈ ನಾಟಿ ಚಿಕಿತ್ಸೆಯನ್ನು ಜಗದೀಶ ಅವರಮ್ಮನಿಂದ ಕಲಿತರೆ ಅವರಮ್ಮ ಅಜ್ಜಿಯಿಂದ ಕೇಳಿ ತಿಳಿದಿದ್ದರಂತೆ. ಇದು ಮನೆ ಮಕ್ಕಳಿಗೂ ಹೊಟ್ಟೆ ಹುಳುವಿಗೆ ಪರಿಹಾರವಾಗುವ ಸಾಧ್ಯತೆ ಇಲ್ಲದಿಲ್ಲ ಎಂಬುದು ಜಗದೀಶರ ಅಭಿಪ್ರಾಯ.

ಟಿ.ಎಸ್. ಜಗದೀಶ, ಕಮ್ಮರಡಿ



ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆ

ಪ್ರೊ. ಅನಿಲ್ ಗುಪ್ತ ನೇತೃತ್ವದ ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (The National Innovation Foundation) ಏರ್ಪಡಿಸುರುವ ಈ ಮೇಲಿನ ಸ್ಪರ್ಧೆಯಲ್ಲಿ ಭಾಗವಹಿಸಲು ಕೊನೆಯ ದಿನಾಂಕವನ್ನು ನವಂಬರ್ ೩೦ರ ವರೆಗೆ ಮುಂದೂಡಲಾಗಿದೆ. ಈ ಸ್ಪರ್ಧೆಯಲ್ಲಿ ಬಂದ ಅತ್ಯುತ್ತಮ ಅನುಶೋಧನೆಗಳಿಗೆ ರೂ.50,000=00 ಮೊದಲ ಬಹುಮಾನ, ರೂ.25,000=00 ಎರಡನೆಯ ಬಹುಮಾನ ಮತ್ತು ರೂ.10,000=00 ಮೂರನೇ ಬಹುಮಾನ ನೀಡಲಾಗುವುದು. ಜೊತೆಗೆ ಈ ರೀತಿಯ ಅನುಶೋಧನೆಯ ಹುಡುಕಾಟಕ್ಕೆ ನೆರವು ನೀಡಿದವರಿಗೆ ರೂ.೧೦೦೦ದ ಐದು ನೂರಕ್ಕೂ ಹೆಚ್ಚು ಪ್ರೋತ್ಸಾಹ ಬಹುಮಾನಗಳನ್ನು ಇಡಲಾಗಿದೆ. ಆಸಕ್ತರು ಪ್ರೊ. ಅನಿಲ್ ಗುಪ್ತ ರವರನ್ನು ಸಂಪರ್ಕಿಸಬಹುದು.

ಸಾಮುದಾಯಿಕ ಭೂಮಿ ಮತ್ತು ಗ್ರಾಮೀಣ ಆರ್ಥಿಕತೆ

- ಸಂವಾದ ಸಂಸ್ಥೆಯ ಸಹಕಾರದಿಂದ
ಮಂಜುನಾಥ್ ಎಂ. ಅದ್ದೆ

ಸಾಮೂಹಿಕ ಭೂಮಿ ಎಂದರೆ ಇಡೀ ಸಮೂಹ, ಯಾವ ಭೇದಗಳಿಲ್ಲದೆ, ತನ್ನದು ಎಂದು ಪರಿಭಾವಿಸಿಕೊಂಡು ಅದರ ಆಳಿವು -ಉಳಿವಿಗೆ ತಾನೇ ಜವಾಬ್ದಾರಿ ಹೊತ್ತುಕೊಂಡು ಅದರ ಉತ್ಪನ್ನಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳ ಬಹುದಾದ ಸಾಧ್ಯತೆಗಳಿರುವ ಭೂಮಿ. ಇದು ಗೋಮಾಳವಾಗಿರಬಹುದು, ಗುಂಡು ತೋಪುಗಳು, ನಾರವಾಳ, ಕೆರೆಯ ಅಂಗಳ, ಬೆಟ್ಟಗುಡ್ಡಗಳು, ಸ್ಮಶಾನ ಹೀಗೆ ಇವೆಲ್ಲವನ್ನೂ ಸಾಮೂಹಿಕ ಭೂಮಿ ಎಂದೇ ಗುರುತಿಸ ಬೇಕಾಗುತ್ತದೆ.

ಭಾರತದ ಸಾಮುದಾಯಿಕ ಭೂಮಿಗಳ ಮೇಲೆ ಮಾರುಕಟ್ಟೆಯ ಮನೋಭಾವಗಳು ಬೆಳೆದದ್ದು ಬ್ರಿಟೀಷರ ಆಡಳಿತದಲ್ಲಿ. ಆಗಿನಿಂದ ಈ ತನಕ ಸಾಮೂಹಿಕ ಭೂಮಿಗಳು ನಿರಂತರವಾಗಿ ಕ್ಷೀಣಿಸುತ್ತಾ ಹೋಗುತ್ತಲಿವೆ. ಇಲ್ಲಿಯ ಮೇಲ್ವರ್ಗದ ಜನರ ವೈಯಕ್ತಿಕ ಆಮಿಷಗಳು ಒಂದು ಕಡೆ ಈ ಭೂಮಿಗಳ ಮೇಲೆ ಅತಿಕ್ರಮಣ ನಡಸಿದರೆ, ಸರ್ಕಾರದ ಧೋರಣೆ ಮತ್ತು ನೀತಿಗಳು ಇನ್ನೊಂದು ಕಡೆ ಈ ಭೂಮಿಗಳನ್ನು ಶೋಷಿಸುತ್ತಲಿವೆ. ಈ ಶೋಷಣೆಯ ಪರಿಣಾಮ ಕೇವಲ ಭೂಮಿಯ ಮೇಲಿಲ್ಲ. ಇದು ನೇರವಾಗಿ ಗ್ರಾಮೀಣ ಪರಿಸರದಲ್ಲಿ ಬದುಕುವ ಬಡವರ ಮೇಲೆ, ಕುಶಲ ಕರ್ಮಿಗಳ ಮೇಲೆ, ಸಣ್ಣ ರೈತರ ಮೇಲೆ ಪರಿಣಾಮ ಉಂಟುಮಾಡುತ್ತದೆ.

ಸಾಮೂಹಿಕ ಭೂಮಿ ಎಂಬುದು ಕೃಷಿ, ಪಶುಸಂಗೋಪನೆಗಳ ಬೆನ್ನೆಲುಬಿನಂತೆ. ಒಂದು ಕಡೆ ಫಲವತ್ತತೆ ತಡೆಯಲು ಈ ಭೂಮಿ ಅಗತ್ಯವಿದ್ದರೆ ಇನ್ನೊಂದು ಕಡೆ, ಔಷಧಿ ಸಸ್ಯಗಳು, ಕೃಷಿ ಸಲಕರಣೆಗಳು, ಕುರಿ ಆಡು ದನಗಳಿಗೆ ಮೇವಿನ ತಾಣಗಳಿವು. 1977-78 ರಲ್ಲಿ ಭಾರತದ ಜಾನುವಾರುಗಳ ಆಹಾರ ಪ್ರಮಾಣದಲ್ಲಿ ಶೇಕಡ 58.5 ಸಾಮೂಹಿಕ ಭೂಮಿಗಳಿಂದ ಬಂದದ್ದು, ಇದರಲ್ಲಿ ಪರಿಶಿಷ್ಟರು, ಬುಡಕಟ್ಟು ಜನರು ಹಾಗೂ ಹಿಂದುಳಿದ ಜಾತಿಯವರ ಆವಲಂಬನೆ ಶೇಕಡ 70 ಎಂದು ದಿಗ್ವಜಯ ಸಿಂಗ್‌ರ ವರದಿಯು ತಿಳಿಸುತ್ತದೆ. ಹಾಗೆಯೇ ಮುಂಬರುವ ದಿನಗಳಲ್ಲಿನ ಮತ್ತು ಸದ್ಯದ ಪ್ರಾಕೃತಿಕವಾಗಿ ಭೀಕರವಾದ ಮಾಲಿನ್ಯಗಳನ್ನು ತಡೆಯುವಲ್ಲಿ ಕೂಡ ಈ ಭೂಮಿಯ ಅಗತ್ಯ ಕಡಿಮೆಯದಲ್ಲ. ಗಾಳಿ, ನೀರು, ಮಣ್ಣಿನ ಮಲಿನತೆಗಳನ್ನು ನಿವಾರಿಸುವಲ್ಲಿ ಈ ಭೂಮಿ ತನ್ನದೇ ಕಾಣಿಕೆಯನ್ನು ಹಿಂದಿನಿಂದಲೂ ನೀಡಿದೆ. ಸಾವಯವ ಕ್ರಿಯೆಗೆ ಸಹಕಾರಿಯಾಗಿದೆ.

ಇಂದಿನ ಭಾರತದ ಆರ್ಥಿಕತೆಯ ಏಕಮುಖ ಬೆಳವಣಿಗೆಗಳು ಸಾಮೂಹಿಕ ಭೂಮಿಯ ಬಗ್ಗೆ ದಿವ್ಯ ನಿರ್ಲಕ್ಷ್ಯ ತಾಳಿವೆ. ಇಷ್ಟೇ ಅಲ್ಲದೆ ಸಾಮೂಹಿಕ ಭೂಮಿಗಳನ್ನು ಜನರಿಂದ ಕಿತ್ತುಕೊಂಡು ತನಗೆ ಬೇಕೆನಿಸಿದ ಯೋಜನೆಗಳಿಗಾಗಿ ನಿರಂತರವಾಗಿ ಬಳಸುತ್ತಾ ಬರುತ್ತಿದೆ. ಎಪ್ಪತ್ತರ ದಶಕಗಳಿಂದ ಈಚೆಗೆ ಸಮೂಹ ಭೂಮಿಗಳ ಉತ್ಪಾದಕ ಶಕ್ತಿ ಮತ್ತು ಎಲ್ಲೆಯ ಸ್ವರೂಪಗಳ ಮೇಲೆ ಅಗಾಧ ಪರಿಣಾಮ ಉಂಟಾಗಿದೆ. ಈ ರೀತಿಯ ಪರಿಣಾಮಗಳೆಲ್ಲಾ ಒಂದಲ್ಲಾ ಒಂದು ವಿಧದಲ್ಲಿ ನೇರವಾಗಿ ಗ್ರಾಮೀಣ ಬಡವರ ಮೇಲೆ ಪರಿಣಾಮ ಬೀರಿವೆ. ಈಗ ಆದಾಯದ ಪ್ರಮಾಣದಲ್ಲಿ ಹೆಚ್ಚಳ ಉಂಟಾಗಿದ್ದರೂ ಕೂಡ ಬದಲಾದ ಮಾರುಕಟ್ಟೆಯ ಮೌಲ್ಯಕ್ಕೆ ಸರಿಸಾಟಿಯಾಗಿ ನಿಂತು ಬಡವರು ಉರುವಲು, ಮೇವು, ಸಣ್ಣ ಪಶು ಸಲಕರಣೆಗಳನ್ನು ಕೊಂಡು ಬದುಕಲು ಆಗುತ್ತಿಲ್ಲ. ಇದರಿಂದ ಜನತೆಯ ಪಾರಂಪರಿಕ ಶಕ್ತಿಗಳು ನಾಶವಾಗುತಿದ್ದರೆ, ಅವರ ನೆಮ್ಮದಿ ಕದಡುತ್ತಿದ್ದರೆ ಇನ್ನೊಂದು ಕಡೆ ಬೇಕಿಲ್ಲದ ಸಮಸ್ಯೆಗಳು, ಭಾದೆಗಳು, ಸಂಪತ್ತಿನ ವ್ಯವಸ್ಥಿತ ಕೊಳ್ಳೆಯ ಸಂಚುಗಳು ಮೈಗೆ ಸುತ್ತಿಕೊಳ್ಳುತ್ತವೆ.


1947 ರಿಂದಲೂ ಭಾರತ ಸರ್ಕಾರವಾಗಲೀ ಅದರ ಅಂಗ ಸರ್ಕಾರಗಳಾಗಲೀ ಈ ಭೂಮಿಗಳನ್ನು ಜನತೆಯ ಭೂಮಿಗಳನ್ನಾಗಿ, ಅವರ ಅನುಕೂಲಕ್ಕಾಗಿ ಅಭಿವೃದ್ಧಿ ಪಡಿಸುವ ರಚನಾತ್ಮಕ ಕಾರ್ಯಕ್ರಮಗಳನ್ನಾಗಲೀ ರೂಪಿಸದಿರುವುದು ಶೋಚನೀಯ. ಒಂದು ಕಡೆ ಸರ್ಕಾರವೇ ಅರಣ್ಯ, ಪಾಳುಭೂಮಿ, ಹುಲ್ಲುಗಾವಲುಗಳನ್ನು ನೈಸರ್ಗಿಕ ಆಧಾರದ ಉದ್ಯಮಗಳಿಗೆ ವಿವೇಚನಾರಹಿತವಾಗಿ ಮನಸ್ಸಿಗೆ ತೋಚಿದ ಬೆಲೆಗೆ ಕೊಡುತ್ತಿದ್ದರೆ, ಇನ್ನೊಂದು ಕಡೆ ಬಡವರಿಗಾಗಿ ಉಳುವವನೆ ಭೂಮಿಯ ಒಡೆಯ ಯೋಜನೆ ರೂಪಿಸಿ ಆ ಭೂಮಿಯು ಶ್ರೀಮಂತರ ಕೈಸೇರುವಂತೆ ಮಾಡಿದೆ. ವರ್ಷಕ್ಕೆ 1 ಎಕರೆಗೆ ಒಂದು ರೂಪಾಯಿ ಬೆಲೆಗೆ ಹರಿಹರ ಪಾಲಿಫೈಬರ್ಸ್‌ಗೆ ಭೂಮಿ ನೀಡಿದ್ದು ಬಗರ್ ಹುಕುಂ ಹಂಚಿಕೆಯಂತೆ ಭೂಮಿ ಇಂದು ಫಲಾನುಭವಿಗಳಿಂದ ಶೇಕಡ 58 ರಷ್ಟು ಶ್ರೀಮಂತರ ಕೈಸೇರಿದೆ. ಒಂದು ಕಡೆ ಸಾಮಾಜಿಕ ಅರಣ್ಯ ಯೋಜನೆಯ ಹೆಸರಿನಲ್ಲಿ ಪ್ರತಿ ಜಿಲ್ಲೆಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆದರೆ ಅರಣ್ಯ ಮಾತ್ರ ಏನೇನೂ ಅಭಿವೃದ್ಧಿಯಾಗಿಲ್ಲ. ಇದೆಲ್ಲಾ ಜನತೆಯ ಬದುಕನ್ನು ರಕ್ಷಿಸುವ ಕೆಲಸಗಳಾಗಿರದೆ ಸರ್ಕಾರದ ದ್ವಿಮುಖ ನೀತಿಗೆ ಉದಾಹರಣೆಗಳಂತಿವೆ. ಇದಕ್ಕೆ ವಿರುದ್ಧವಾದ ವಾದವನ್ನು ಸರ್ಕಾರ ಮಂಡಿಸುತ್ತದೆ. ಜನರೇ ಸಿ. ಮತ್ತು ಡಿ. ಅರಣ್ಯ ಭೂಮಿಗಳನ್ನು ನಾಶಮಾಡುತ್ತಿದ್ದಾರೆ ಎಂದು ಸದಾಕಾಲ ಜನರ ಕಡೆ ಕೈಮಾಡಿ ತೋರಿಸುತ್ತಾ ಜನರು ಸಾಮುದಾಯಿಕ ಭೂಮಿ, ಸಂಪತ್ತುಗಳಿಂದ ಅನ್ಯಮನಸ್ಕರಾಗಿ, ತಿರಸ್ಕಾರ ಪ್ರವೃತ್ತಿ ಬೆಳೆಸಿಕೊಳ್ಳುವಂತೆ ಮಾಡುವಲ್ಲಿ ಮಾತ್ರ ಸರ್ಕಾರದ ಯೋಜನೆಗಳು ಸಫಲವಾಗಿವೆ.

ಈ ಎಲ್ಲ ಪ್ರಕ್ರಿಯೆಗಳ ಸುತ್ತಲೂ ರಾಜಕೀಯ ಮುಖವಿರುವುದು ಖಚಿತ. ಇಂತಹ ಸಾಮೂಹಿಕ ಭೂಮಿಗಳ ಸಾಂಸ್ಕೃತಿಕ, ಸಾಮಾಜಿಕ, ಜೀವನಾವಶ್ಯಕ ಮುಖಗಳೆಲ್ಲಾ ರಾಜಕೀಯ ಕೈವಾಡದಲ್ಲಿ ಮತ್ತು ನೈತಿಕ ದೌರ್ಬಲ್ಯಗಳಲ್ಲಿ ಕರಗುತ್ತಲಿವೆ. ಈ ಕಾರಣಗಳಿಗಾಗಿ ಜನರ ಜೀವನದಲ್ಲಿ ಮತ್ತೆ ಸಾಮೂಹಿಕ ಭೂಮಿಗಳ ಪರಿಣಾಮಕಾರಿ ಮಾರ್ಗಗಳ ಹುಡುಕಾಟ ತುಂಬ ಅಗತ್ಯವಾಗಿದೆ. ಸರ್ಕಾರಿ ನೀತಿಗಳು ಹೀಗೆ ಗ್ರಾಮ ಮಟ್ಟದವರೆಗೂ ಬಂದು ಜನರೊಡನೆ ಕೂಡಿಕೊಂಡು ಸಾಮುದಾಯಿಕ ಭೂಮಿಗಳ ರಕ್ಷಣೆಯಲ್ಲಿ ತೊಡಗಬೇಕೆಂಬುದು ಕೂಡ ಬಹು ಮುಖ್ಯವಾದ ಮಾರ್ಗವೆ! ಸಾಮುದಾಯಿಕ ಭೂಮಿಗಳ ವಾಸ್ತವವೇನು? ಅದರ ಬದಲಾದ ಮೂಲಭೂತಾಂಶಗಳೇನು ಎಂದು ತಿಳಿಯದೆ ನಾವು ಮಾರ್ಗಗಳನ್ನು ಹುಡುಕುತ್ತೇವೆ ಎನ್ನುವುದು ಕೂಡ ಹಾಸ್ಯಾಸ್ಪದವಾದ ನಿರ್ಧಾರಗಳೆ.

ಇಂದು ಭೂರಹಿತರು, ಭೂಮಿ ಇರುವವರು ಸಮುದಾಯ ಭೂಮಿಗಳನ್ನು ಎಷ್ಟು ಅವಲಂಬಿಸಿದ್ದಾರೆ. ಎಷ್ಟೆಷ್ಟು ಉತ್ಪನ್ನ ಪಡೆಯುತ್ತಿದ್ದಾರೆ. ಅವರ ಆರ್ಥಿಕ ಜೀವನದ ಮೇಲೆ ಈ ಭೂಮಿ ಎಂಥ ಪರಿಣಾಮಗಳನ್ನು ಉಂಟುಮಾಡಿತ್ತು. ಈಗ ಅದು ಏನಾಗಿದೆ ಎಂಬುದರ ಸಮಗ್ರ ಅರಿವು ನಮಗೆ ಈ ಭೂಮಿಗಳ ಪುನರ್ ಬಳಕೆಯ ಮೇಲೆ ವಾಸ್ತವಾಂಶಗಳ ಬೆಳಕು ಚೆಲ್ಲಬಲ್ಲದು.

ಸೋಗೆ ಕೊಚ್ಚುವ ಯಂತ್ರ: ಶ್ರೆಡ್ಡರ್

ಇಂದು ಕೃಷಿ ಕ್ಷೇತ್ರದಲ್ಲಿ ಹಲವಾರು ಶೋಧನೆಗಳು ನಡೆಯುತ್ತಲೇ ಇವೆ. ಅದರಲ್ಲೂ ಮನುಷ್ಯನ ಶ್ರಮ ಕಡಿಮೆ ಮಾಡಲು ಶೋಧನೆಗಳನ್ನು ನಡೆಸುತ್ತಲೇ ಬಂದಿದ್ದಾರೆ. ಅಂತಹುದರ ಫಲವೇ ಟ್ರಾಕ್ಟರ್, ಟಿಲ್ಲರ್, ಡ್ರಂ ಸೀಡರ್, ನಾಟಿ ಮಾಡುವ ಯಂತ್ರ ಇಂತಹವೇ ಹತ್ತು ಹಲವು........ ಇದರಲ್ಲಿ ಕೆಲವು ದೇಶೀಯ ತಂತ್ರಜ್ಞಾನದಿಂದ ಆಗಿದ್ದರೆ ಮತ್ತೆ ಕೆಲವು ವಿದೇಶಿ ತಂತ್ರಜ್ಞಾನದಿಂದ ಆಗಿವೆ. ದೇಶೀಯ ತಂತ್ರಜ್ಞಾನದಿಂದಲೆ ರೂಪುಗೊಂಡ ಶ್ರೆಡ್ಡರ್ ಎನ್ನುವ ತೆಂಗಿನ ಸೋಗೆ ಕೊಚ್ಚುವ ಯಂತ್ರವನ್ನು ನಮ್ಮ ರೈತ ಬಿ.ಇ. ಪದವೀಧರ ಶಿವಕುಮಾರ್ ಕಂಡುಹಿಡಿದಿದ್ದಾರೆ. ಇದು ಕಛೇರಿಗಳಲ್ಲಿ ಕಾಗದಗಳನ್ನು ಸಣ್ಣ ಚೂರುಗಳನ್ನಾಗಿ ಮಾಡುವ ಶ್ರೆಡ್ಡರ್ ಯಂತ್ರದ ತತ್ವದ ಆಧಾರದ ಮೇಲೆ ರೂಪಿತವಾಗಿದೆ. ಈ ಯಂತ್ರದ ಸಹಾಯದಿಂದ ತೆಂಗಿನ ಸೋಗೆಯನ್ನು ಹೆಚ್ಚು ಶ್ರಮವಿಲ್ಲದೆ ಗಂಟೆಗೆ 500ರಂತೆ ಕೊಚ್ಚಬಹುದು. ಈ ಶ್ರೆಡ್ಡರ್ ತೆಂಗು ಬೆಳೆಯುವ ರೈತ ಸಮುದಾಯಕ್ಕೆ ಒಂದು ವರದಾನವೇ ಸರಿ.



ಶಿವಕುಮಾರ್ ಈ ಯಂತ್ರವನ್ನು ಕಂಡು ಹಿಡಿದಿರುವುದು ಉರುವಲಿಗೆ ಸೋಗೆಯನ್ನು ಕೊಚ್ಚಲೆಂದಲ್ಲ ಈ ತೆಂಗಿನ ಸೋಗೆಯನ್ನು ಕೊಚ್ಚಿ ಅದನ್ನು ಮತ್ತೆ ಮಣ್ಣಿಗೆ ಸೇರಿಸಲು ಅನುಕೂಲವಾಗಲೆಂದು. ಸೋಗೆಯನ್ನು ತೆಂಗಿನ ಮರದ ಬುಡಕ್ಕೆ ಸುತ್ತಲು ಹಾಕಿದರೆ ಮರದ ಬುಡದಲ್ಲಿ ತೇವಾಂಶ ಆರುವುದಿಲ್ಲ ಕೊಚ್ಚಿದ ಸೋಗೆಯನ್ನು ಹಾಕಿದಲ್ಲಿ ಬೇಗ ಮಣ್ಣಿಗೆ ಸೇರುತ್ತದೆ. ಹಾಗೂ ಇದರೊಂದಿಗೆ ಎರೆಹುಳುಗಳನ್ನು ಬಿಟ್ಟರೆ ಇನ್ನೂ ಬೇಗ ಕೊಳೆಯಲು ಅನುಕೂಲವಾಗುತ್ತದೆ. ಈ ಯಂತ್ರದ ಉಪಯುಕ್ತತೆಯ ಬಗ್ಗೆ ತೆಂಗು ಬೆಳೆದಂತಹ ಹಲವು ರೈತರ ಅಭಿಪ್ರಾಯ ಕೇಳಿದಾಗ ಬಂದ ಅಭಿಪ್ರಾಯಗಳು ಈ ಕೆಳಗಿನಂತಿವೆ. ಹಾಲೂರಿನ ವಿಜಯಕುಮಾರ್ ಅವರ ಅನಿಸಿಕೆಯಂತೆ ಈ ಯಂತ್ರವು ಸೋಗೆಯನ್ನು ಕೊಚ್ಚಲು ತುಂಬ ಚೆನ್ನಾಗಿದೆ. ಆದರೆ ಒಣನಾರು ಸೋಗೆಯನ್ನು ಕೊಚ್ಚುತ್ತದೆಯೋ, ಇಲ್ಲವೋ ಎಂಬ ಅನುಮಾನ ಇವರದು. ಇವರ ಅಭಿಪ್ರಾಯದಂತೆ ಈ ಯಂತ್ರ ಉರುವಲಿಗಾಗಿ ಸೋಗೆಯನ್ನು ಕೊಚ್ಚುವ ಕೆಲಸವನ್ನು ಮಾಡಿದರೆ ಹೆಚ್ಚು ಉಪಯುಕ್ತ. ಇನ್ನು ಕೆಲವು ರೈತರ ಪ್ರಕಾರ, ಈ ಯಂತ್ರ ತುಂಬ ಉಪಯುಕ್ತ, ಏಕೆಂದರೆ ಶ್ರಮ ಕಡಿಮೆಯಾಗುವುದಲ್ಲದೆ, ಕೆಲಸಗಾರರ ವೆಚ್ಚ, ಸಮಯವೂ ಕಡಿಮೆಯಾಗುತ್ತದೆ.

ವಿಳಾಸ: ಆರ್. ಶಿವಕುಮಾರ್ ನಂ. 44, ಸೌರಭ, ಬಸವೇಶ್ವರ
ಲೇಔಟ್, ವಿಜಯ ನಗರ, ಬೆಂಗಳೂರು-40
ಕೃಪೆ: ಪ್ರಜಾವಾಣಿ, ಮೇ 17/2000

`ಸಾವರಿ' ಎಂಬ ಸಾವಯವ ಗೊಬ್ಬರ

ಪ್ರಗತಿಪರ ಕೃಷಿಕರಲ್ಲಿ ಒಬ್ಬರಾದ ಜಿ.ಎಂ.ಹೆಗಡೆ ಹುಳಗೋಳ ಇವರು ಶಿರಸಿ ಬಳಿಯ ಹುಳಗೋಳ ಊರಿನವರು. ಇವರು ಸಾವಯವ ನೀರಾವರಿಗೆ ಇವರದೇ ಆದ ಸಾವರಿ ಎಂಬ ಗೊಬ್ಬರ ಸಿದ್ಧಪಡಿಸಿದ್ದಾರೆ, ಗೋಬರ್ ಗ್ಯಾಸ್ ರಾಡಿ, ಕೊಟ್ಟಿಗೆ ತೊಳೆದ ನೀರು, ಗಂಜಳವನ್ನು ಚೆನ್ನಾಗಿ ಮಿಶ್ರ ಮಾಡಿದರೆ ಉತ್ತಮ ಸಾವಯವ ಗೊಬ್ಬರ ಸಿದ್ಧವಾಗುತ್ತದೆ. ಮೂವತ್ತು ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕಿನಲ್ಲಿ ಗೋಬರ್ ಗ್ಯಾಸ್ ರಾಡಿ, ದನಕರುಗಳ ಗಂಜಳ, ಕೊಟ್ಟಿಗೆ ತೊಳೆದ ನೀರು ಇವುಗಳನ್ನು ಸಂಗ್ರಹಿಸಿ ಪೈಪ್‌ನಲ್ಲಿ ಹೋಗುವಷ್ಟು ತೆಳ್ಳಗೆ ಮಾಡಿಕೊಂಡು ಟ್ಯಾಂಕಿನಿಂದ ಗಿಡಗಳ ಬುಡಕ್ಕೆ ನೇರವಾಗಿ ಹೋಗುವಂತೆ ಮಾಡಿದ್ದಾರೆ. ಟ್ಯಾಂಕ್ ಎತ್ತರದಲ್ಲಿ ಇದ್ದರೆ ಈ ದ್ರವರೂಪದ ಗೊಬ್ಬರಕ್ಕೆ ಪಂಪ್ ಬೇಕಾಗಿಲ್ಲ ಎನ್ನುತ್ತಾರೆ.

ಸದ್ಯಕ್ಕೆ ಇವರು ತಯಾರಿಸುತ್ತಿರುವಂತಹ ಸಾವರಿ ಗೊಬ್ಬರ ನಾಲ್ಕು ಎಕರೆಗಳಲ್ಲಿ ಇರುವ ತೆಂಗು, ಪಪ್ಪಾಯಿ, ಬಾಳೆ, ಕಾಫಿ ಗಿಡಗಳಿಗೆ ಹೋಗುತ್ತದೆ. ಒಂದು ಗಿಡಕ್ಕೆ ಸುಮಾರು ಆರರಿಂದ ಎಂಟು ಲೀಟರ್‌ನಷ್ಟು ಸಿಗುವ, ಇದು ನೀರೂ ಹೌದು, ಗೊಬ್ಬರವೂ ಹೌದು. ಇಂತಹ ಕ್ರಮದಿಂದ ಲಾಭವೂ ಹೆಚ್ಚು, ಬೆಳವಣಿಗೆಯೂ ಶೀಘ್ರ ಎಂಬುದು ಹೆಗಡೆಯವರ ಅಭಿಪ್ರಾಯ.

ಕೃಪೆ : ಪ್ರಜಾವಾಣಿ
ಮೇ 17/2000

ಬಟ್ಟೆಗಳನ್ನು ಉಬ್ಬೆ ಹಾಕುವ ದೇಶೀಯ ಪದ್ಧತಿ

ಹಿಂದೆ ಬಟ್ಟೆಗಳ ಕೊಳೆ ತೆಗೆಯಲು ಉಬ್ಬೆ ಹಾಕುತ್ತಿದ್ದರು. ಉಬ್ಬೆ ಹಾಕುವ ವಿಧಾನವೆಂದರೆ ಬಟ್ಟೆಗಳನ್ನು ಮೊದಲು ಚೌಳುಮಣ್ಣಿನಲ್ಲಿ ನೆನಸಿ, ನೀರು ಕಾಯಿಸುವ ಹಂಡೆಯ ಒಲೆಯನ್ನು ಹೋಲುವಂತಹ ಉಬ್ಬೆ ಹಂಡೆಯ ಮೇಲೆ ದಪ್ಪ ಕಡ್ಡಿಗಳನ್ನು ಜೋಡಿಸಿ ಅದರ ಮೇಲೆ ಬಟ್ಟೆಗಳನ್ನು ಸುತ್ತಿ ಒಂದರ ಮೇಲೊಂದು ಇಟ್ಟು ನಂತರ ಒಂದು ದಪ್ಪನಾದ ಬಟ್ಟೆಯಿಂದ ಸಂಪೂರ್ಣವಾಗಿ ಮುಚ್ಚಿ ನೀರು ಕಾಯಿಸುತ್ತಿದ್ದರು. ಈ ನೀರಿನ ಹಬೆಯಲ್ಲಿ ಬಟ್ಟೆಗಳು ಬೆಂದು ಕೊಳೆ ಬಿಟ್ಟುಕೊಳ್ಳುತ್ತವೆ. ಈ ರೀತಿಯಾಗಿ ಸುಮಾರು 8 ಗಂಟೆ ಹಬೆಯ ನೀರಿನಲ್ಲಿ ಬೇಯಬೇಕು, ನಂತರ ಈ ಬಟ್ಟೆಯನ್ನು ಮತ್ತೆ ಚೌಳುಮಣ್ಣಿನಲ್ಲಿ ಹಾಕಿ ಬಟ್ಟೆಯನ್ನು ಒಗೆಯುತ್ತಿದ್ದರು, ಇದರಿಂದ ನಮ್ಮ ಪರಿಸರಕ್ಕೆ ಯಾವುದೇ ರೀತಿಯ ಹಾನಿಯಾಗುತ್ತಿರಲಿಲ್ಲ ಹಾಗೂ ಒಂದು ಜನಾಂಗಕ್ಕೆ ಉದ್ಯೋಗದ ಅವಕಾಶವಿರುತ್ತಿತ್ತು, ಆದರೆ ಇಂದು ನಮ್ಮ ಉಡುಗೆ-ತೊಡುಗೆಗಳು ಬಹಳ ಬದಲಾಗಿವೆ. ರೆಯಾನ್, ಪಾಲಿಯಸ್ಟರ್, ನೈಲಾನ್ ಹೀಗೆ ಹಲವಾರು ರೀತಿಯ ಬಟ್ಟೆಗಳನ್ನು ತಯಾರಿಸಿದಂತಹ ಕಾರ್ಖಾನೆಗಳಿಂದ ಪರಿಸರ ಹಾಳಾದರೆ, ಇಂತಹ ಬಟ್ಟೆಗಳ ಕೊಳೆ ತೆಗೆಯುವ ಇಂದಿನ ಸೋಪುಗಳೂ ಸಹ ಪರಿಸರವನ್ನು ಹಾಳು ಮಾಡುತ್ತಿವೆ.


ರಾಮಕ್ಕ ಮತ್ತು ಉಮೇಶ್ ದೊಡ್ಡಹೆಜ್ಜಾಜಿ ಇವರಿಂದ
ಸಂಗ್ರಹ : ಚಿತ್ರಶೇಖರ್

ಅಮೃತಭಾಯಿ ಆಗರವತ್‌ರ 'ಆರುಣಿ' ಬಾಗುವ ಎತ್ತಿನ ಗಾಡಿ

ಅಮೃತಭಾಯಿ ಅಗರವತ್ ಫಿಕೋರ ಹಳ್ಳಿ, ಜುನಾಗಡ ಜಿಲ್ಲೆಯ ಜಾತಿಯಿಂದ ಅರ್ಚಕ ವೃತ್ತಿಯಲ್ಲಿ ಕುಶಲಕರ್ಮಿ. ತನ್ನ 10ನೇ ವಯಸ್ಸಿನಲ್ಲಿಯೇ ಹಳ್ಳಿಗರಿಂದ 'ಮೆಕ್ಯಾನಿಕ್' ಎಂದು ಗುರುತಿಸಲ್ಪಡುತ್ತಿದ್ದರು. ಇವರ ಆರಂಭದ ಜೀವನ ಕೃಷಿಕಾರ್ಮಿಕರಾಗಿ ಕಳೆದಿದ್ದರ ಜೊತೆಗೆ ಜೀವನೋಪಾಯಕ್ಕಾಗಿ ಕೃಷಿ ಸಲಕರಣೆಗಳು, ಡೀಸೆಲ್ ಎಂಜಿನ್, ಮೋಟರ್ ಪಂಪ್ ಹಾಗೂ ಸಂಗ್ರಹಣಾ ಸಲಕರಣೆಗಳ ದುರಸ್ತಿಮಾಡುವ ಕಾರ್ಯದಲ್ಲೂ ತೊಡಗಿದ್ದರು.

ನೂರಾರು ವರ್ಷಗಳಿಂದ ಬಳಕೆಯಲ್ಲಿರುವ ಎತ್ತಿನ ಗಾಡಿಯ ಪ್ರಾಥಮಿಕ ರಚನೆಯ ಬಗ್ಗೆ ಹೆಚ್ಚಿನ ಜನರ ಗಮನವೇ ಹರಿದಿಲ್ಲ. ಎಲ್ಲೋ ಅಲ್ಪಸ್ವಲ್ಪ ಎತ್ತಿನ ಗಾಡಿಗಾಗಿ, ಉಪಯೋಗಿಸಿದ ವಸ್ತುಗಳಲ್ಲಿ ಬದಲಾವಣೆಯಾಗಿರಬಹುದೇ ಹೊರತು, ಮೂಲ ರಚನೆಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಸಾಧಾರಣವಾಗಿ ಎತ್ತಿನ ಗಾಡಿಗೆ ಎರಡೇ ಚಕ್ರಗಳು. ಹಾಗಾಗಿ ಗಾಡಿಯ ಬಹುಪಾಲು ಭಾರ ಎತ್ತಿನ ಹೆಗಲ ಮೇಲೆಯೇ ಬೀಳುತ್ತದೆ. ಹೀಗಾಗಿ ಗಾಡಿಯನ್ನು ಎಳೆಯುವ ಜೊತೆಗೆ ಎತ್ತು, ಗಾಡಿಯ ಭಾರವನ್ನು ಕೂಡಾ ಹೊರುತ್ತದೆ. ಇದರ ಜೊತೆಗೆ ಗಾಡಿಯ ರಚನೆಯ ಮೂಲ ದೋಷದಿಂದಾಗಿ ರಸ್ತೆಯ ತಿರುವುಗಳಲ್ಲಿ ಗಾಡಿಯೆಳೆಯುವುದು ಬಹು ಕಷ್ಟ. ಇವೆಲ್ಲಾ ಕಾರಣದಿಂದಾಗಿ ಎತ್ತಿನ ಸಾಮರ್ಥ್ಯ ಮತ್ತುಶಕ್ತಿ ಕುಂದುತ್ತಿರುವ ಬಗ್ಗೆ ಅಮೃತಾಭಾಯಿಗೆ ಹಲವಾರು ವರ್ಷಗಳಿಂದ ಚಿಂತನೆ.

ಹಿನ್ನೆಲೆ: ಜುನಾಗಡ ಜಿಲ್ಲೆಯ ಫಿಕೋರ ಎಂಬ ಹಳ್ಳಿಯ ಕುಶಲಕರ್ಮಿ 'ಅಮೃತಾಭಾಯಿ', ಒಣ ಬೇಸಾಯಕ್ಕೆ ನೆರವಾಗುವಂತಹ ಹಲವಾರು ಶೋಧನೆಗಳನ್ನುಮಾಡಿದ್ದಾರೆ. 'ಜನಕ ಸಂತಿ' ಎಂಬುದು ಇಂತಹ ಒಂದು ಉಪಕರಣ. ಈ ಉಪಕರಣಕ್ಕೆ ಬೇರೆ ಬೇರೆ ಬಿಡಿ ಭಾಗಗಳನ್ನು ಜೋಡಿಸಿ, ಅನೇಕ ಕೃಷಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಹೀಗೇ ಇನ್ನೊಂದು ಉಪಕರಣ 'ಮಿನಿಕಾಲಿ'ಇದಕ್ಕೆ ಕಡಲೆಕಾಯಿ ಅಗೆಯುವ ಸಾಧನ, ನೀರುಣಿಸುವ ಪೆಟ್ಟಿಗೆ ಹೀಗೆ ಬೇರೆ ಬೇರೆ ಬಿಡಿಭಾಗಗಳನ್ನು ಜೋಡಿಸಬಹುದು.



ಅಮೃತಾಭಾಯಿ 'ಹನಿಬೀ' ಜಾಲದ ಅತ್ಯಂತ ಕ್ರಿಯಾಶೀಲ ಸದಸ್ಯರಾಗಿದ್ದು, ಇತರ ಸ್ಥಳೀಯ ಸಂಶೋಧಕರನ್ನು ಗುರುತಿಸುವಲ್ಲಿ ನೆರವಾಗಿದ್ದಾರೆ.



ಬಾಗುವ ಗಾಡಿ: ಸಂಶೋಧನೆಗೆ ಬೆಳಕಿನ ಕಿಡಿ

ಜುನಾಗಡ ಪ್ರದೇಶದ ರೈತರು ಕೃಷಿ ಹಾಗೂ ಪಶು ಪಾಲನೆಯಿಂದ ದೊರೆಯುವ ತ್ಯಾಜ್ಯ ವಸ್ತುಗಳನ್ನು, ಪಾಳು ಭೂಮಿ ಅಥವಾ ಸಾರ್ವಜನಿಕ ಭೂಮಿಯಿಂದ ತೆಗೆದ ಮಣ್ಣು ಇವೆಲ್ಲವನ್ನೂ ಒಟ್ಟು ಸೇರಿಸಿ, ಗೊಬ್ಬರ ತಯಾರಿಸುತ್ತಾರೆ. ಇದನ್ನು ಕೃಷಿ ಭೂಮಿಗೆ ಸಾಗಿಸಲು ಎತ್ತಿನ ಗಾಡಿ ಅತೀ ಅಗತ್ಯ, ಮಳೆಗಾಲಕ್ಕೆ ಮುನ್ನವೇ ಈ ಗೊಬ್ಬರವನ್ನು ಭೂಮಿಗೆ ಸೇರಿಸಬೇಕಾದುದರಿಂದ ರೈತ ಮಹಿಳೆಯರು ಸುಡು ಬಿಸಿಲಿನಲ್ಲಿ ಗೊಬ್ಬರವನ್ನು ಹೊಲ–ಗದ್ದೆಗಳಿಗೆ ಎರಚಲು ದಣಿಯುವುದು ಸರ್ವೇ ಸಾಮಾನ್ಯ. ತನ್ನ ಬಳಿ ಕೃಷಿ ಸಾಮಗ್ರಿಗಳನ್ನು ಕೊಳ್ಳಲು ಬರುತ್ತಿದ್ದ ರೈತರೊಡನೆ ಅಮೃತಾಭಾಯಿ ಈ ಕುರಿತು ಸಾಕಷ್ಟು ಚರ್ಚೆ ನಡೆಸಿದ್ದರು. ಹೀಗೆ ಚರ್ಚಿಸುತ್ತಿದ್ದಾಗ ಅಮೃತಭಾಯಿಗೆ ಒಂದು ಉಪಾಯ ಹೊಳೆಯಿತು. ಹೊಲಕ್ಕೆ ಗೊಬ್ಬರ ಸಾಗಿಸುವ ಎತ್ತಿನ ಗಾಡಿಯೇ ಬಗ್ಗಿಗೊಬ್ಬರ ಚೆಲ್ಲಲು ಸಾಧ್ಯವಾಗುವಂತೆ ಮಾಡಿದರೆ? ಅದನ್ನು ಹೇಗೆ ಮಾಡಬಹುದೆಂಬ ಬಗ್ಗೆಯೂ ಯೋಚನೆ ಹಾಗೂ ಯೋಜನೆ ಸಿದ್ಧಮಾಡಿದರು. ಹೈಡ್ರಾಲಿಕ್ ತತ್ವದ ಆಧಾರದಿಂದ ಗಾಡಿಯನ್ನು ಸಿದ್ಧಗೊಳಿಸಿ, ನಾಲ್ಕು ಚಕ್ರ ಜೋಡಿಸಿದರೆ ಸಾಧ್ಯವಾಗುತ್ತದೆ ಎಂಬ ರೂಪು–ರೇಷೆ ಸಿದ್ಧಗೊಳಿಸಿದರು. ಯೋಜನೆಯೇನೋ ಆಕರ್ಷಕವಾಗಿತ್ತು , ಆದರೆ ಅದಕ್ಕೆ ಬೇಕಾದ ಮೂಲಧನ ಮತ್ತು ಸಮಯ ಅಭಾವದ ಕಾರಣದಿಂದಾಗಿ ಯೋಜನೆ ಕಾರ್ಯ ರೂಪಕ್ಕೆ ಬರುವುದು ಸರಳವಾಗಲಿಲ್ಲ.

'ಕನಸಿನಿಂದ ಕಾರ್ಯಕ್ಕೆ'

90ರ ದಶಕದ ಆರಂಭದಲ್ಲಿ ಅಮೃತಾಭಾಯಿ ತಮ್ಮ ಬಳಿಯೇ ಇದ್ದ ಉಳಿತಾಯದ ಹಣದಿಂದ 'ಗಾಡಿ' ಸಿದ್ಧಗೊಳಿಸುವ ಕೆಲಸ ಆರಂಭಿಸಿದರು. ಕಬ್ಬಿಣದ ಚೌಕಟ್ಟು ಜೋಡಿಸಿ ಸಿದ್ಧ ಮಾಡಿದರು. ಆದರೆ, ಕೈಯಲ್ಲಿದ್ದ ಹಣ ಖಾಲಿಯಾದ್ದರಿಂದ ಕೆಲಸ ಮುಂದೆ ಸಾಗಲಿಲ್ಲ.

1993ರ ಡಿಸಂಬರ್‌ನಲ್ಲಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ನಡೆದ 'ಸೃಷ್ಟಿ' ಯ ಪ್ರಥಮ ಸಲಹಾ ಸಮಿತಿಗೆ 'ಅಮೃತಾಭಾಯಿ' ಯನ್ನು ಕರೆಸಲಾಗಿತ್ತು. ಈ ಅವಕಾಶದ ಸದುಪಯೋಗ ಪಡಿಸಿಕೊಂಡ ಅಮೃತಾಭಾಯಿ 'ಬಾಗುವ ಎತ್ತಿನ ಗಾಡಿ' ಯನ್ನು ಸಿದ್ಧಪಡಿಸಬೇಕೆಂಬ ತಮ್ಮ ಅಭಿಲಾಷೆ ವ್ಯಕ್ತಪಡಿಸಿ ಅದರ ರೂಪು-ರೇಷೆ ವಿವರಿಸಿದರು. ಇದಕ್ಕಾಗಿ ಅದಾಗಲೇ ರೂ. 8000/- ವನ್ನು ತಮ್ಮ ಕೈಯಿಂದಲೇ ಖರ್ಚು ಮಾಡಿದರೂ ಯೋಜನೆ ಅಪೂರ್ಣವಾಗಿರುವುದನ್ನು ತಿಳಿಸಿದರು. ಸಲಹಾ ಸಮಿತಿಯ ಸದಸ್ಯರಿಗೆ ಅಮೃತಾಭಾಯಿಯ 'ಬಾಗುವ ಎತ್ತಿನ ಗಾಡಿಯ' ಯೋಜನೆ ಆಕರ್ಷಕವಾಗಿ ಕಂಡು ಗಾಡಿಯ ಅರ್ಧ ವೆಚ್ಚವನ್ನು ಭರಿಸಲು ನಿರ್ಧಾರ ಕೈಗೊಂಡರು.

ಅಮೃತಾಭಾಯಿ ಯೋಜನೆ ಹಾಗೂ ನೆರವನ್ನು ತಮ್ಮ ಮಕ್ಕಳಾದ 'ಭಾರತ್' ಮತ್ತು 'ಅಶ್ವಿನ್' ಗೂ ತಿಳಿಸಿ ಕೆಲಸಕ್ಕೆ ಸಜ್ಜಾದರು.

ಗಾಡಿಯ ಉದಯ

ಎತ್ತಿನ ಗಾಡಿಯನ್ನು ಪುನರ್‌ರಚಿಸುವ ಉದ್ದೇಶದಿಂದ ಅಮೃತಭಾಯಿ ಮೊದಲು ರಾಜಕೋಟದಲ್ಲಿ ಒಂದು ಹೈಡ್ರಾಲಿಕ್ ಜಾಕ್ ಖರೀದಿಸಿದರು. ಎಣ್ಣೆ ತುಂಬಿಸಿ, ಒತ್ತಡ ಹೇರಿದಾಗ ನಿರೀಕ್ಷೆಗೆ ವ್ಯತಿರಿಕ್ತವಾಗಿ ಎಣ್ಣೆಯ ಟ್ಯಾಂಕ್ ಸಿಡಿಯಿತು. ಅದೃಷ್ಟವಶಾತ್ ಯಾರಿಗೂ ಗಾಯಗಳಾಗಲಿಲ್ಲ. ಯಾಕೆ ಹೀಗಾಯಿತೆಂದು ಪರಿಶೀಲಿಸಿದಾಗ, ಧೂಳಿನಿಂದ ಅದರ ಕೊಳವೆ ಮುಚ್ಚಿಹೋಗಿದ್ದು ಕಂಡು ಬಂತು. ಉತ್ತರವೇನೋ ಸಿಕ್ಕಿತು, ಆದರೆ ಏನು ಲಾಭ? ಧೂಳಿಲ್ಲದಂತೆ ಗಾಡಿಯ ಹೈಡ್ರಾಲಿಕ್ ಜಾಕ್‌ನ್ನು ಎಚ್ಚರವಾಗಿ ಬಳಸುವುದು ರೈತರಿಗೆ ಕಷ್ಟದ ಕೆಲಸ. ಹಾಗಾಗಿ ಹೈಡ್ರಾಲಿಕ್ ಜಾಕ್‌ನನ್ನೇನಾದರೂ ಗಾಡಿಗೆ ಅಳವಡಿಸಿದರೆ, ಅಪಾಯಕಾರಿಯೆಂದು ಭಾವಿಸಿ, ಆ ಯೋಜನೆಯನ್ನೇ ಕೈಬಿಟ್ಟರು. ಈ ಮಧ್ಯದಲ್ಲಿ ಅವರ ಮಗ ಮತ್ತು ಮಗಳ ಮದುವೆ ನಿಶ್ಚಯವಾದ್ದರಿಂದ ಕೆಲಸ ಅಲ್ಲಿಗೇ ನಿಂತಿತು. ಅಪೂರ್ಣಗೊಂಡ ಧೂಳು ಮುಚ್ಚಿದ ಎತ್ತಿನ ಗಾಡಿ ಬಂದು-ಹೋಗುವವರಿಗೆ ಮಾತನಾಡುವ ವಸ್ತುವಾಯಿತು. ಅಷ್ಟೇ ಅಲ್ಲ, ಅಸಾಧ್ಯವಾದ ಮಾತೆಂಬ ಅವಹೇಳನಕ್ಕೂ ಗುರಿಯಾಯಿತು.

ಆದರೆ, ಅಮೃತಭಾಯಿಗೆ ತಮ್ಮ ಕನಸಿನ 'ಸುಧಾರಿತ ಗಾಡಿ' ಯ ಯೋಜನೆಯನ್ನು ಹೇಗಾದರೂ ಸಾಕಾರಗೊಳಿಸಲೇಬೇಕೆಂಬ ಆಶಯ. ಹಾಗಾಗಿ ಮತ್ತೆ ಕೆಲಸ ಆರಂಭಿಸಿದರು. ಈ ಬಾರಿ ರಾತ್ರಿ ಎಲ್ಲರೂ ನಿದ್ರಿಸಿದ ನಂತರ, ನೀರವ ವಾತಾವರಣದಲ್ಲಿ ಕುಳಿತು, ಚಿಂತಿಸಿ, ಕೆಲಸ ಮಾಡಲು ಆರಂಭಿಸಿದರು. ಒಂದು ರಾತ್ರಿ ಹೀಗೆ ಯೋಚಿಸುತ್ತಾ ಕುಳಿತಾಗ 'ಸಮಾನಾಂತರ ಗೇರ್' (Horizontal gear)ನ್ನು ಬಳಸಬಹುದೆಂಬ ಯೋಚನೆ ಹೊಳೆಯಿತು. ಈ ರೀತಿಯ ಗೇರನ್ನು ಬೋರ್‌ವೆಲ್‌ನ ಒಳಗೆ ಪಂಪನ್ನು ಇಳಿಸಲು ಬಳಸುವುದನ್ನು ನೋಡಿದ್ದರು. ಅದನ್ನೇ ಎತ್ತಿನ ಗಾಡಿಯಲ್ಲೂ ಬಳಸಿದರು. ಈ ಬಾರಿಯ ಪ್ರಯತ್ನ ಗಾಡಿಯನ್ನು ಎತ್ತುವುದರಲ್ಲೇನೋ ಸಫಲವಾಯಿತು. ಆದರೆ, ಅದರ ಮುಂದಿನ ಹೆಜ್ಜೆಯಾಗಿ ಗಾಡಿಯನ್ನು ಬಾಗಿಸುವುದು ಅಸಾಧ್ಯವಾಯಿತು. ಈ ರೀತಿಯ ಅಸಫಲ ಪ್ರಯೋಗದಿಂದ ಅಮೃತಭಾಯಿಗೆ ಮತ್ತೆರಡು ಸಾವಿರ ನಷ್ಟವಾಯಿತು. ಆದರೂ ಪ್ರಯತ್ನ ನಿಲ್ಲಿಸಲಿಲ್ಲ. ಬದಲು ಸರಿಯಾದ ಯೋಜನೆಗೆ ನಾಂದಿಯಾಯಿತು. ಈ ಬಾರಿ ಸಮಾನಾಂತರ ಗೇರಿನ ಬದಲು, ಲಂಟನಾದ ಗೇರನ್ನು ಬಳಸಿದರು. ಅಂತೂ ಪ್ರಯತ್ನ ಸಫಲವಾಯಿತು. ಈಗ ಅವರ ಗಾಡಿ ಲಂಬವಾದ ಜಾಕ್ ವ್ಯವಸ್ಥೆಯನ್ನು ಒಳಗೊಂಡಿದ್ದು, ಸುಲಭವಾಗಿ ಎತ್ತಿ ಬಾಗಿಸಲು ಸಾಧ್ಯವಾಗಿದೆ. ಈ ಗಾಡಿಗೆ 'ಆರುಣಿ' ಎಂಬುವವನು ಪೌರಾಣಿಕ ಕತೆಯಲ್ಲಿ ಋಷಿಯೊಬ್ಬನ ಮಗನಾಗಿದ್ದು ಒಮ್ಮೆ ಅತೀ ಮಳೆಯಲ್ಲಿ ಊರ ಕೆರೆ ಕಟ್ಟೆ ಒಡೆಯುವುದರಲ್ಲಿದ್ದಾಗ ಅದಕ್ಕೆ ಸ್ವತ: ಅಡ್ಡ ಮಲಗಿ ರಕ್ಷಿಸುವುದಾಗಿ ಹೆಸರುವಾಸಿಯಾಗಿರುವವನು. ಇಂತಹಾ 'ಆರುಣಿ' ಹೆಸರಿನ ಗಾಡಿ, ಎತ್ತುಗಳ ಶಕ್ತಿಯ ಸವೆತ ತಡೆಗಟ್ಟುವುದರಲ್ಲಿ ಉಪಯುಕ್ತವಾಗಿದೆ.

ಆರುಣಿ ಗಾಡಿಯ ಕೆಲವು ವಿಶೇಷಗಳು

- 1.5 ರಿಂದ 2.0 ಮೆಟ್ರಿಕ್ ಟನ್‌ನಷ್ಟು ಭಾರ ಹೊರಬಲ್ಲದು.
- ಮೂರು ಮಾದರಿಗಳಿವೆ. ಎರಡು ಚಕ್ರ, ಮೂರು ಚಕ್ರ ಹಾಗೂ 4 ಚಕ್ರದ ಗಾಡಿಗಳಂತೆ.
- ಚಕ್ರ ಹಾಗೂ ನೊಗದ ಹೊರತಾಗಿ ಉಳಿದೆಲ್ಲಾ ಭಾಗಗಳೂ ಸಂಪೂರ್ಣವಾಗಿ ಕಬ್ಬಿಣದಿಂದ ಮಾಡಲ್ಪಟ್ಟದ್ದು, ಸಾಮಾನ್ಯ ಗಾಡಿಗಳಿಗಿಂತ ಹೆಚ್ಚುಕಾಲ ಬಾಳಿಕೆ ಬರುತ್ತದೆ. ಜೊತೆಗೆ ಸಾಮಾನು-ಸರಂಜಾಮು ಸಾಗಾಣಿಕೆಗೆ ಬಲಿಷ್ಠವಾಗಿರುತ್ತದೆ.
- ಗಾಡಿಯನ್ನೇ ಸುಲಭವಾಗಿ ಎತ್ತಿ ಬಾಗಿಸಲು ಸಾಧ್ಯವಾಗುವುದರಿಂದ ಸಾಮಾನು ಇಳಿಸುವ ಕೆಲಸದ ಕೂಲಿಯಾಳುಗಳ ವೆಚ್ಚ ಉಳಿತಾಯ.
- ಸುಧಾರಿತ 'ಬ್ರೇಕ್' ವ್ಯವಸ್ಥೆಯಿಂದಾಗಿ ಇಳಿಜಾರು ಹಾಗೂ ತಿರುವು ಪ್ರದೇಶಗಳಲ್ಲಿ ಎತ್ತುಗಳ ನಿಯಂತ್ರಣ ಸುಲಭ ಮತ್ತು ಅವುಗಳ ಮೇಲೆ ಹೊರೆಯೂ ಕಡಿಮೆ.
- ಚಕ್ರಗಳಿಂದಾಗಿ ಗಾಡಿಯೆಳೆಯುವುದು ಸುಲಭ.
- ಸಂಪೂರ್ಣವಾಗಿ ತಿರುಗಿಸಲು ಸಾಧ್ಯವಾಗುವ ವ್ಯವಸ್ಥೆಯಿಂದಾಗಿ, ಕಿರಿದಾದ ಪ್ರದೇಶದಲ್ಲೂ ಗಾಡಿ ನಡೆಸುವುದು ಸುಲಭ ಸಾಧ್ಯ.
- ಸರಿಯಾಗಿ ಅಳವಡಿಸಬಹುದಾದ ವ್ಯವಸ್ಥೆಯಿಂದಾಗಿ ಗಾಡಿಯಲ್ಲಿನ ವಸ್ತುವನ್ನು ನಿರ್ದಿಷ್ಟ ಜಾಗಕ್ಕೆ ಇಳಿಸುವುದು ಸಾಧ್ಯವಾಗುತ್ತದೆ.
- ಸುಧಾರಿತ ನೊಗದಿಂದಾಗಿ ಎತ್ತುಗಳಿಗೆ ಆರಾಮ.
- ಎತ್ತುಗಳ ಕಷ್ಟವನ್ನು ಅತೀ ಕಡಿಮೆ ಮಾಡಿರುವಂತಹ, ಇಂತಹ ಎತ್ತಿನ ಗಾಡಿಯ ಮಾದರಿ ಬೇರೊಂದಿಲ್ಲ.
- ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಗಾತ್ರ ಮತ್ತು ಮಾದರಿಯನ್ನು ಬದಲಾಯಿಸಬಹುದು.
- ಎತ್ತಿನ ಜೋಡಿಯ ಬದಲಿಗೆ, ಇದೇ ಗಾಡಿಯನ್ನು ಟ್ರಾಕ್ಟರ್‌ನ ಹಿಂದೆ ಟ್ರೇಲರ್‌ನಂತೆ ಕೂಡಾ ಅಳವಡಿಸಬಹುದು.
- ಆರುಣಿ ಗಾಡಿಯ ಸುಧಾರಿತ ಮಾದರಿಯಿಂದಾಗಿ ಇದನ್ನು ಕೇವಲ ಕೃಷಿ ಸಾಮಗ್ರಿಗಳ ಸಾಗಾಟಕ್ಕೆ ಮಾತ್ರವಲ್ಲದೇ, ಕೈಗಾರಿಕಾ ವಸ್ತುಗಳ ಸಾಗಾಟಕ್ಕೂ ಬಳಸಲು ಸಾಧ್ಯ.
- ಈ ಗಾಡಿಯ ಅತ್ಯುತ್ತಮ ಮಾದರಿಗಾಗಿ ಗುಜರಾತ ಹಾಗೂ ಕರ್ನಾಟಕ ಸರ್ಕಾರಗಳಿಂದ ಪ್ರಶಸ್ತಿ ಪಡೆದಿದೆ.
- ನಬಾರ್ಡ್ ಬ್ಯಾಂಕ್ ಈ ಗಾಡಿಯ ಬೆಲೆಯನ್ನು ದೃಢೀಕರಿಸಿ ಒಪ್ಪಿದ್ದು, ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದಾಗಿದೆ.

ಬೆಲೆ

ಆರುಣಿ ಎತ್ತಿನ ಗಾಡಿಯು ಮೂರು ಮಾದರಿಗಳಲ್ಲಿ ದೊರಕುತ್ತದೆ. ನಾಲ್ಕು ಚಕ್ರವಿರುವ ಮಾದರಿ ಹೆಚ್ಚು ಕಾಲ ಬಾಳಿಕೆ ಬರುವುದು ಹಾಗೂ ಹೆಚ್ಚು ಉಪಯೋಗ ಕೂಡಾ ಹೌದು. ಆದರೆ, ಬೆಲೆ ಜಾಸ್ತಿ. ಆದರೂ, ಮಧ್ಯಮ ಮತ್ತು ದೊಡ್ಡ ರೈತರಿಗೆ ಈ ನಾಲ್ಕು ಚಕ್ರದ ಗಾಡಿ ಅತೀ ಸೂಕ್ತ. ಆದರೆ, ಸಣ್ಣ ರೈತರು ಸಾಧಾರಣ ಎತ್ತಿನ ಗಾಡಿಗಿಂತ ಅಧಿಕ ಬೆಲೆ ತೆರಲು ಸಿದ್ಧರಾಗಿರವುದಿಲ್ಲ. ಹಾಗಾಗಿ ಇಂತಹ ರೈತರು ಕಡಿಮೆ ಬೆಲೆಯ ಎರಡು ಚಕ್ರದ ಗಾಡಿಯನ್ನು ಖರೀದಿಸುವುದು ಸೂಕ್ತ.

ಮಾದರಿ:	ಆರುಣಿ ಶ್ರೇಷ್ಠ,	ಆರುಣಿ ಅಧ್ಯಾತನ,	ಆರುಣಿ ಎರಡು ಚಕ್ರ
ಬೆಲೆ:	ರೂ.28,000/-	ರೂ.20,000/-	ರೂ.12,500/-

ತಂತ್ರಜ್ಞಾನದ ವರ್ಗಾವಣೆ

1997ರಲ್ಲಿ ಹನೀಬೀ ಜಾಲ ತಳಮಟ್ಟದ ಸಂಶೋಧಕರ ಸಂಶೋಧನೆಗಳ ನೆರವಿಗಾಗಿ 'ಗುಜರಾತ್ ಗ್ರಾಸ್‌ರೂಟ್ ಇನ್ನೋವೇಷನ್ ಆಗ್‌ಮೆಂಟೇಷನ್ ನೆಟ್ ವರ್ಕ್'(GIAN)ನ್ನು ಸ್ಥಾಪಿಸಿತು. ಅಷ್ಟೇ ಅಲ್ಲ GIAN ಅಮೃತಾಭಾಯಿಯ ಹೆಸರಿನಲ್ಲಿ ಪೇಟೆಂಟ್ (217/Cal/98 ದಿನಾಂಕ 14 ಡಿಸೆಂಬರ್1998)ಗಾಗಿ ಪ್ರಯತ್ನಿಸಿತು.

ಸಂಶೋಧಕ ಅಮೃತಾಭಾಯಿ ತನ್ನ ಸಂಶೋಧನೆಗೆ ಆರ್ಥಿಕವಾಗಿ ನೆರವು ನೀಡಿದ `ಸೃಷ್ಟಿ' ಸಂಸ್ಥೆಗೆ ಆರುಣಿ ಗಾಡಿಯ ಮೇಲಿನ ಹಕ್ಕನ್ನು ಒಪ್ಪಿಸಿದ. ಈಗ ಗುಜರಾತಿನ 5 ಜಿಲ್ಲೆಗಳಿಗೆ ಆರುಣಿ ಎತ್ತಿನಗಾಡಿ ಸಿದ್ಧಪಡಿಸಿಕೊಡಲು 3 ಜನ ಉದ್ಯಮಿಗಳಿಗೆ ಲೈಸನ್ಸ್ ಕೊಡಲಾಗಿದೆ. ಈಗಾಗಲೇ ಹೀಗೆ ಕೊಟ್ಟ ಲೈಸನ್ಸ್‌ನಿಂದಾಗಿ ಅಮೃತಾಭಾಯಿಗೆ ಸುಮಾರು ರೂ. ಒಂದು ಲಕ್ಷ ಹಣ ದೊರಕಿದೆ. `ಬೌದ್ಧಿಕ ಸನ್ನದಿನ ಹಕ್ಕು' ಹಾಗೂ ಪೇಟೆಂಟ್‌ನಿಂದಾಗಿ ಅಮೃತಾಭಾಯಿಗೆ ಇಷ್ಟೊಂದು ಹಣ ದೊರಕುವಂತಾಗಿದೆ. ಇಲ್ಲಿಯವರೆಗೆ ಯಾವುದೇ ತಂತ್ರಜ್ಞಾನದ ಲೈಸೆನ್ಸ್ ಜಿಲ್ಲೆಗಳ ಗಡಿಗೆ ಮೀಸಲಾಗಿರಲಿಲ್ಲ. ಅದರಲ್ಲೂ ಕೇವಲ 5 ವರ್ಷಗಳಿಗೆ ಮಾತ್ರ ಈ ಲೈಸೆನ್ಸ್ ಸೀಮಿತ. 5 ವರ್ಷದ ನಂತರ ಬೇಕಾದರೆ, ಉದ್ಯಮಿಗಳು ಮತ್ತೆ ಸಂಶೋಧಕರನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು.

ಪ್ರಯತ್ನಕ್ಕೆ ನಿಧಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ `ತಂತ್ರಜ್ಞಾನ ಅಭಿವೃದ್ಧಿ ಯೋಜನೆ' (TePP), ವಿಜ್ಞಾನ ಮತ್ತು ಕೈಗಾರಿಕಾ ಇಲಾಖೆ ಹಾಗೂ ಭಾರತ ಸರ್ಕಾರ ಒಟ್ಟಾಗಿ 5 ಲಕ್ಷ ರೂಪಾಯಿಗಳನ್ನು ಸಹಾಯಧನವಾಗಿ GIAN ಮುಖಾಂತರ ಅಮೃತಾಭಾಯಿಗೆ ಒದಗಿಸಿದೆ. ಈಗ ಅಮೃತಾಭಾಯಿ TePP ಯ ನೆರವಿನಿಂದ ಕಬ್ಬು, ಎತ್ತುವ, ಒಂಟೆಯ ನೆರವಿನಿಂದ ನಡೆಯುವ ಎತ್ತಿನಗಾಡಿಗಳನ್ನು ಸಿದ್ಧಪಡಿಸುವ ಯೋಜನೆಯಲ್ಲಿದ್ದಾರೆ. ಇದರ ಜೊತೆಗೇ, ವೇರೋಟೆಕ್ಸ್ ಎಂಬ ಉದ್ಯಮ ಕಂಪೆನಿ (ಫ್ರೆಂಚ್ ಮೂಲದ ಸೈಂಟ್ ಗೋಬಿನ್ ಸಂಸ್ಥೆಯ ಒಂದು ಅಂಗ ಸಂಸ್ಥೆ)ಯ ನೆರವಿನಿಂದ ಫೈಬರ್ ರೀ ಇನ್‌ಫೋರ್ಸ್ಡ್ ಪ್ಲಾಸ್ಟಿಕ್‌ನಿಂದ ಎತ್ತಿನ ಗಾಡಿ ಸಿದ್ಧಪಡಿಸುವ ಪ್ರಯತ್ನ ನಡೆಸಿದ್ದಾರೆ.

ಎತ್ತಿನ ಗಾಡಿಯ ಮಾರಾಟ

ಒಟ್ಟಾರೆ 38 ಗಾಡಿಗಳು ಗುಜರಾತಿನಲ್ಲಿ ಮಾರಾಟವಾಗಿದೆ. ಅದರಲ್ಲಿ 32 ಗಾಡಿಗಳು ಕಳೆದ 2 ವರ್ಷಗಳಲ್ಲಿ ಸಹಾಯಧನದ ನೆರವಿನಿಂದ ಮಾರಾಟವಾಗಿವೆ. ಇನ್ನುಳಿದಂತೆ 4 ಗಾಡಿಗಳು ಗುಜರಾತಿನಿಂದ ಹೊರಗೆ ಮಾರಾಟವಾಗಿವೆ. ಅದರಲ್ಲಿ 2 ರಾಜಸ್ಥಾನದಲ್ಲೂ ಮತ್ತೆರಡು ಕರ್ನಾಟಕದಲ್ಲೂ ಮಾರಾಟವಾಗಿದೆ. ಆರುಣಿ ಎತ್ತಿನ ಗಾಡಿಯನ್ನು ಕೊಳ್ಳ ಬಯಸುವವರು ಈ ಕೆಳಗಿನ ವಿಳಾಸಗಳಿಗೆ ಸಂಪರ್ಕಿಸಬಹುದು.
1) ಗುಜರಾತಿನ ಅಹಮದಾಬಾದ್, ಭಾವನಗರ, ಸಬರಕಾಂತಾ, ಬನ್ಸಕಾಂತಾ, ಮೆಹಸಾನ ಜಿಲ್ಲೆಗಳ ಹೊರತಾಗಿ ಉಳಿದ ಕಡೆಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು: ಶ್ರಿ ಅಮೃತಾಲ ಬಿ. ಅಗರವಾತ, ಫಿಕೋರ, ಮಲಿಯ– ಹಟಿನಾ ತಾಲ್ಲೂಕು, ಜುನಾಗಡಾ ಜಿಲ್ಲೆ, ಪಿನ್ ಕೋಡ್ 362245 ದೂರವಾಣಿ : 02878-84386

2) ಗುಜರಾತಿನ ಅಹಮದಾಬಾದ್ ಜಿಲ್ಲೆಗೆ: M/s ಶಿವಾ ಇಂಜಿನಿಯರಿಂಗ್ ವರ್ಕ್ಸ್, Main Bazar, ರಾನಪುರ, ಅಹಮದಾಬಾದ್ ಜಿಲ್ಲೆ, ಪಿನ್ ಕೋಡ್ 363610 ದೂರವಾಣಿ : 02711-38122/ 38176

3) ಗುಜರಾತಿನ ಭಾವನಗರ ಜಿಲ್ಲೆಗೆ: M/s ಅಂಬಿಕಾ ಆಗ್ರೊ ಇಂಡಸ್ಟ್ರೀಸ್, ಲಾಟ ಬಜಾರ್, ಗೋಪನಾತ್ ರಸ್ತೆ, ತಲಾಜಾ, ಭಾವನಗರ ಜಿಲ್ಲೆ - 364140, ದೂರವಾಣಿ:02842-22231

4) ಗುಜರಾತಿನ ಸಬರಕಾಂತಾ, ಬನ್ಸಕಾಂತಾ, ಮೆಹಸಾನ ಜಿಲ್ಲೆಗಳಿಗೆ: ಕಿಸಾನ್ ಇಂಡಸ್ಟ್ರೀಸ್, 41, ಜಿ.ಐ.ಡಿ.ಸಿ. ಎಸ್ಟೇಟ್, ವಿಸನಗರ, ಮೆಹಸಾನ ಜಿಲ್ಲೆ - 384315, ದೂರವಾಣಿ: 02765-31097

ಏ.ಸೂ. 1996 ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಮೇಳದಲ್ಲಿ ಅಮೃತಬಾಯಿ ಸ್ವತ: ತನ್ನ ಈ ಆರುಣಿ ಬಾಗುವ ಎತ್ತಿನ ಗಾಡಿಯನ್ನು ತಂದು ಪ್ರದರ್ಶನಕ್ಕೆ ಇಟ್ಟಿದ್ದರು. ಇದು ಕರ್ನಾಟಕ ರಾಜ್ಯದ ರೈತರ ಮತ್ತು ವಿಜ್ಞಾನಿಗಳ ಪ್ರಶಂಸೆಗೆ ಪಾತ್ರವಾಗಿತ್ತು. ನಂತರ ಅಮೃತಬಾಯಿಯ ಈ ಬಾಗುವ ಎತ್ತಿನ ಗಾಡಿಗೆ ರೈತರಿಂದ ಆಯ್ಕೆಯಾದ ಉತ್ತಮ ಪ್ರದರ್ಶನ ಎಂದು ಬಹುಮಾನ ಕೂಡ ಬಂದಿತ್ತು.

ಸಾವಯವ ಕೃಷಿಕ ಹಾಲೂರಿನ ವಿಜಯಕುಮಾರ್

ಚಿತ್ರಶೇಖರ್ ಡಿ.ಎಂ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಬೆಂಗಳೂರು-ನೆಲಮಂಗಲ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಬರುವಂತಹ ಹಾಲೂರು ಗ್ರಾಮಕ್ಕೆ ಸೇರಿದ ಒಂದು ದಿಣ್ಣೆ ಜಮೀನಿನಲ್ಲಿ ಎಲ್ಲಿ ನೋಡಿದರೂ ಫ್ಯಾಕ್ಟರಿ, ರೆಸಾರ್ಟ್, ಟೌನ್‌ಶೀಪ್ ಇವುಗಳನ್ನು ಕಾಣಬಹುದು. ಇವುಗಳ ನಡುವೆಯೂ ಹಸಿರು ಉಕ್ಕುತ್ತಿರುವ ವಿಜಯಕುಮಾರ್‌ರವರ ಸಾವಯವ ಕಾಯಕದ ತೋಟ ಒಂದು ಆಶ್ಚರ್ಯವೇ ಸರಿ.

ಈ ಭೂಮಿಯನ್ನು ಸುಮಾರು 20 ವರ್ಷಗಳ ಹಿಂದೆ ವಿಜಯಕುಮಾರ್‌ರವರ ತಂದೆ ಖರೀದಿಸಿದ್ದರು. ಇವರು ಕಾರ್ಮಿಕರಾಗಿದ್ದು, ವಾಸ ನಗರದಲ್ಲಿಯೇ ಇದ್ದರೂ ಸಹ ಭೂಮಿಯ ವ್ಯಾಮೋಹದಿಂದಾಗಿ ಹಾಲೂರಿನ ಜನತೆಗೆ ಬರಡಂತೆ ಕಂಡ 25 ಎಕರೆ ಭೂಮಿ ಖರೀದಿ ಮಾಡಿದ್ದರಷ್ಟೇ ಹೊರತು ಅಲ್ಲಿ ಏನೂ ಬೆಳೆದಿರಲಿಲ್ಲ. ನಂತರದ ದಿನಗಳಲ್ಲಿ ವಿಜಯಕುಮಾರ್ ತಮ್ಮ ಮನೆಯ ಅಂಗಳದಲ್ಲಿದ್ದ ಬಾಳೆ ಗಿಡಕ್ಕೆ ವ್ಯಾಮೋಹಿತರಾಗಿ ವಿದ್ಯಾಭ್ಯಾಸವನ್ನು ಪಿ.ಯು.ಸಿ.ಗೆ ನಿಲ್ಲಿಸಿ, ತಮ್ಮನ್ನು ಸಂಪೂರ್ಣವಾಗಿ ಕೃಷಿಗೆ ತೊಡಗಿಸಿಕೊಂಡು, ಹಲವಾರು ಕೃಷಿಗೆ ಸಂಬಂಧಪಟ್ಟ ತರಬೇತಿಗಳನ್ನು ಪಡೆದರು. ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟು ದಿಢೀರನೆ ಕೃಷಿಗೆ ಇಳಿದಿದ್ದನ್ನು ನೋಡಿ ಅವರ ತಂದೆಗೆ ಆಶ್ಚರ್ಯ ಹಾಗೂ ಸಂತೋಷ, ಆದರೆ ನೆಂಟರಿಷ್ಟರು, ಸ್ನೇಹಿತರು ನಕ್ಕಿದ್ದೂ ಉಂಟು. ಇದಾವುದಕ್ಕೂ ಗಮನ ಕೊಡದೆ ತಾವೇ ಸ್ವತ: ಗುಂಡಿಗಳನ್ನು ತೆಗೆದು ತೆಂಗಿನ ಗಿಡ ನೆಟ್ಟು, ಕೆರೆಯಿಂದ ಕೊಡದಲ್ಲಿ ನೀರನ್ನು ತಂದು ಹಾಕಿ ಬೆಳೆಸುವುದರಿಂದ ಅವರ ಕೃಷಿ ಆರಂಭವಾಯಿತು. ಸಾವಯವ ಕೃಷಿಕರಾಗಿದ್ದ ಇವರು ಕೃಷಿಯ ಮೇಲಿನ ಒಲವನ್ನು ಶೋಭ ನೈಸರ್ಗಿ, ನಿಸರ್ಗದರ್ಶಿನಿ ಮತ್ತು ವಿವೇಕ್ ಸಾವಯವ್ ಎಂದು ತಮ್ಮ ಮಕ್ಕಳಿಗೆ ಕೃಷಿಗೆ ಸಂಬಂಧಿಸಿದ ಹೆಸರಿಡುವ ಮೂಲಕವೂ ವ್ಯಕ್ತಪಡಿಸಿದ್ದಾರೆ.

ವಿಜಯ್‌ಕುಮಾರ್ ಅವರ ಕೃಷಿ ಭೂಮಿ, ಉದ್ಯಮಿಗಳ ಅಥವಾ ಶೋಕಿದಾರರ ಕೃಷಿ ತೋಟದಂತಿರದೆ, ಒಬ್ಬ ನಿಪುಣ ಸಾಂಪ್ರದಾಯಿಕ ಹಾಗೂ ಆಧುನಿಕತೆಯನ್ನೊಳಗೊಂಡ ರೈತನ ತೋಟದಂತಿದೆ. ತೋಟದ ಮುಖ್ಯ ದ್ವಾರದಲ್ಲಿ ಮನೆ, ಮನೆಯ ಪಕ್ಕದಲ್ಲಿ ವಿವಿಧ ಕೃಷಿ ಉಪಕರಣಗಳು, ಹಿಂಭಾಗದಲ್ಲಿ ಗೊಬ್ಬರ ಅನಿಲದ ಯಂತ್ರ, ಸ್ವಲ್ಪ ಮುಂದೆ ಕಾಂಪೋಸ್ಟ್ ಗೊಬ್ಬರದ ಗುಂಡಿಗಳು, ಎಡಭಾಗದಲ್ಲಿಯೆ ಭತ್ತದ ಗದ್ದೆ, ಬಲಭಾಗದಲ್ಲಿ ತೆಂಗಿನ ತೋಟ, ಬದುವಿನ ಮೇಲೆ ವಿವಿಧ ಹಣ್ಣು, ಹೂ ಬಿಡುವ ಹಾಗೂ ಗೊಬ್ಬರಕ್ಕೆ ಉಪಯೋಗಿಸಲು ಹಸಿರೆಲೆ ಗಿಡಗಳು, ಮನೆಯ ಪಕ್ಕದಲ್ಲಿಯೇ ಎರೆಹುಳು ಸಾಕುವ ತೊಟ್ಟಿಗಳು ಮತ್ತು ಅದರ ಮುಂದೆ ಗದ್ದೆಗೆ ಪಾಚಿ ಸಂಗ್ರಹಿಸುವ ತೊಟ್ಟಿಗಳು, ಮನೆಯಲ್ಲಿ ಯೇ ದವಸ ಧಾನ್ಯಗಳ ಸಂಗ್ರಹಣೆ। ಇವರ ತೋಟದಲ್ಲಿ ಮನುಷ್ಯನ ಜೀವನಕ್ಕೆ ನಿತ್ಯ ಅವಶ್ಯಕವಾಗಿರುವಂತಹ ಎಲ್ಲ ಬೆಳೆಯ ಗಿಡ, ಮರ, ಬಳ್ಳಿಗಳು ಹಾಗೂ ತೋಟದ ತುಂಬೆಲ್ಲ ಓಡಾಡುವ ಕೋಳಿಗಳು, ದನಕರುಗಳು ಸಿಗುತ್ತವೆ. ಇವರು ಅಂಗಡಿಯಿಂದ ಕೊಂಡುತರುವಂತಹದ್ದು ತೀರ ಕಡಿಮೆ.

ವಿಜಯಕುಮಾರ್ ಎಂದೂ ಸಂಪ್ರದಾಯವನ್ನು ಕಡೆಗಣಿಸಿದವರಲ್ಲ, ಸಂಪ್ರದಾಯದೊಂದಿಗೆ ವೈಜ್ಞಾನಿಕತೆಯನ್ನು ಬಳಸಿಕೊಂಡು ಕೃಷಿ ಮಾಡುತ್ತಿರುವವರು. ಕೃಷಿ ಆರಂಭಿಸಿದ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳನ್ನು ಬಳಸಿದ್ದರು. ಇದರಿಂದ ಭೂಮಿಯ ಫಲವತ್ತತೆ ಕ್ಷೀಣಿಸುವುದರೊಂದಿಗೆ ವೆಚ್ಚ ದುಬಾರಿಯಾಗುವುದು ಮನವರಿಕೆಯಾಗಿ ಪರ್ಯಾಯವಾಗಿ ಸಾವಯವ ಕೃಷಿ ಪದ್ಧತಿಯತ್ತ ಗಮನ ಹರಿಸುವಂತಾದರು.

ಸಾವಯವ ಕೃಷಿಯಲ್ಲಿ ಬೆಳೆದಾಗ ರಾಗಿ, ಭತ್ತ ಮತ್ತು ತೊಗರಿ ಇವು ಪ್ರಾರಂಭದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಇಳುವರಿ ನೀಡಲಿಲ್ಲ. ನಂತರದ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಬರುವ ಇಳುವರಿ ಶೇಕಡ ಒಂದು ಅಥವಾ ಎರಡರಷ್ಟು ಕಡಿಮೆಯಾದರೂ ಸಹ ಸಾವಯವ ಕೃಷಿ ಲಾಭದಾಯಕವೆಂದು ಮನಗಾಣಿಕೆಯಾಯಿತು. ದಿನೇ ದಿನೇ ಭೂಮಿಯ ಫಲವತ್ತತೆ ಹೆಚ್ಚುತ್ತಲಿದ್ದು, ಅಂದು ಬರಡಾಗಿದ್ದ ಭೂಮಿ ಇಂದು ಹಚ್ಚಹಸಿರು ಕಂಗೊಳಿಸುವಂತಾಯ್ತು.

ಸಾವಯವ ಕೃಷಿ ವಿಧಾನದಲ್ಲಿ ಭತ್ತದ ಬೆಳೆ

ಸಾಮಾನ್ಯವಾಗಿ ಸಾವಯವ ಕೃಷಿಕರು ಭತ್ತವನ್ನು ನಾಟಿ ಮಾಡುವುದು ಕಡಿಮೆ. ನಾಟಿ ತಳಿ ಭತ್ತವನ್ನು ಒಣ ಕೃಷಿ ವಿಧಾನಲ್ಲಿ ಬಿತ್ತನೆ ಮಾಡಿ ಬೆಳೆಯುತ್ತಾರೆ. ಆದರೆ ವಿಜಯಕುಮಾರ್‌ರವರು ಮಿಶ್ರತಳಿ ಬೀಜಗಳನ್ನು ಉಪಯೋಗಿಸಿ ಕೆಸರುಗದ್ದೆಯಲ್ಲಿ ಪೈರನ್ನು ನಾಟಿ ಮಾಡುತ್ತಾರೆ. ಇವರು ಕೆಸರು ಗದ್ದೆಯಲ್ಲಿ ಉಳುಮೆ ಮಾಡುವುದಕ್ಕಿಂತ 2-3 ತಿಂಗಳ ಮುಂಚೆ ಹಸಿರೆಲೆ ಗೊಬ್ಬರಕ್ಕೆಂದು ಸೆಣಬು ಸಸ್ಯಗಳನ್ನು ಬೆಳೆಸುತ್ತಾರೆ. ಈ ಸಸ್ಯಗಳನ್ನು ಅನಂತರ ನೇರವಾಗಿ ಗದ್ದೆಯ ಉಳುಮೆಯ ಮುಖಾಂತರ ಭೂಮಿಗೆ ಸೇರಿಸುತ್ತಾರೆ. ಇದಲ್ಲದೆ ತಮ್ಮ ತೋಟದ ಸುತ್ತ ಇರುವಂತಹ ಬೇಲಿ ಸೊಪ್ಪು, ಮನೆಯ ಮುಂದಿರುವ ಶೋ ಗಿಡದ ಎಲೆಗಳನ್ನು ಕೆಸರು ಗದ್ದೆಗೆ ತುಳಿಯುತ್ತಾರೆ. ಸಂಪೂರ್ಣವಾಗಿ ಮಣ್ಣು ಹಸನಾದ ನಂತರ ಪೈರನ್ನು ನಾಟಿ ಮಾಡುತ್ತಾರೆ. ನಾಟಿ ಮಾಡಿದ 15-20 ದಿನ ಕಳೆದ ಮೇಲೆ ಜೀವ ಚೈತನ್ಯ ಗೊಬ್ಬರದ ನೀರನ್ನು ಎರಚುತ್ತಾರೆ.

ಜೀವ ಚೈತನ್ಯ ವಿಧಾನ

ವಿಜಯಕುಮಾರರ ಈ ಪದ್ಧತಿ ಪೀಟರ್ ಪ್ರಾಕ್ಟರ್ Bio dynamic Farming ರೀತಿಯದ್ದು. ಈ ಜೀವ ಚೈತನ್ಯ ಗೊಬ್ಬರವನ್ನು ಹಸುವಿನ ಕೊಂಬಿನಲ್ಲಿ ಸಗಣಿಯನ್ನು ತುಂಬಿ ಸುಮಾರು 4 ತಿಂಗಳವರೆಗೆ ಭೂಮಿಯಲ್ಲಿ ಹೂತಿಟ್ಟು ತಯಾರಿಸುವಂತಹದು, ಇದನ್ನು ಅಕ್ಟೋಬರ್ ತಿಂಗಳಲ್ಲಿ ಭೂಮಿಯಲ್ಲಿ ಹೂತಿಡಬೇಕು. ಇದಕ್ಕಾಗಿ ಬಳಸುವಂತಹ ಹಸುವಿನ ಕೊಂಬು, ಹಸು ತನ್ನ ಜೀವಿತ ಅವಧಿಯಲ್ಲಿ ಒಂದು ಸಾರಿಯಾದರೂ ಕರುವನ್ನು ಹಾಕಿರಬೇಕು. ಒಂದು ಎಕರೆ ನಾಟಿ ಮಾಡಿದ ಗದ್ದೆಗೆ ಈ ಜೀವ ಚೈತನ್ಯ ಗೊಬ್ಬರದ 5 ಗ್ರಾಂ ತೆಗೆದುಕೊಂಡು 100 ಲೀಟರ್ ನೀರು ಮತ್ತು 20 ಕೆ.ಜಿ. ಸಗಣಿಯನ್ನು ಸೇರಿಸಿ ಸುಳಿ ಬರುವವರೆಗೆ ಚೆನ್ನಾಗಿ ತಿರುಗಿಸಿಕೊಂಡ ಗೊಬ್ಬರದ ನೀರನ್ನು ಗದ್ದೆಗಳಿಗೆ ಎರಚಬೇಕು. ಈ ರೀತಿ ಎರಚುವುದರಿಂದ ಗದ್ದೆಗಳಿಗೆ ಯಾವುದೇ ರೋಗ ಬರುವುದಿಲ್ಲ, ಒಳ್ಳೆಯ ಇಳುವರಿ ಪಡೆಯಬಹುದು, ಭೂಮಿಯ ಫಲವತ್ತತೆಯೂ ಹೆಚ್ಚುತ್ತದೆ ಎಂದು ಹೇಳುತ್ತಾರೆ. 502, 507, 508 ಎಂಬುದು ಪ್ರೀಟರ್ ಪ್ರಾಕ್ಟರ್ ಪರಿಚಯಿಸಿದ ಜೀವ ಚೈತನ್ಯ ಗೊಬ್ಬರ ಸಿದ್ಧತೆಯ ವಿಧಾನಗಳು. ಇದರ ಬಗ್ಗೆ ಹೆಚ್ಚಿನ ವಿವರವನ್ನು ಬೆಂಗಳೂರು ICRA ಸಂಸ್ಥೆ ಪ್ರಕಟಿಸಿದ `ಜೀವ ಚೈತನ್ಯ ಕೃಷಿ ಮತ್ತು ತೋಟಗಾರಿಕೆ' ಪುಸ್ತಕದಿಂದ ಪಡೆಯಬಹುದು.

(ಈ ಜೀವ ಚೈತನ್ಯ ಗೊಬ್ಬರ ತಯಾರಿಸುವ ವಿಧಾನವನ್ನು ನಮ್ಮ ಹಿಂದಿನ ಸಂಚಿಕೆಯಾದ 1996 ರ ಪೈರು 2 ಕೊಯಿಲು 1 ರಲ್ಲಿ ಪ್ರಕಟಿಸಲಾಗಿದೆ.)

ನಾಟಿ ಮಾಡಿದ ಗದ್ದೆಗೆ ರೋಗ ಬಂದರೆ

ಭತ್ತದ ಗದ್ದೆಗೆ ಸಾಮಾನ್ಯವಾಗಿ ಬೆಂಕಿ ರೋಗ, ದುಂಡಾಣು ರೋಗ, ಎಲೆಚುಕ್ಕೆರೋಗ ಇಂತಹ ರೋಗಗಳು ಬರುತ್ತವೆ. ಈ ರೋಗಗಳು ಸಾಮಾನ್ಯವಾಗಿ ಹೈಬ್ರಿಡ್ ತಳಿಗಳಿಗೆ ಬರುವುದು ಹೆಚ್ಚು, ನಾಟಿ ತಳಿಗಳಿಗೆ ಬರುವುದು ಕಡಿಮೆ, ಬಂದರೂ ರೋಗ ನಿರೋಧಕ ಶಕ್ತಿ ಇವುಗಳಲ್ಲಿ ಇದೆ. ಈ ರೋಗವನ್ನು ನಿಯಂತ್ರಿಸಲು ಸಾವಯವ ಪದ್ಧತಿಯಲ್ಲಿ ಹೋಮಿಯೋಪತಿಗೆ ಸಂಬಂಧಿಸಿದಂತೆ ಕೆಲವೊಂದು ಔಷಧಿಯನ್ನು ವಿಜಯ ಕುಮಾರ್ ಬಳಸುತ್ತಾರೆ.

ಗದ್ದೆಗಳಲ್ಲಿ ಕೀಟಗಳ ಹಾವಳಿಯನ್ನು ನಿಯಂತ್ರಿಸಲು ಹಕ್ಕಿ–ಪಕ್ಷಿಗಳು ಕೂರುವ ಹಾಗೆ ಗದ್ದೆಯ ಮಧ್ಯದಲ್ಲಿ ಅಲ್ಲಲ್ಲಿ ಕಡ್ಡಿಗಳನ್ನು ನೆಡಬೇಕು. ಗದ್ದೆಗಳಲ್ಲಿ ಜೇಡ ಬಲೆ ಕಟ್ಟಿದರೆ ಒಳ್ಳೆಯದು. ಕಪ್ಪೆ, ಮೀನು, ಏಡಿ ಇಂತಹವುಗಳು ಗದ್ದೆಯಲ್ಲಿ ಇರುವ ಹಾಗೆ ನೋಡಿಕೊಳ್ಳಬೇಕು. ಇವು ಸ್ವಾಭಾವಿಕವಾಗಿ ಕೀಟಗಳನ್ನು ನಿಯಂತ್ರಣದಲ್ಲಿ ನೆರವಾಗುತ್ತವೆ.

(ಇಂತಹುದೇ ವಿಧಾನವನ್ನು ಹಾಸನದ ಸಾವಯವ ಕೃಷಿಕರಾದ ಬಸವರಾಜ ಸಂತೇ ಶಿವರರು ಅನುಸರಿಸುತ್ತಿದ್ದಾರೆ. - ಸಂ).

ಸಾವಯವ ಕೃಷಿಯಲ್ಲಿ ತೊಗರಿ

ತೊಗರಿ ಇತ್ತೀಚಿನ ಕೆಲವು ವರ್ಷಗಳ ಹಿಂದೆ ಬೀದರ್, ಗುಲ್ಬರ್ಗ ಜಿಲ್ಲೆಯ ಕೆಲವು ಸಣ್ಣ ರೈತರ ಆತ್ಮಹತ್ಯೆಗೆ ಕಾರಣವಾದಂತಹ ಬೆಳೆ. ಆದರೆ ಆ ರೈತರು ತೊಗರಿಯನ್ನು ಸಾವಯವ ವಿಧಾನದಲ್ಲಿ ಬೆಳೆದಿದ್ದರೆ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲವೇನೋ. ವಿಜಯಕುಮಾರ್ ತೊಗರಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಿಲ್ಲ, ಇವರ ಪ್ರಕಾರ ತೊಗರಿಯನ್ನು ಎಷ್ಟು ವಿರಳವಾಗಿ ಬೆಳೆಯುತ್ತಾರೋ ಅಷ್ಟು ಒಳ್ಳೆಯದು. ಅಂದರೆ ತೊಗರಿಗೆ ಗಾಳಿ, ಬಿಸಿಲು ಬಹಳ ಮುಖ್ಯ ಎಂದು ಹೇಳುತ್ತಾರೆ. ಇವರು ತೊಗರಿ ಬೀಜವನ್ನು ನೆಡುವ ಮೊದಲು ಚೆನ್ನಾಗಿ ಉಳುಮೆ ಮಾಡುತ್ತಾರೆ. ನಂತರ ಸಾಲಿಗೆ ಕಾಂಪೋಸ್ಟ್ ಗೊಬ್ಬರವನ್ನು ಸೇರಿಸಿ, ತೊಗರಿಯ ಬೀಜವನ್ನು ಬಿತ್ತುತ್ತಾರೆ, ಬಿತ್ತಿದ 40 ದಿವಸದೊಳಗೆ ಬುಡಕ್ಕೆ ಮಣ್ಣನ್ನು ಕೊಡುವ ಮೊದಲು ಕಳೆ ಬಂದಿರುತ್ತದೆ (ತೊಗರಿಗೆ ಗಿಡದಿಂದ ಗಿಡಕ್ಕೆ , ಸಾಲಿನಿಂದ ಸಾಲಿಗೆ ಅಂತರ ಹೆಚ್ಚು ಇದ್ದರೆ ಕಳೆಯು ಸಹ ತುಂಬ ಹುಲುಸಾಗಿ ಬರುತ್ತದೆ). ಈ ಕಳೆಯನ್ನು ತೆಗೆಯುವ ಮುನ್ನ ತೊಗರಿ ಗಿಡದ ಬುಡಕ್ಕೆ ಭತ್ತದ ಒಣ ಹುಲ್ಲು, ಅದರ ಮೇಲೆ ಗೋಬರ್ ಗ್ಯಾಸಿನ ಸಗಣಿಯ ಸ್ಲರಿಯನ್ನು ಹಾಕಿ, ಮೇಲಿನಿಂದ ಕಳೆಯನ್ನು ಹಾಕಿ, ಕಳೆಯ ಮೇಲೆ ಮಣ್ಣನ್ನು ಹಾಕುವುದರಿಂದ ತೊಗರಿಗೆ ಯಾವುದೇ ರೋಗ ಬರುವುದಿಲ್ಲ. ಜೊತೆಗೆ ಒಳ್ಳೆಯ ಇಳುವರಿಯೂ ಬರುತ್ತದೆ. ತೊಗರಿ ಹೂ ಬಿಡುವ ವೇಳೆ ಹುಳು ಬೀಳುವ ಸಾಧ್ಯತೆ ಇರುತ್ತದೆ, ಹುಳುಗಳೇನಾದರೂ ಬಿದ್ದರೆ ಈ ಹುಳುಗಳನ್ನೇ ಅರೆದು ನೀರಿಗೆ ಬೆರೆಸಿ ಸಿಂಪಡಿಸುತ್ತಾರಂತೆ!


ಟೊಮೊಟೊ ಕಾಯಿಗೆ ಹುಳು ಬಿದ್ದರೆ

ಹುಳುಗಳ ಬಾಧೆಯನ್ನು ತಪ್ಪಿಸಲು ಬೇವಿನ ಎಲ್ಲಾ ಅಂಶವನ್ನು ಉಪಯೋಗಿಸಬಹುದು ಎನ್ನುವುದು ವಿಜಯಕುಮಾರರ ಅಭಿಪ್ರಾಯ. ಬೇವಿನ ಎಲೆಯನ್ನು ನೀರಿನಲ್ಲಿ ನೆನೆಸಿ ಚೆನ್ನಾಗಿ ಅರೆದು ಒಂದು ಲೀಟರ್ ಸಾಬೂನು ಬೆರೆಸಿದ ನೀರಿನೊಂದಿಗೆ ಕಲಸಿ ನಂತರ ಸೋಸಿ ಸಿಂಪಡಿಸಬಹುದು. ಅಥವಾ 100 ಗ್ರಾಂ ಬೇವಿನ ಹಿಂಡಿಯನ್ನು ಒಂದು ರಾತ್ರಿ ನೆನಸಿ ಒಂದು ಲೀಟರ್ ನೀರಿಗೆ ಬೆರೆಸಿಕೊಂಡು ಕೂಡ ಬಳಸಬಹುದು. ಇವರು ಕೆಲವೊಂದು ವಿಶೇಷ ಪ್ರಯೋಗಗಳನ್ನು ನಡೆಸುತ್ತಿರುವರು. ಇವರ ಪ್ರಯೋಗ ಮನೋಭಾವಕ್ಕೆ ಸಾಕ್ಷಿಯಾಗಿ ಹಲವು ಉದಾಹರಣೆ ತೋಟದಲ್ಲೂ ಕಂಡುಬರುತ್ತದೆ.

ಗದ್ದೆ ಪೈರನ್ನು 8 ಇಂಚಿಗೆ ಒಂದರಂತೆ ನಾಟಿ ಮಾಡಿಸಿದ್ದಾರೆ. ಇತರರಿಗಿಂತ ಕಡಿಮೆ ಪೈರು ನಾಟಿ ಮಾಡಿದರೂ, ಇದರಲ್ಲಿ ಅಧಿಕ ಇಳುವರಿ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಬಾಳೆಯನ್ನು ನೆಟ್ಟು ಬಾಳೆಗಿಡದ ತಳಭಾಗದಿಂದ ಮೇಲಕ್ಕೆ ಒಂದು ಸಣ್ಣ ಪೈಪ್ ಅಳವಡಿಸಿ ಅದಕ್ಕೆ ನೇರವಾಗಿ ಕಾಂಪೋಸ್ಟ್ ಗೊಬ್ಬರದ ನೀರನ್ನು ಕೊಡುತ್ತಿದ್ದಾರೆ. ಎರೆಹುಳುವಿನ ಗೊಬ್ಬರವನ್ನು ತಯಾರಿಸಿ ತಾವು ಉಪಯೋಗಿಸುವುದಲ್ಲದೆ ಇತರ ರೈತರಿಗೂ ಹಂಚುತ್ತಾರೆ. ಅವರ ತೋಟದ ಸುತ್ತಮುತ್ತಲ ರೈತರ ಬೆಳೆಗಳಿಗೆ ತೊಂದರೆ ಉಂಟಾದರೆ ಅವರಿಗೆ ಸೂಕ್ತ ಸಲಹೆಗಳನ್ನು ನೀಡುತ್ತಾರೆ. ತಮಗೆ ತಿಳಿಯದಿದ್ದಲ್ಲಿ ಇತರ ತಿಳಿದ ಸಾವಯವ ಕೃಷಿಕರಿಂದ ಸೂಕ್ತ ಸಲಹೆ ಪಡೆದು ಬಗೆಹರಿಸುತ್ತಾರೆ.

ಇವರ ತೋಟಕ್ಕೆ ಹಲವಾರು ವಿದೇಶಿ ರೈತರು, ವಿದ್ಯಾರ್ಥಿಗಳು ಭೇಟಿಕೊಟ್ಟಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದವರು ಹಾಗೂ ಕೃಷಿ ಇಲಾಖೆಯವರು ರೈತ ತರಬೇತಿ ಇನ್ನಿತರ ಕಾರ್ಯಕ್ರಮಗಳನ್ನು ಇವರ ತೋಟದಲ್ಲಿ ನಡೆಸಿದ್ದಾರೆ. ಇವರನ್ನು ತೆಂಗಿನ ಗಿಡದ ಸುಳಿ ರೋಗದ ಬಗ್ಗೆ ಕೇಳಿದಾಗ ಇದು ನನ್ನ ತೋಟದಲ್ಲಿ ಕಂಡು ಬಂದಿಲ್ಲ; ಇದಕ್ಕೆ ಕೂದಲು, ಉಗುರು, ಚರ್ಮ ಇವುಗಳ ಹೊಗೆಯನ್ನು ಕೊಟ್ಟರೆ ಹೋಗಬಹುದು, ಇದನ್ನು ಪ್ರಯೋಗಿಸಿ ನೋಡಬೇಕೆಂದು ಹೇಳುತ್ತಾರೆ.

ಹೀಗೆ ಬೆಂಗಳೂರು ನಗರದ ಸಾಮೀಪ್ಯ ಕೈಗಾರಿಕೆ, ಪರಿಸರ ಸಮಸ್ಯೆ ಇತ್ಯಾದಿಗಳ ನಡುವೆಯೂ ವಿಜಯ ಕುಮಾರರ ಸಾವಯವ ಕೃಷಿ ಬಗೆಗಿನ ವ್ಯಾಮೋಹ ಒಂದು ಪವಾಡವೇ ಸರಿ.



ಆಧುನಿಕ ಬೆರ್ಚಪ್ಪ

ಸ್ವಾವಲಂಬನೆಯ ಸಂಕೇತವಾದ ಮಲೆನಾಡಿನ ಹಿತ್ತಲುಗಳು

ಹಿತ್ತಲು ಎಂಬುದು ಮನುಷ್ಯ ಜೀವಿಯ ಸ್ವಾವಲಂಬನೆಯ ಸಂಕೇತ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ವೇದಗಳ ಕಾಲದಿಂದಲೂ ಹಿತ್ತಲುಗಳ ಬಗ್ಗೆ ಪ್ರಾಧಾನ್ಯತೆ ಇರಬಹುದು. ಆರ್ಯ ಸಮೂದಾಯದಿಂದಲೇ ಹಿತ್ತಲುಗಳು ಪ್ರಾರಂಭವಾಗಿರಬಹುದು. ಏಕೆಂದರೆ ಆರ್ಯ ಸಮುದಾಯದವರು ಸಂಘಜೀವಿಗಳಾಗಿದ್ದು ಬೇಸಾಯವನ್ನು ಪ್ರಾರಂಭಿಸಿದಂತವರು. ದ್ರಾವಿಡ ಜನಾಂಗದವರು ಅಲೆಮಾರಿಗಾಳಿಗಿದ್ದು ಜೀವನಕ್ಕೆ ಕಾಡನ್ನೇ ಅವಲಂಬಿಸಿದಂತವರು. ಹೀಗೆ ಹಿತ್ತಲಿನ ಸಂಸ್ಕೃತಿ ಬೆಳೆದಿರಬಹುದು. ನಮ್ಮ ಕರ್ನಾಟಕದಲ್ಲಿ ಹಿಂದೆ ಗುಂಡತೋಪು, ಕೆರೆ, ಕಾಲುವೆ, ದೇವರಕಾಡು, ಸಂತೆ ತೋಪು, ಸ್ಮಶಾನ ಕುಂಟೆಗಳಿಗೆ ಇದ್ದಂತಹ ಪ್ರಾಮುಖ್ಯತೆ ಹಿತ್ತಲುಗಳ ಮೇಲೆ ಇತ್ತು. ಇವುಗಳೆಲ್ಲಾ ಸಮುದಾಯಕ್ಕೆ ಸೇರಿದ್ದರೆ ಹಿತ್ತಲುಗಳು ಮನೆಯ ಹೆಂಗಸರ ಕೈತೋಟಗಳಾಗಿರುತ್ತಿದ್ದವು. ಹೆಂಗಸರು ತಮ್ಮ ಬಿಡುವಿನ ವೇಳೆಯಲ್ಲಿ ಈ ಹಿತ್ತಲುಗಳಲ್ಲಿ ತಮ್ಮ ಮನೆಗೆ ಬೇಕಾದಂತಹ ತರಕಾರಿಗಳಾದ ಬದನೆ, ಸೊಪ್ಪು, ಬೆಂಡೆ, ಸೌತೆ, ದಂಟು, ಹೀರೆಕಾಯಿ, ಮೆಣಸಿನ ಕಾಯಿ, ಅಲಸಂದೆ, ಗೋರಿ ಕಾಯಿ, ಹಾಗಲಕಾಯಿ, ಚಪ್ಪರಬದನೆ, ಸುಗ್ಗಿಕಾಯಿ ಇಂತಹ ಹತ್ತು ಹಲವಾರು ತರಕಾರಿಗಳು ಬಾಳೆ, ಮಾವು, ತೆಂಗು, ಕಿತ್ತಲೆ, ನಿಂಬೆ, ಚಕ್ಕೋತ, ನೆಲ್ಲಿ ಕಾಯಿ, ಬನ್ನಿ, ಹಾಗೇ ವಿವಿಧ ಹೂ ಗಿಡಗಳನ್ನು ಕಾಣಬಹುದಾಗಿತ್ತು. ಇವುಗಳನ್ನೆಲ್ಲ ಯಾವುದೇ ರಸಾಯನಿಕ ಗೊಬ್ಬರ ಬಳಸದೆ ತಮ್ಮದೆ ಆದ ನಾಟಿ ತಳಿ ಬೀಜಗಳನ್ನು ಮತ್ತು ಮನೆಯಲ್ಲಿ ಉಪಯೋಗಿಸಿದ ನೀರನ್ನು ಬಳಸಿಕೊಂಡು ಬೆಳೆಯುತ್ತಿದ್ದರು. ಇವು ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನದಿಂದ ಕೂಡಿರುತ್ತಿದ್ದವು.

ಹಿತ್ತಲು ಬ್ರಾಹ್ಮಣರಲ್ಲಿ ಸರ್ವೆಸಾಮಾನ್ಯವಾಗಿದ್ದವು. ಬಯಲು ಸೀಮೆಯಲ್ಲಿ ಬ್ರಾಹ್ಮಣರ ಪ್ರಭಾವಕ್ಕೆ ಒಳಗಾಗಿ ಕೆಲವು ಮನೆಯಲ್ಲಿ ಅಕ್ಕಪಕ್ಕದಲ್ಲಿ ಜಾಗವಿದ್ದಂತಹ ಶೂದ್ರ ಕುಟುಂಬಗಳಾದ ತಿಗಳ ಮತ್ತು ಒಕ್ಕಲಿಗ ಜನಾಂಗದ ಮಹಿಳೆಯರು ಹಿತ್ತಲುಗಳನ್ನು ಇಟ್ಟುಕೊಂಡಿದ್ದು ಉಂಟು. ಶೂದ್ರ ಜನಾಂಗದ ಹಿತ್ತಲಿಗೂ ಬ್ರಾಹ್ಮಣರ ಹಿತ್ತಲಿಗೂ ತುಂಬಾ ವ್ಯತ್ಯಾಸಗಳಿದ್ದವು. ಬ್ರಾಹ್ಮಣರ ಹಿತ್ತಲುಗಳು ಹೆಚ್ಚು ಹೂಗಿಡಗಳು, ಬಾಳೆ, ನೆಲ್ಲಿ, ಕುಂಬಳಕಾಯಿ, ಬಿಲ್ವಪತ್ರೆ, ಬನ್ನಿಮರ, ಬೆಲ್ಲದ ಮರಕ್ಕೆ, ಶೂದ್ರ ಕುಟುಂಬದ ಹಿತ್ತಲುಗಳಲ್ಲಿ ಬದನೆ, ಶುಂಠಿ, ಅರಿಶಿನ, ದಂಟು, ಬೆಂಡೆ ಇಂತಹುಗಳಿಗೆ ಪ್ರಾಧಾನ್ಯತೆ ಇತ್ತು. ಆದರೆ ನಮ್ಮ ದೇಶಕ್ಕೆ ಬಕಾಸುರನಂತೆ ಬಂದ ಹಸಿರು ಕ್ರಾಂತಿಯು ಹಿತ್ತಲುಗಳನ್ನು ನಾಶಮಾಡದೆ ಬಿಡಲಿಲ್ಲ. ಜನಗಳಿಗೆ ಹಣದ ದಾಹವನ್ನು ಹುಟ್ಟು ಹಾಕಿದಂತೆ ನೀರನ್ನು ದೋಚುವ ಅಟ್ಟಹಾಸಕ್ಕೆ ಜನರು ಕೈಹಾಕಿದುದರಿಂದ ಬಯಲು ಸೀಮೆಯಲ್ಲಿನ ಹಳ್ಳಿಗಳಲ್ಲಿ ಇದ್ದಂತಹ ಎಲ್ಲಾ ಬಾವಿಗಳು ಬತ್ತಿ ಹೋದವು. ಇದರಿಂದ ಹಿತ್ತಲುಗಳು ಸಹ ನಾಶ ಹೊಂದಿದವು. ಮಲೆನಾಡು ಪ್ರದೇಶದಲ್ಲಿ ಸಹ ಕಾಫಿ, ಅಡಿಕೆ ಪ್ರಭಾವಕ್ಕೆ ಒಳಗಾದ ಜನರು ಹಿತ್ತಲುಗಳನ್ನು ಬಿಡುತ್ತಾ ಬಂದರು.

ಮಲೆನಾಡಿನ ಪ್ರಾಂತ್ಯದಲ್ಲಿ ಸಾಮಾನ್ಯವಾಗಿರುವ ಈ ಹಿತ್ತಲುಗಳು ದೇಶೀಯ ಜ್ಞಾನ ಮತ್ತು ಜೀವ ವಿವಿಧತೆಯ ಬೀಡು. ಉದಾಹರಣೆಗೆ ಶೃಂಗೇರಿಯ ಹತ್ತಿರದ ಸಿರಿಮಲೆ ವಾಸುದೇವರ ಅಡ್ಲುರವರು, ಅವರ ಹಿತ್ತಲಿನ ಗೊಡ್ಡು ಅರಿಶಿನದ ಬಗ್ಗೆ ಹೇಳಿದರು. ಯಾವುದಾದರು ತರಕಾರಿ ಗಿಡಗಳಿಗೆ ಕೀಟಗಳ ಬಾದೆ ಇದ್ದರೆ ಈ ಗೊಡ್ಡು ಅರಿಶಿನವನ್ನು ಅರೆದು ಸಿಂಪಡಿಸಿದರೆ ಕೀಟಗಳ ಬಾದೆ ತಪ್ಪುತ್ತದೆಯಂತೆ. ಹಾಗೇ, ತೀರ್ಥಹಳ್ಳಿ ಸರು ಗ್ರಾಮದ ಸುತ್ತಲಿನ ಊರಿನವರು ತಮ್ಮ ಹಿತ್ತಲುಗಳಲ್ಲಿ ಹೆಚ್ಚಿನದಾಗಿ ಅಲಂಕಾರಿ ಗಿಡಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಕಮ್ಮರಡಿಯ ಸುತ್ತಮುತ್ತಲ ಹಳ್ಳಿಗಳಲ್ಲಿ ಹಿತ್ತಲುಗಳ ಜೀವಂತಿಕೆ ಅತಿಯಾಗಿದೆ.

ಕಮ್ಮರಡಿ ಸಮೀಪದ ಊರು ಶಂಕರ ಮನೆ, ಈ ಹಳ್ಳಿಯ ಮಂಜುನಾಥ ಆಚಾರ್ ಇವರಿಗೆ 6 ಜನ ಮಕ್ಕಳಿದ್ದಾರೆ. ಇವರ ಹಿತ್ತಲಿನ ಗಾತ್ರ 20 ಅಡಿ ಅಗಲ 15 ಅಡಿ. ಇದರಲ್ಲಿ ಸುಮಾರು 14 ರೀತಿಯ ತರಕಾರಿಗಳಿವೆ. ಇವುಗಳನ್ನು ಮಿಶ್ರ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಒಂದು ಸಾಲು ಮೆಣಸು, ಒಂದು ಸಾಲು ಬದನೆ, ಹರಿವೆ ಮತ್ತು ಅಲಸಂದೆ ಹೀಗೆ. ಅಲಸಂದೆಯಲ್ಲಿ ಎರಡು ರೀತಿಗಳಿವೆ. ಉದ್ದನೆಯ ಅಲಸಂದೆ, ಚೋಟುದ್ದ ಅಲಸಂದೆ. ನುಗ್ಗೆ, ಹೀರೆಕಾಯಿ, ಸೌತೆಕಾಯಿ, ಹಾಗಲುಕಾಯಿ, ಜೀರಿಗೆ, ಮೆಣಸು, ಮಾವು ಇಷ್ಟು ಇವರ ಹಿತ್ತಲಲ್ಲಿ ಇವೆ. ಇವುಗಳನ್ನು ಬೆಳೆಯಲು ಯಾವುದೇ ರಾಸಾಯನಿಕ ಗೊಬ್ಬರಗಳನ್ನು ಬಳಸಿಲ್ಲ. ರೋಗ ಅಥವಾ ಕೀಟಗಳ ಬಾದೆಯೇನಾದರೂ ಇದ್ದರೆ ಬೂದಿಯನ್ನು ಉಪಯೋಗಿಸುತ್ತಾರೆ. ಇವರು ಮನೆಗೆ ಬಳುಸುವಂತಹ ತರಕಾರಿಗಳನ್ನು ಕೊಳ್ಳುವುದೇ ಇಲ್ಲ. ಮಳೆಗಾಲಕ್ಕೆ ಬೇಕಾದಂತಹ ಕುಂಬಳಕಾಯಿ, ಸೌತೇ ಕಾಯಿ ಇಂತಹುಗಳನ್ನು ಕೂಡಿಟ್ಟು ಕೊಂಡಿರುತ್ತಾರೆ. ಈ ಹಳ್ಳಿಯಲ್ಲಿ ಎಲ್ಲಾ ಮನೆಗಳಲ್ಲೂ ಇದೇ ತರಹದ ಹಿತ್ತಲುಗಳಿವೆ. ಒಂದು ವಕ್ಷ ಯಾವುದಾದುರೂ ಒಂದು ಕುಟುಂಬದಲ್ಲಿ ತಮಗೆ ಬೇಕಾದಂತಹ ಬೀಜ ಇಲ್ಲದಿದ್ದರೆ ಪಕ್ಕದವರ ಮನೆಯಿಂದ ವಿನಿಮಯ ಮಾಡಿ ಕೊಳ್ಳುತ್ತಾರೆಯೇ ಹೊರತು ಅಂಗಡಿಯಿಂದ ಬೀಜಗಳನ್ನು ಕೊಂಡು ತರುವುದಿಲ್ಲ. ಈ ಹಿತ್ತಲುಗಳಲ್ಲಿ ಬೆಳೆದಂತಹವು ಬರಿ ತರಕಾರಿಯಗಿರುವುದಿಲ್ಲ , ಇವು ಔಷಧ ಸಸ್ಯಗಳಾಗಿರುತ್ತವೆ. ಉದಾ:- ಗೊಡ್ಡು ಅರಿಶಿನ, ತೊಂಡೆ, ಹಾಗಲಕಾಯಿ ಇಂತಹುಗಳು ಔಷಧಿಗಳಾಗಿ ಬಳಸುತ್ತಾರೆ. ಆದುದರಿಂದಲೆ ಹಿತ್ತಲು ಬರೀ ಹಿತ್ತಲಾಗಿರುವುದಿಲ್ಲ , ಸ್ವಾವಲಂಬನೆಯ ಸಂಕೇತವಾಗಿರುತ್ತವೆ ಎಂದು ಹೇಳುವುದು.

ಲೇಖನ : ಚಿತ್ರಶೇಖರ್

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಸ್ಯ ವೈವಿಧ್ಯತೆಯ ಕುರಿತಾಗಿ ಮಲೆನಾಡ ಮಹಿಳೆಯರ ಜ್ಞಾನ ಸಂಪತ್ತು

– ತೇಜಸ್ವಿನಿ

(ಕೊಪ್ಪತಾಲೋಕಿನ ಶಂಕರಮನೆ ರೈತಮಹಿಳೆ ನಾಗರತ್ನಳ ಮತ್ತು ಶಶಿರೇಖ ಟಿ.ಎನ್. ಅನುಭವ ಆಧಾರಿತ)

ನೆಕ್ಕರಿಕೆ ಗಿಡ (*Melastoma malabarica*): ಇದರ ಹಣ್ಣನ್ನು ತಿನ್ನುತ್ತಾರೆ. ಅಡಿಕೆ ಗಾತ್ರದ ಹಣ್ಣು ಹೊರಗೆ ಕೆಂಪಾಗಿದ್ದು, ತಿರುಳು ಕಪ್ಪಾಗಿರುತ್ತದೆ. ಸಿಹಿಯಾದ ಹಣ್ಣು.

ಹುಳಿಸೊಪ್ಪು (*Memecylon amplexicaule*): ಇದನ್ನು ಹಿಡಿ/ಪೊರಕೆ ಮಾಡಲು ಉಪಯೋಗಿಸುತ್ತಾರೆ. ಈ ಪೊರಕೆ ಕಣದಲ್ಲಿ ಧಾನ್ಯ ಒಕ್ಕುವಾಗ ಗುಡಿಸಲು ಅತ್ಯಂತ ಸೂಕ್ತ.

ಹಾಲು ಬೀಳು (*Chamesyce hypesifolia*): ಬುಟ್ಟಿ ಮಾಡಲು ಇದರ ಬಳ್ಳಿಯನ್ನು ಬಳಸುತ್ತಾರೆ.

ಪಿಳ್ಳೆ ಮರ: ಇದು ಸೌದೆ ಮತ್ತು ಕೊಟ್ಟಿಗೆಗೆ ಹಾಕುವ ಸೊಪ್ಪಿಗೆ ಉಪಯೋಗ.

ಹೊಟಲೆ ಮರ: ಇದು ಕೂಡ ಸೌದೆ ಮತ್ತು ಸೊಪ್ಪಿಗೆ ಉಪಯುಕ್ತ.

ಜಾಬದ ಬಳ್ಳಿ: ಈ ಬಳ್ಳಿಯನ್ನು ಕೊಟ್ಟಿಗೆಯಲ್ಲಿ ಜಾನುವಾರುಗಳನ್ನು ಕಟ್ಟಲು ಹಗ್ಗದಂತೆ ಬಳಸಲಾಗುತ್ತದೆ.

ಬಸರಿ ಮರ (*Ficus infectoria*): ಇದರಿಂದ ಮೇಣ ಸಿಗುತ್ತದೆ. ಸೌದೆಗೆ ಕೂಡ ಬಳಸಬಹುದು.

ಬೆಳಲೆ : ಸೌದೆ ಮತ್ತು ಸೊಪ್ಪಿಗಾಗಿ ಬಳಸುವ ಮರ.

ಹೊಲಗಾರನ ಮರ : ಇದು ಹೊಸದಾಗಿ ಇರುವಾಗಲೇ ಸೌದೆಯಂತೆ ಉಪಯೋಗಿಸಬೇಕು. ಹಳೆ ಮರ ಉರಿಯುವುದಿಲ್ಲ.


ಆವುಂಕ ಬಳ್ಳಿ : ಈ ಬಳ್ಳಿಯನ್ನು ಚೆನ್ನಾಗಿ ತಿರುಪಿ ಮೂಸುವುದರಿಂದ ಅರತಲೆ ನೋವು ಮತ್ತು ತಲೆನೋವು ಗುಣವಾಗುತ್ತದೆ.

ವಾಸಿಂಗೆ ಗಿಡ : ವಾತದಿಂದ ಆಗುವ ಕಾಲು ನೋವಿಗೆ ಇದು ಔಷಧಿ. ಇದರ ಸೊಪ್ಪನ್ನು ಅಕ್ಕಿಯೊಂದಿಗೆ ಸೇರಿಸಿ ದೋಸೆ ಮಾಡುತ್ತಾರೆ. ಸೊಪ್ಪನ್ನು ಸಾರು ಮಾಡಲು ಬಳಸುತ್ತಾರೆ.

ಗುರುಗಿ : ಜಾನುವಾರುಗಳಿಗೆ ಆಹಾರ.

ವಾಯವಿಳಂಗ (*Embelecia ribes*): ವಾತದಿಂದ ಆಗುವ ಕಾಲು ನೋವಿಗೆ ಇದು ಕೂಡ ಔಷಧಿ. ಇದನ್ನು ದೋಸೆ ಮಾಡಿ ಉಪಯೋಗಿಸುತ್ತಾರೆ.

ಹೆದ್ದುಂಬಿ (*Ocimum adscendens*): ಬಿಳಿ ಹೂ ಬಿಡುವ ಈ ಸಸ್ಯ ಬೇಸಿಗೆಯಲ್ಲಿ ಒಣಗಿ, ಮಳೆ ಬಂದಂತೆ ಮತ್ತೆ ಚಿಗುರುತ್ತದೆ. ಎಲೆಯನ್ನು ಕುಟ್ಟಿ ಹಿಂಡಿ ರಸ ತೆಗದು ದನಗಳ ಮೈಗೆ ಹಚ್ಚುವುದರಿಂದ ಹುಳುಗಳು ಬಿದ್ದು ಹೋಗುತ್ತವೆ. ಹೀಗೆ ಕಾಡಿನ ಮರ ಸಸ್ಯಗಳ ಉಪಯೋಗವನ್ನು ನಾಗರತ್ನ ಪಟ್ಟಿ ಮಾಡುತಿದ್ದಂತೆ ಜೊತಯಲ್ಲಿದ್ದ ಶಶಿರೇಖಾಳಿಗೆ, ಶಾಲೆಗೆ ಹೋಗುವಾಗ ಕಿತ್ತು ತಿನ್ನುತ್ತಿದ್ದ ಹಣ್ಣುಗಳ ಪಟ್ಟಿಯೇ ನೆನಪಾಯಿತು.



ಹುಲಿಗೆ ಹಣ್ಣು : ಹಸಿರು ಬಣ್ಣದ ಕಾಯಿ ಹಣ್ಣಾದಾಗ ತಿಳಿ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಹುಳಿ ರುಚಿಯ ಈ ಕಾಯಿ ಮತ್ತು ಹಣ್ಣಿನ ಮೇಲೆ ತುಂಬಾ ಬೂದಿ. ಈ ಕಾಯಿಗಳು 3-5 ಸೆಂ.ಮೀ. ಉದ್ದವಾಗಿದ್ದು, ಕಾಯಿಗೆ ಒಂದೇ ಬೀಜ. ಈ ಮರ ಬೇಸಿಗೆಯಲ್ಲಿ ಹಣ್ಣು ಬಿಡುತ್ತದೆ.

ಕಲ್ಲು ಸಂಪಿಗೆ ಹಣ್ಣು : ಇದು ಹಸಿರು ಬಣ್ಣದ ಗುಂಡಿಗಿನ ಹಣ್ಣು. ಹಣ್ಣಿನ ತುಂಬಾ 5-10 ಸಣ್ಣ ಸಣ್ಣ ಬೀಜಗಳು. ಹುಳಿಯಾದ ಹಣ್ಣು ಬಲು ರುಚಿ. ಈ ಮರ ಬೇಸಿಗೆಯಲ್ಲಿ ಹಣ್ಣು ಬಿಡುತ್ತದೆ.

ರಂಜದ ಹಣ್ಣು (*Mimusops elengi*) : ಪರಿಮಳ ಬೀರುವ ರಂಜೆ ಹೂವಿನ ಮರ, ಬೇಸಿಗೆಯಲ್ಲಿ ಹಣ್ಣು ಬಿಡುತ್ತದೆ. 4-5 ಸೆಂ.ಮೀ. ಉದ್ದದ ಹಣ್ಣಿನ ಸಿಪ್ಪೆ ದಪ್ಪ, ಸಪೋಟದಂತೆ ಉದ್ದದ ಬೀಜವಿರುವ ಹಳದಿ ಹಣ್ಣು ಸಿಹಿ.

ಹಿಪ್ಪೆ ಹಣ್ಣು (*Bassia latifolia*) : ಈ ಹಣ್ಣನ್ನು ತಿನ್ನುವ ರೀತಿಯೇ ಒಂದು ಮಜ. ಹೂವಿನ ಆಕಾರದ ಹಣ್ಣನ್ನು ಚೀಪಿ ರಸವನ್ನು ಹೀರ ಬೇಕು.

ಬೆಮ್ಮರಲ ಹಣ್ಣು : ನೇರಳೆ ಹಣ್ಣಿನ ಗಾತ್ರದ ಬಿಳಿ ಬಣ್ಣದ ಈ ಹಣ್ಣು ಸಿಹಿ.

ಕರ್ಜ ಹಣ್ಣು : ಈ ಹಣ್ಣು ಮಳೆಗಾಲದಲ್ಲಿ ಸಿಗುವ ಹಣ್ಣು, ಲಿಂಬೆ ಹಣ್ಣಿನ ಗಾತ್ರದ ಇದರ ಹಣ್ಣು ಸಿಹಿ, ಕಾಯಿ ಹುಳಿ. ಹಲಸಿನ ಕಾಯಿಯಂತೆ, ಇದರ ಕಾಯಿಯಲ್ಲೂ ಮೇಣ ಇರುತ್ತದೆ.

ಜೀರುಕಲ ಹಣ್ಣು/ಮೂತುಮುರುಗುನ ಕಾಯಿ : ಇದರ ಹಣ್ಣನ್ನು ಕತ್ತರಿಸಿ ಹೋಳುಮಾಡಿ ಬಿಸಿಲಲ್ಲಿ ಒಣಗಿಸಿ, ಬತ್ತಿಸಿ, ಪೇಸ್ಟ್ ನಂತೇ ತಯಾರಿಸಿ ಇಡುತ್ತಾರೆ. ಹುಣಸೇ ಹಣ್ಣಿನ ಬದಲಾಗಿ ಅಡಿಗೆಗೆ ಉಪಯೋಗಿಸುತ್ತಾರೆ. ಅದರಲ್ಲೂ ಮುಖ್ಯವಾಗಿ ಮಾಂಸದ ಅಡಿಗೆಯಲ್ಲಿ ಇದರ ಬಳಕೆ ಜಾಸ್ತಿ.

ವಾಟೇ ಹುಳಿ (*Ochlandra scriptoria*): ಇದು ಕೂಡ ಹುಣಿಸೇ ಹಣ್ಣಿನ ಬದಲಾಗಿ ಉಪಯೋಗಿಸುವ ಹಣ್ಣು, ಕಾಯಿ ಕತ್ತರಿಸಿ ಹೋಳು ಮಾಡಿ ಒಣಗಿಸಿ ಸಂಗ್ರಹಿಸಿಟ್ಟರೆ ವರ್ಷವಿಡೀ ಉಪಯೋಗಿಸಬಹುದು.

ಬಲಿಗೆ ಹಣ್ಣು (*Poeciloneuron indicum*) : ಕೆಂಪು ಬಣ್ಣದ ಈ ಹಣ್ಣು ನಿಂಬೆಗಿಂತ ಗಾತ್ರದಲ್ಲಿ ದೊಡ್ಡದು. ಸಣ್ಣ ಕಿತ್ತಳೆ ಹಣ್ಣಿನ ಗಾತ್ರದ ಈ ಹಣ್ಣು ಸಿಹಿ. ಇಷ್ಟೆಲ್ಲಾ ಹಣ್ಣುಗಳಲ್ಲದೆ, ಮೂರು ಜಾತಿಯ ನೇರಳೆ ಹಣ್ಣುಗಳೂ ಇವೆ.

ನಾಯಿ ನೇರಳೆ (*Syzigium operculatum*) : ನೇರಳೆ ಜಾತಿಗಳಲ್ಲೇ ದೊಡ್ಡದು ಈ ಮರ.

ನೇರಳೆ (*Syzigium jambolanum*) : ಇದು ದೊಡ್ಡಮರ. ಈ ಮರವನ್ನು ಮನೆ ಕಟ್ಟಲು ಅಗತ್ಯವಾದ ರೀಪು, ಪಕಾಸಿಗಳನ್ನು ಮಾಡಲು ಬಳಸುತ್ತಾರೆ. ದೊಡ್ಡ ದೊಡ್ಡ ಗೊಂಚಲು ಹಣ್ಣುಗಳು ಬಿಡುತ್ತವೆ.

ಕುನ್ನೇರಳೆ : ಮರವೂ ಸಣ್ಣದು, ಕಾಯಿಗಳು ಸಣ್ಣ. ಆದರೆ ಬಹಳ ರುಚಿ.

ದೀವಿ ಹಲಸು (*Artocarpus incia*): ನೋಡಲು ಹಲಸಿನ ಕಾಯಿಯಂತೆ ಕಾಣುವ ಇದರ ಕಾಯಿಗಳು ಚಿಕ್ಕವು. ಕಾಯಿಯನ್ನು ತರಕಾರಿಯಂತೆ ಅಡುಗೆ ಮಾಡಲು ಬಳಸುತ್ತಾರೆ.

ಕರಾವಳಿ ಪ್ರದೇಶದ ನಾಟಿ ತಳಿಗಳು

ಪ್ರತಿಯೊಂದು ಆಹಾರ ಸಸ್ಯದಲ್ಲೂ ರುಚಿಗನುಗುಣವಾಗಿ, ಬೆಳೆಯುವ ಹವಾಮಾನಕ್ಕನುಗುಣವಾಗಿ ಅನೇಕ ತಳಿಗಳು ದಕ್ಷಿಣ ಕನ್ನಡದ ಪ್ರದೇಶದಲ್ಲಿ ಕಂಡು ಬರುತ್ತಿದ್ದು, ಈ ಬಗ್ಗೆ ಮಂಗಳೂರು ಜಿಲ್ಲೆಯ ಕಿನ್ಯಾ ಊರಿನ ವಿಠ್ಠಲರಾವ್ ನೀಡಿದ ವಿವರ ಈ ರೀತಿ ಇದೆ:

1. ಭತ್ತ

ಅತಿಕಾರ: ಇದು ಸುಗ್ಗಿ ಭತ್ತದ ತಳಿ. ಕೆಂಪು ಬಣ್ಣದ ಇದು ಬಹಳ ರುಚಿ. ಭೂತದ ಪೂಜೆಗೆ ಇದು ಬಹಳ ಪ್ರಾಶಸ್ತ್ಯ. 110-120 ದಿನದ ತಳಿ.

ಕಂಡರ ಕುಚ್ಚಿ: 130 ದಿನಗಳ ಈ ತಳಿಗೆ ಉಬಾರ ಮುಂಡ ಎಂಬ ಹೆಸರು ಕೂಡ ಇದೆ. ಕಾಯಲೆಗೆ ತುತ್ತಾಗದ ಹುಳುಗಳಕಾಟ ನಿರೋಧಿಸುವ ಶಕ್ತಿ ಹೊಂದಿರುವ ಈ ತಳಿ ಎತ್ತರವಾಗಿ ಬೆಳೆಯುವುದರಿಂದ ಮಳೆ ಗಾಳಿಗೆ ಬಾಗಿ ಅಡ್ಡ ಬೀಳುವುದು ಉಂಟು.

ಹವಳಕಣ್ಣ: ತಿನ್ನೊಕಿರು ಎಂಬ ಹೆಸರನ್ನು ಹೊಂದಿರುವ ತಳಿ ಕೇವಲ 90 ದಿನಗಳ ಅಲ್ಪಾವಧಿಯ ತಳಿ. ಇದು ಕೆಂಪಕ್ಕಿ. ಇದು ನಾಟಿ ಮಾಡುವ ತಳಿಯಲ್ಲ, ಬೀಜವನ್ನು ಗದ್ದೆಗೆ ಎರಚಿ ನೇರವಾಗಿ ಬೆಳೆ ತೆಗೆಯುತ್ತಾರೆ.

ಬಡಕಾಯಿ ಜೊಳ್ಳಕಿರಿ : ಇದು 120-125 ದಿನದ ದೀರ್ಘಾವಧಿಯ ತಳಿ. ಇದು ಬಿಳಿ ಅಕ್ಕಿ. ಇದಕ್ಕೆ ಗುಡ್ಡು ಬೆಳ್ಳೇರಿ ಎಂಬ ಹೆಸರು ಕೂಡ ಇದೆ.

ಮಸ್ಕತಿ : ಮಸ್ಕತ್‌ಗೆ ರಫ್ತಾಗುವುರಿಂದ ಇದರ ಹೆಸರೇ ಮಸ್ಕತಿ ಎಂದಾಗಿದೆ. ಇದು 105-110 ದಿನದ ಮಧ್ಯಮಾವಧಿಯ ತಳಿ.

ಗಂಧಸಾಲೆ : ಪರಿಮಳ ಭರಿತ ಸಣ್ಣ, ಸಪೂರ ಅಕ್ಕಿ ಇದು. ಈ ತಳಿ ಬಾಗಿ ಬೀಳುವುದಿಲ್ಲ. 140 ದಿನಗಳ ಅತಿ ದೀರ್ಘ ಅವಧಿಯ ತಳಿ ಇದು. ನೆರಳಲ್ಲಿ ಕೂಡಾ ಈ ತಳಿ ಚೆನ್ನಾಗಿ ಬೆಳೆಯಬಲ್ಲದು. ಬಾಸುಮತಿಯಂತೇ ಪರಿಮಳವಿರುವ ಈ ಭತ್ತವನ್ನು ಮಿಲ್‌ಗಳಲ್ಲಿ ಅಕ್ಕಿ ಮಾಡಿಸುವಾಗ ನುಚ್ಚು ಆಗುವುದು ಹೆಚ್ಚು.

2. ಬಾಳೆ

ರಸಬಾಳೆ : ಸ್ವಲ್ಪ ಹುಳಿ ರುಚಿ ಇರುವ ಈ ಬಾಳೆ ಹಣ್ಣು ಹಲವಾರು ಔಷಧಿಯ ಗುಣವನ್ನು ಹೊಂದಿದೆ. ಹೊಟ್ಟೆ ಉರಿ, ಬಾಯಿ ಹುಣ್ಣಿಗೆ ಇದು ಔಷಧಿ. ನೆರಳಲ್ಲಿ ಚೆನ್ನಾಗಿ ಬೆಳಿಯುವುದರಿಂದ, ಅಡಿಕೆ ತೋಟದಲ್ಲಿ ಬೆಳೆಯಲು ಇದು ಸೂಕ್ತ. ಈ ಬಾಳೆಯ ದಿಂಡಿನಲ್ಲಿ ನಾರು ಕಡಿಮೆ. ಇದರ ಎಲೆ ಮೃದು. ಹಾಗಾಗಿ ಗಾಳಿಗೆ ಒಡೆಯುವುದು ಕಡಿಮೆ.

ಗಾಳಿ ಬಾಳೆ : ಹಿತ್ತಲಿನಲ್ಲಿ ಬಚ್ಚಲು ನೀರು, ಬಟ್ಟೆ ಒಗೆದ ನೀರು ಹೋಗುವ ಜಾಗದಲ್ಲಿ ಚೆನ್ನಾಗಿ ಬೆಳೆಯುವ ಬಾಳೆ ಇದು.

ಬೂದಿ ಬಾಳೆ : ಪಥ್ಯಕ್ಕೂ ಉಪಯೋಗಿಸಬಹುದಾದ ಬಾಳೆ ಇದು. ಆರ್ಯುವೇದದ ಔಷಧಿಯಲ್ಲೂ ಬಳಸುವುದು ಉಂಟು. ಹೊಟ್ಟೆಹುಣ್ಣಿಗೆ ಈ ಬಾಳೆ ಔಷಧಿಯೂ ಹೌದು.

3. ಅಲಸಂದೆ

ಬಳ್ಳಿ ಅಲಸಂದೆ : ಇದು 5 ತಿಂಗಳ ತಳಿ. ಕಪ್ಪು ಬಣ್ಣದ ಬಳ್ಳಿಯ ಇದರ ಕಾಯಿ ಹಸಿರು. ಒಂದೊಂದು ಕಾಯಿ ಸುಮಾರು 10-12 ಇಂಚು ಇರುತ್ತದೆ. ಇದರ ಕಾಯಿ ಮತ್ತು ಕಾಳು ಎರಡೂ ಉಪಯೋಗ.

ಗಿಡ್ಡಪೂದೆ ಅಲಸಂದೆ : ಇದನ್ನು ನರಿಯ ಎಂದು ಕೂಡ ಕರಿಯುತ್ತಾರೆ. ಬೀಜದ ಮೇಲೆ ಗೆರೆ ಇರುತ್ತದೆ. *ಬಗಡೆ ಅಥವಾ ಅವಡೆ* ಎಂದು ಕರೆಯುವ ಇದನ್ನು ಕಾಳಿಗಾಗಿಯೇ ಬೆಳೆಸುತ್ತಾರೆ.

4. ಸೌತೆ

ಮುಳ್ಳು ಸೌತೆ: ಇದನ್ನು ಏಳು ಎಲೆ ಸೌತೆ ಎಂದು ಕರೆಯುವುದುಂಟು. ಏಳು ಎಲೆಗಳ ನಂತರ ಹೂ ಬಿಡುವುದರಿಂದ ಈ ಹೆಸರು. ಸುಮಾರು 40 ದಿವಸಕ್ಕೆ ಕಾಯಿ ಹಿಡಿಯಲು ಆರಂಭಿಸುತ್ತದೆ. ಇದರಲ್ಲಿ ಎರಡು ಜಾತಿಗಳಿವೆ. ಒಂದು ಸಣ್ಣ ಕಾಯಿ ಬಿಟ್ಟರೆ ಇನ್ನೊಂದರ ಕಾಯಿ ಸ್ವಲ್ಪ ದೊಡ್ಡದು.

ಬಣ್ಣದ ಸೌತೆ : ಅಡಿಗೆಗೆ ಬಳುಸುವ ಈ ಸೌತೆ ಬಹಳ ಕಾಲ ಕೆಡದೆ ಉಳಿಯುತ್ತದೆ.

ಮೊಗೆ ಸೌತೆ : ಇದು ಬಣ್ಣದ ಸೌತೆಯಂತೆ ಇರುತ್ತದೆ. ಆದರೆ ಸ್ವಲ್ಪ ಸಪೂರ ಹಾಗೂ ಇದರಲ್ಲಿ ಬಣ್ಣದ ಸೌತೆಗಿಂತ ನೀರಿನ ಅಂಶ ಸ್ವಲ್ಪ ಕಡಿಮೆ.

5. ಪಡವಲ

ಕಾಯಿಯ ಗಾತ್ರದ ಮೇಲಿನಿಂದ ಹೇಳುವುದಾದರೆ ಉದ್ದ, ಹಾಗೂ ಚಿಕ್ಕ ಗಾತ್ರದ ಕಾಯಿ ಬಿಡುವ ತಳಿಗಳಿವೆ.

6. ಹೀರೆ

ಪಡುವಲದಂತೆ ಇದರಲ್ಲೂ ಕಾಯಿಗಳ ಗಾತ್ರಕ್ಕೆ ಅನುಗುಣವಾಗಿ ಉದ್ದ, ಮಧ್ಯಮ ಹಾಗೂ ಚಿಕ್ಕ ಗಾತ್ರದ ಕಾಯಿ ಬಿಡುವ 3 ವಿಧದ ತಳಿಗಳಿವೆ.

7. ಬದನೆ

ನೀಲಿ ಗೆರೆ ಇರುವ ಬದನೆ ಒಂದು ಜಾತಿಯದು. ಇನ್ನೊಂದು ಜಾತಿಯ ಬದನೆ ಸುಮಾರು ಒಂದು ಕೆ.ಜಿ. ಗಾತ್ರದ ಕಾಯಿ ಕೊಡುತ್ತದೆ. ಇದನ್ನು ಪೇರಂಪಳ್ಳಿ ಬದನೆ ಎಂದೂ ಹೇಳುವುದುಂಟು. ಇವೆಲ್ಲಾ ವಿಠ್ಠಲ ರಾಯರು ನೆನಪಿನಿಂದ ಹೇಳಿದ ತಳಿ ವಿವರಗಳಾದರೆ ಅವರ ಮನೆಯಲ್ಲಿ ಕಂಡುಬಂದ ಇನ್ನೆರಡು ಸಸ್ಯಗಳು ಅಪರೂಪದ ಉಪಯುಕ್ತ ಸಸ್ಯಗಳು.

8. ಜಮ್ಮು

ಇದು ನೋಡಲು ಹುಲ್ಲಿನಂತೆ ಕಾಣತ್ತದೆ. ಬೆಳ್ಳುಳ್ಳಿಯ ಪರಿಮಳ ಹೊಂದಿರುವ ಇದನ್ನು ಬೆಳ್ಳುಳ್ಳಿಯ ಬದಲಾಗಿಯೂ ಸಹ ಬಳಸಬಹುದು. ಕುಂಡಗಳಲ್ಲಿ ಕೂಡಾ ಇದನ್ನು ಬೆಳೆಸಬಹುದು.

9. ಗಂಧಸಾಲೆ ಎಲೆ

ಇದು ಕೂಡಾ ಒಂದು ಸೊಪ್ಪು. ಬೇರಿನ ತುಂಡು ನೆಟ್ಟು ಬೆಳೆಸಬಹದಾದ ಈ ಗಿಡದ ಎಲೆಯನ್ನು ಕತ್ತರಿಸಿ ಅನ್ನ ಬೇಯಿಸುವಾಗ ಹಾಕಿದರೆ, ಅದು ಯಾವುದೇ ಅಕ್ಕಿಯ ಅನ್ನವಾಗಲಿ ಗಂಧಸಾಲೆ ಅಕ್ಕಿಯಂತೆ ಪರಿಮಳ ಬರುತ್ತದೆ. ಸುಲಭದಲ್ಲಿ ಕಡಿಮೆ ಖರ್ಚಿನಲ್ಲಿ ಪರಿಮಳದ ಅನ್ನ ರೆಡಿ.

ಸಂಗ್ರಹ: ತೇಜಸ್ವಿನಿ

ಮಧು ಮೇಹ ರೋಗ [ಸಕ್ಕರೆ ಕಾಯಿಲೆ ; Diabetes]ಕ್ಕೆ ಹಾಲಕ್ಕಿ ಒಕ್ಕಲಿಗರ ಪರಿಹಾರಗಳು

ಈ ರೋಗವು ಸಾಮಾನ್ಯವಾಗಿ ನಮ್ಮ ಭಾರತೀಯರಿಗೆ ನೂರಕ್ಕೆ ನಲವತ್ತರಷ್ಟು ಜನರಿಗೆ ಇದ್ದೇ ಇರುತ್ತದೆ. ಇದು ಸಾಮಾನ್ಯವಾಗಿ 40 ವರ್ಷದಿಂದ 60 ವರ್ಷದ ವಯಸ್ಸಿನವರೆಗೆ ಬರುತ್ತದೆ. ಈ ರೋಗ ಬಂದಂತಹ ಮನುಷ್ಯನ ಪಾಡಂತೂ ನೋಡಲಾಗದು. ಬಾಯಿಗೆ ರುಚಿಸುವಂತಹ ಸಿಹಿತಿಂಡಿಗಳನ್ನು ತಿನ್ನುವ ಹಾಗಿಲ್ಲ, ಯಾವುದಾದರು ಸಣ್ಣ ಗಾಯವಾದರು ಬೇಗ ವಾಸಿಯಾಗುವುದಿಲ್ಲ, ಪದೇ ಪದೇ ಮೂತ್ರ ವಿಸರ್ಜನೆ. ಇಂತಹ ಹಲವಾರು ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಈ ರೋಗಕ್ಕೆ ಅಲೋಪತಿ ಪದ್ದತಿಯಲ್ಲೂ ಸಹ ಸಂಪೂರ್ಣವಾಗಿ ಗುಣಪಡಿಸುವಂತಹ ಔಷಧಿಗಳು ಬಂದಿಲ್ಲ. ರೋಗದ ಬಾಧೆಯನ್ನು ಕಡಿಮೆ ಮಾಡುತ್ತವೆಯೇ ಹೊರತು ರೋಗ ಸಂಪೂರ್ಣವಾಗಿ ವಾಸಿಯಾಗಿದೆಯೆಂದು ಬೇಕಾದ ಸಿಹಿತಿಂಡಿಯನ್ನು ತಿನ್ನುವ ಹಾಗಿಲ್ಲ. ನಾಟಿ ಔಷಧಿ ಗಿಡಗಳ ಬಳಕೆಯಿಂದ ಈ ರೋಗವನ್ನು ನಿಯಂತ್ರಣದಲ್ಲಿಡಬಹುದು ಎನ್ನುತ್ತದೆ ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಔಷಧಿ ಪದ್ಧತಿ.

ಈ ಮಧುಮೇಹ ರೋಗವನ್ನು ನಿಯಂತ್ರಿಸಬಲ್ಲ ಕೆಲವೊಂದು ಸಸ್ಯಗಳೆಂದರೆ:

1) ಆಡುಮುಟ್ಟದ ಬಳ್ಳಿ (*Tylophora asthama)*
2) ಸದಾಪುಷ್ಪ (*Catharanthus roseus L. Don*)
3) ಏಕನಾಯಕನ ಗಿಡ (*Casearia esculenta L.*)
4) ಮಧುನಾಶಿನಿ (*Gymnema sylvestre)*

ಆಡು ಮುಟ್ಟದ ಬಳ್ಳಿ:- ಸಹ್ಯಾದ್ರಿ ಪರ್ವತ ಪ್ರದೇಶಗಳಲ್ಲಿ ಯಥೇಚ್ಛವಾಗಿ ಕಂಡುಬರುವ ಈ ಗಿಡ ಹೆಚ್ಚು ಮರುಳು ಇರುವಂತಹ ಜಾಗದಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಇದರ ಬೇರು, ಎಲೆಗಳು ತುಂಬ ಔಷಧ ಗುಣವನ್ನು ಹೊಂದಿರುತ್ತದೆ. 100 ಗ್ರಾಂ ಆಡುಮುಟ್ಟದ ಬಳ್ಳಿಯ ಎಲೆಯನ್ನು ಅರೆದು ಒಂದು ಲೀಟರ್ ನೀರಿಗೆ ಹಾಕಿ ಕಲಸಿ, ಕಾಯಿಸಿ ಕಾಲು ಲೀಟರ್‌ಗೆ ಬರುವಂತೆ ಕಷಾಯ ತಯಾರಿಸಿಕೊಂಡು ಆರಿದ ಮೇಲೆ ಸೋಸಿ ಐದು ಚಮಚ ಕಷಾಯವನ್ನು ಕುಡಿಸಬೇಕು. ನಂತರ ದಿನಕ್ಕೆ ಎರಡು ಬಾರಿಯಂತೆ ಒಂದು ತಿಂಗಳು ಸತತವಾಗಿ ಕುಡಿಯಬೇಕು. ನಂತರ ಮೂತ್ರವನ್ನು ಪರೀಕ್ಷಿಸಿ, ವಾಸಿಯಾಗಿದ್ದರೆ ನಿಲ್ಲಿಸಬಹುದು ಇಲ್ಲದಿದ್ದರೆ ಇನ್ನೂ ಒಂದು ತಿಂಗಳು ಮುಂದುವರಿಸಬಹುದು.

ಸದಾಪುಷ್ಪ:- ಈ ಗಿಡವನ್ನು ಸಾಮಾನ್ಯವಾಗಿ ತೋಟಗಳಲ್ಲಿ ಬೆಳೆಸುತ್ತಾರೆ. ಇದು ಎಲ್ಲ ವಾತಾವರಣದಲ್ಲೂ ಬರುವಂತಹ ಗಿಡ. ಈ ಗಿಡದ ಎಲೆಗಳನ್ನು ಮಧುಮೇಹ ರೋಗಕ್ಕೆ ಬಳಸುತ್ತಾರೆ. ಈ ಗಿಡದ 5 ಎಲೆಗಳನ್ನು ಬೆಳಗಿನ ಜಾವ (ಖಾಲಿ ಹೊಟ್ಟೆಗೆ) ಚೆನ್ನಾಗಿ ಜಗಿದು ಇದರ ರಸವನ್ನು ನುಂಗಬೇಕು. ಇದನ್ನು ಒಂದು ದಿನ ಬಿಟ್ಟು ಒಂದು ದಿನ (ವಾರಕ್ಕೆ ಮೂರು ದಿನ) ಕುಡಿಯಬೇಕು, ಇದರಂತೆ ಒಂದು ವಾರ ಬಿಟ್ಟು ವಾರ ಕುಡಿಯಬೇಕು. ಇದೇ ರೀತಿ ನಾಲ್ಕು ವಾರಗಳ ಕಾಲ ಕುಡಿಯಬೇಕು. ಇನ್ನೊಂದು ರೀತಿಯಲ್ಲಿ ಇದರ ಎಲೆಗಳನ್ನು ಚೆನ್ನಾಗಿ ರುಬ್ಬಿ ನೀರಿನಲ್ಲಿ ಬೆರೆಸಿ ಕಷಾಯ ಮಾಡಿಕೊಂಡು ರೋಗಗ್ರಸ್ತ ವ್ಯಕ್ತಿಯ ವಯಸ್ಸಿಗೆ ತಕ್ಕಂತೆ ಎರಡರಿಂದ ಐದು ಚಮಚದವರೆಗೆ ತಿಂಗಳುಗಟ್ಟಲೆ ಕುಡಿಯಬಹುದು. ಈ ಸದಾಪುಷ್ಪ ಸಣ್ಣ ಮಕ್ಕಳ ಹೊಟ್ಟೆ ನೋವಿಗೂ ಉಪಯೋಗಿಸಬಹುದು.

ಏಕನಾಯಕನ ಗಿಡ :- ಇದನ್ನು ನಮ್ಮ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಹಾಗೂ ಕರಾವಳಿ ಪ್ರದೇಶಗಳಲ್ಲಿ ಕಾಣಬಹುದು. ದಟ್ಟವಾದ ಪೊದೆ ಇಲ್ಲವೇ ಸಣ್ಣ ಮರವಾಗಿ ಇರುತ್ತದೆ. ಮಧುಮೇಹ ರೋಗಕ್ಕೆ ಏಕನಾಯಕನ ಗಿಡದ ಜತೆಗೆ ಇನ್ನು ಕೆಲವು ಮರದ ಅಂಶಗಳನ್ನು ಸೇರಿಸ ಬೇಕಾಗುತ್ತದೆ. ಅವುಗಳೆಂದರೆ ಭೈರಮರದ ತೊಗಟೆ, ಬೆಟ್ಟ ಹೊನ್ನೆ ಮರದ ತೊಗಟೆ, ಅಮೃತಬಳ್ಳಿ ಕಾಂಡ, ನೇರಳೆ ತೊಗಟೆ, ಏಕನಾಯಕನ ಬೇರು, ಪ್ರತಿಯೊಂದು 50 ಗ್ರಾಂನಷ್ಟು ಬೆರೆಸಿ ಚೆನ್ನಾಗಿ ಅರೆದು ಒಂದು ಲೀಟರ್ ನೀರಿನಲ್ಲಿ ಹಾಕಿ ಕಷಾಯ ತಯಾರಿಸಿಕೊಂಡು ದಿನಕ್ಕೆ ಎರಡು ಸಾರಿಯಂತೆ ಐದು ಚಮಚ ಪ್ರಮಾಣದಲ್ಲಿ ತಿಂಗಳುಗಟ್ಟಲೆ ಕುಡಿಯಬೇಕು. ಈ ಏಕನಾಯಕನ ಗಿಡವು ಒಳಜ್ವರ, ರಕ್ತಶುದ್ಧಿ, ಮಲಬದ್ಧತೆ ಇವುಗಳಿಗೂ ಸಹ ಉಪಯೋಗಿಸಬಹುದು.

ಮಧುನಾಶಿನಿ:- ಈ ಗಿಡವು ಕರಾವಳಿ ತೀರ ಹಾಗು ಸಹ್ಯಾದ್ರಿ ಅರಣ್ಯಗಳಲ್ಲಿ ಕಂಡುಬರುತ್ತದೆ ಹಾಗೂ ಬಯಲು ಸೀಮೆಯ ಕೆಲವೊಂದು ಕಾಡುಗಳಲ್ಲಿಯೂ ಕಂಡುಬರುತ್ತದೆ. ಇದನ್ನು ಅರಣ್ಯ ಇಲಾಖೆಯವರು ಔಷಧಿ ವನಗಳಲ್ಲಿ ವಿಶೇಷವಾಗಿ ಬೆಳೆಸುತ್ತಿದ್ದಾರೆ. ಇದರ ಎಲೆಯನ್ನು ತಿಂದು ನಾವು ಎಷ್ಟೇ ಸಿಹಿ ಪದಾರ್ಥ ತಿಂದರೂ ನಮಗೆ ರುಚಿಸುವುದಿಲ್ಲ. ಈ ಮಧುನಾಶಿನಿ ಎಲೆಯನ್ನು 100 ಗ್ರಾಂ ರುಬ್ಬಿ ಒಂದು ಲೀಟರ್ ನೀರಿನಲ್ಲಿ ಹಾಕಿ ಕುದಿಸಿ ಕಾಲು ಲೀಟರ್‌ನಷ್ಟು ಬತ್ತಿಸಬೇಕು. ಈ ಕಷಾಯವನ್ನು ನಲವತ್ತು ದಿನ ಉಪಯೋಗಿಸಬೇಕು. ಇದರೊಂದಿಗೆ ಹಳೆ ಅಕ್ಕಿಯ ಅನ್ನ, ಹುರುಳಿ, ಮಜ್ಜಿಗೆ, ನುಗ್ಗೆ ಕಾಯಿ, ನೆಲ್ಲಿಕಾಯಿ ಇವುಗಳನ್ನು ಉಪಯೋಗಿಸಬೇಕಾಗುತ್ತದೆ. ಈ ಮಧುನಾಶಿಯನ್ನು ಮಧುಮೇಹ ರೋಗಕ್ಕೆ ಮಾತ್ರವಲ್ಲದೆ ಕಜ್ಜಿ, ಸರ್ಪ ಸುತ್ತಿಗೆ ಹಾಗು ದನಗಳಿಗೆ ಜ್ವರ ಬಂದಾಗ ಉಪಯೋಗಿಸಬಹುದಾಗಿದೆ.

ಮೂಲ: ಉತ್ತರ ಕರ್ನಾಟಕದ ಹಾಲಕ್ಕಿ ಒಕ್ಕಲಿಗರು,
ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ, ಬೆಂಗಳೂರು

ಹೊಟ್ಟೆಯೊಳಗೆ ಕಲ್ಲರಳಿದ್ದರೆ, ಕರಗಿಸುವುದಕ್ಕೆ

ಊಟದ ಅಥವಾ ತಿಂಡಿ ತಿನಿಸುಗಳ ಮೂಲಕ ಕಲ್ಲರಳುಗಳು ಹೊಟ್ಟೆಯೊಳಗೆ ಹೋಗಿ ನಂತರ ಮೂತ್ರ ವಿಸರ್ಜನೆಗೆ ತೊಂದರೆಯನ್ನು ಉಂಟು ಮಾಡುತ್ತದೆ. ಅತಿ ಶೀಘ್ರದಲ್ಲಿ ನಿವಾರಣೆಯಾಗುವ ಔಷಧಿಯನ್ನು ಸ್ವಲ್ಪ ವೆಚ್ಚದಲ್ಲಿ ಸ್ವತಃ ನೀವೇ ತಯಾರಿಸಿ ಕೊಂಡು ಸೇವಿಸಬಹುದು, ಅತಿ ವೇಗನೆ ಮೂತ್ರವಿಸರ್ಜನೆ ತೊಂದರೆಯಿಂದ ಪಾರಾಗುವಿರಿ.

ಔಷಧಿ ವಿಧಾನ : ಕೊತ್ತಂಬರಿ ಸೊಪ್ಪನ್ನು ಚೆನ್ನಾಗಿ ತಿಕ್ಕಿ ರಸವನ್ನು ಬೇರ್ಪಡಿಸಬೇಕು, ನಂತರ ಸೋಸಿ ಅದಕ್ಕೆ ಸರಿ ಸಮಾನ ರೀತಿಯಲ್ಲಿ ಜೇನುತುಪ್ಪ ಬೆರಸಿ ದಿನಕ್ಕೆ ಮೂರು ಸಲ, ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಪ್ರತಿ ಸಲಕ್ಕೆ ಒಂದು ಚಮಚ ಈ ರೀತಿ ಏಳು ದಿವಸ ತೆಗೆದು ಕೊಳ್ಳಿ. ನಿಮ್ಮ ಹೊಟ್ಟೆಯೊಳಗಿನ ಕಲ್ಲರಳು ನೇರವಾಗಿ ಕರಗಿ ಮೂತ್ರದ ಮತ್ತು ಯೂರಿಯ, ಲವಣಗಳ ಮುಖಾಂತರ ಮೂತ್ರ ವಿಸರ್ಜನೆಯಲ್ಲಿ ಪಾರಾಗುತ್ತದೆ ಎಂಬುದು ಗುಲ್ಬರ್ಗ ಪ್ರಾಂತ್ಯದ ರೈತರ ಅನುಭವ.

ಸಂಗ್ರಹ: ಹುಸೇನ್ ಎಂ. ಗಿರಣಿ
ಅಂಚೆ : ಭೀಮನಹಳ್ಳಿ, ತಾಲೂಕ್: ಚಿತ್ರಾಪುರ, ಜಿಲ್ಲಾ : ಗುಲ್ಬರ್ಗಾ

ಪೀಡೆಗಳ ಹತೋಟಿಗಾಗಿ ಸಸ್ಯಗಳು

ಇಂದಿನ ಕೃಷಿ ಪದ್ಧತಿಯಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕಗಳ ಬಳಕೆ ಹೆಚ್ಚಾಗುತ್ತಿದ್ದು ಅವುಗಳ ಬೆಲೆಗಳು ದುಬಾರಿ ಹಂತ ತಲುಪಿವೆ. ಇದರಿಂದ ರೈತ ತುಂಬ ತೊಂದರೆಗೆ ಸಿಕ್ಕಿಕೊಂಡಿದ್ದಾನೆ. ಇಂತಹ ಸಂದರ್ಭದಲ್ಲಿಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರೀಸರ್ಚ್ ಅಂಡ್ ಆಕ್ಷನ್ ಬೆಂಗಳೂರು ಮೂಲಕ ಪಿ, ಇ, ಪಿ, ಸುನಂದಾ ಟಿ ಗೊಲ್ಲಹಳ್ಳಿ, ಬೇತಮಂಗಲ, ಇವರು ಹೊರತಂದಿರುವ "ಪೀಡೆಗಳ ಹತೋಟಿಗಾಗಿ ಸಸ್ಯಗಳು" ಎಂಬ ಪುಸ್ತಕ ಬಹಳ ಮುಖ್ಯವಾಗಿದೆ. ಇದರಲ್ಲಿ 15 ರೀತಿಯ ಸಸ್ಯಗಳನ್ನು ಹೆಸರಿಸಿರುವುದಲ್ಲದೆ, ಇವುಗಳ ಮೂಲ ಸ್ಥಳ/ದೇಶ ಹಾಗು ಸಸ್ಯಗಳ ವರ್ಣನೆ ಮತ್ತು ಸಾಗುವಳಿ ವಿಧಾನ ಮತ್ತು ಇವುಗಳು ನಿಯಂತ್ರಿಸಬಹುದಾದ ಪೀಡೆ ಮತ್ತು ರೋಗಗಳ ಪಟ್ಟಿಯನ್ನು ಪರಿಣಾಮಕಾರಿಯಾಗಿ ಪುಸ್ತಕ ರೂಪದಲ್ಲಿ ತಂದಿದ್ದಾರೆ. ಇದಕ್ಕೆ ರೈತ ಸಮುದಾಯ ನಿಜವಾಗಲೂ ಚಿರಋಣಿ. ಈ ಪುಸ್ತಕದ ಬೆಲೆ 75ರೂ.

ದೊರೆಯುವ ಸ್ಥಳ : ಇಕ್ರಾ, 7551 ಅಂಚೆಪೆಟ್ಟಿಗೆ,
ಹೊಸತಿಪ್ಪಸಂದ್ರ, ಬೆಂಗಳೂರು-75

ವೃಕ್ಷಾಯುರ್ವೇದ

ಈ ಗ್ರಂಥವು ಬೀಜವೃಕ್ಷನಾಮದಿಂದ ಪ್ರಾರಂಭವಾಗುತ್ತದೆ. ಇದು 60 ಪ್ರಕರಣಗಳನ್ನು ಒಳಗೊಂಡಿದೆ. ಇದು ಸಂಸ್ಕೃತದ ಶ್ಲೋಕಗಳಿಂದ ತರ್ಜುಮೆಯಾಗಿದೆ. ಜೀವಿಗಳಿಗೂ, ವೃಕ್ಷಗಳಿಗೂ ಶರೀರ ಕ್ರಿಯೆಗಳಲ್ಲಿಇರುವ ಸಾಮ್ಯ ಅಂದರೆ ಅವುಗಳು ಅಭಿವ್ಯಕ್ತಿಸುವ ಹುಟ್ಟು, ಬೆಳವಣಿಗೆ, ಬದುಕು, ರೋಗ - ರುಜಿನಗಳು, ಸಾವು, ನಿದ್ರೆ, ನೀರಡಿಕೆ, ಹಸಿವು ಇವುಗಳನ್ನುಸಂಪೂರ್ಣವಾಗಿ ವಿವರಿಸಲಾಗಿದೆ. ಈ ಗ್ರಂಥಕ್ಕೆ ಶ್ರೀಮಾನ್ ಯಲ್ಲಪ್ಪರೆಡ್ಡಿಯವರು ಮುನ್ನುಡಿ ಬರೆದಿದ್ದಾರೆ. ಈ ಪುಸ್ತಕದ ಬೆಲೆ ರೂ. 200 ಇದರ ಸಂಪಾದಕರು ಡಾ: ಎಲ್ ವಸಂತ, ಡಾ: ಟಿ. ಆರ್. ದತ್ತಾತ್ರಿ.

ನಮ್ಮ ಜಾಗತಿಕ ಪ್ರಪಂಚದಲ್ಲಿಸಸ್ಯ ಸಂಕುಲಗಳ ಜೀವ ವೈವಿಧ್ಯತೆಯನ್ನು ಅರಿಯಲು ಆಧುನಿಕ ಉಪಕರಣಗಳನ್ನು ಬಳಸುತ್ತಿದ್ದಾರೆ. ಆದರೆ ನಮ್ಮ ತಾತ ಮುತ್ತಾತಂದಿರು ಯಾವುದೇ ಯಂತ್ರಗಳ ಸಹಾಯವಿಲ್ಲದೆ ಸಸ್ಯ ಸಂಕುಲಗಳ ಜೈವಿಕ ಕ್ರಿಯೆಗಳಿಗೆ ಸ್ಪಂದಿಸಿ ಸಸ್ಯ ಜೀವ ಜಗತ್ತಿನ ಅತಿ ಸೂಕ್ಷ್ಮಾಣು ಸೂಕ್ಷ್ಮ ಜೀವಿಗಳ ಸಂಬಂಧವನ್ನು ಅರಿತು ಸಂಸ್ಕೃತ ಭಾಷೆಯಲ್ಲಿ ಸಾವಿರಾರು ಶ್ಲೋಕಗಳನ್ನು ರಚಿಸಿದ್ದಾರೆ. ಶ್ರಿ ನಾಗೇಶರಾಯರು ಈಗ್ಗ ಸುಮಾರು ಎರಡು- ಮೂರು ದಶಕಗಳ ಹಿಂದೆ ಬಹು ಅಮೂಲ್ಯವಾದಂತಹ ವಿಷಯಗಳನ್ನು ಸಂಗ್ರಹಿಸಿ ವೃಕ್ಷಾಯುರ್ವೇದ ಎಂಬ ಗ್ರಂಥವನ್ನು ರಚಿಸಿದಾಗ್ಯೂ ಇದು ಓದುಗರಿಗೆ ತಲುಪದೆ ಇರುವುದು ತುಂಬ ವಿಷಾದಕರ ಸಂಗತಿ. ಸ್ವಲ್ಪ ತಡವಾಗಿಯಾದರೂ ಶ್ರಿಮಾನ್ ನಾಗೇಶರಾಯರ ಹತ್ತಿರ ಸಂಬಂಧಿಗಳು ಈ ಗ್ರಂಥದ ಮಹತ್ವವನ್ನುಅರಿತು ಜನಗಳಿಗೆ ತಲುಪುವಂತೆ ಮುದ್ರಿಸಲು ಮುಂದೆ ಬಂದಿರುವುದು ತುಂಬ ಸಂತೋಷಕರ ಸಂಗತಿ.

ಪ್ರಕಾಶಕರು:ಡಾ: ಎಂ. ಎಸ್. ನಾಗೇಶರಾವ್ ರವರ ಸ್ಮಾರಕ
ಆಯುರ್ವೇದ ಪ್ರಗತಿ ಮತ್ತು ಸಂಶೋಧನಾ ಕೇಂದ್ರ ಮತ್ತು
ಕೆ. ಎಸ್. ಪುರಾಣಿಕ್ 188 ಪಾಲ್ಮಾರು ಕಾರ್ಕಳ - 574104

ಜನತಾ ಜೀವ ವೈವಿಧ್ಯ ದಾಖಲಾತಿ

ಪ್ರಕಾಶಕರು : ನಾಗರಿಕಾ ಸೇವಾ ಟ್ರಸ್ಟ್
ಸಹಕಾರ : ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಪರಿಸರ ವಿಜ್ಞಾನ ಕೇಂದ್ರ ಹಾಗೂ ಕೊಯ್ಯೂರು ಗ್ರಾಮ ಪಂಚಾಯತ್
ಈ ಪುಸ್ತಕದ ಬೆಲೆ : ರೂ.100 /-

ಶಂಪಾ ದೈ ತೋಟರ ಸೂಕ್ತ ಮುನ್ನಡಿಯಿಂದ ಆರಂಭವಾಗುವ ಪುಸ್ತಕ ಕೊಯ್ಯೂರು ಗ್ರಾಮ ಪಂಚಾಯತಿಯ ಎಲ್ಲಾ ರೀತಿಯ ಜೀವ ವೈವಿಧ್ಯತೆ, ಸಾಂಸ್ಕೃತಿಕ ಸಂಪತ್ತಿನ ದಾಖಲೆ ಮಾಡುವಲ್ಲಿ ಯಶಸ್ವಿಯಾಗಿದೆ. ಒಂದು ಗ್ರಾಮ ಪಂಚಾಯಿತಿ ವೈವಿಧ್ಯತೆಯಲ್ಲಿ ಇಷ್ಟೆಲ್ಲಾ ಶ್ರೀಮಂತವಾಗಿದೆಯೆ? ಹಾಗಿದ್ದರೆ, ಒಟ್ಟಾರೆ ನಮ್ಮ ಈ ದೇಶ ಅದೆಷ್ಟು ಶ್ರೀಮಂತ ದೇಶ ಎಂಬ ಹೆಮ್ಮೆಯ ಭಾವನೆ ಪುಸ್ತಕ ಓದಿ ಮುಗಿಸುವಾಗ ಬಂದರೆ ಆಶ್ಚರ್ಯವೇನಿಲ್ಲ.

`ಯೋಜನಾ ವಿಧಾನ' ಅಧ್ಯಾಯ ಈ ರೀತಿಯ ಕಾರ್ಯಗೊಳ್ಳುವ ಇತರರಿಗೂ ಮಾರ್ಗದರ್ಶಿಯಾಗುವಂತಿದೆ. `ಭೂದೃಶ್ಯ', `ಅಭಿವೃದ್ಧಿಯ ಅಕಾಂಕ್ಷೆಗಳು' ಈ ಅಧ್ಯಾಯಗಳು, ಜೊತೆಗೇ ಒದಗಿಸಿರುವ ಹಾಗೂ ಅನುಬಂಧಗಳು ಗ್ರಾಮ ಪಂಚಾಯತಿಯ ಸಮೃದ್ಧಿಯ ಕಲ್ಪನೆ ಮೂಡಿಸುವುದರ ಜೊತೆಗೆ ಮುಂದೆ ಹಮ್ಮಿ ಕೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳ ಕಡೆಗೆ ದಾರಿ ತೋರಿಸುವುದಕ್ಕೂ ನೆರವಾಗುವಂತಿದೆ. ಔಷಧೀಯ ಸಸ್ಯ, ಕಿರು ಅರಣ್ಯ ಉತ್ಪನ್ನಗಳ ಬಗ್ಗೆ ಸಮಗ್ರ ದಾಖಲೆಯಲ್ಲಿ ಯಶಸ್ವಿಯಾಗಿರುವ ಪುಸ್ತಕ ಆಹಾರ ಸಸ್ಯಗಳ ತಳಿ ವೈವಿಧ್ಯತೆಯ ಬಗ್ಗೆ ಗಮನ ಹರಿಸದಿರುವುದು ಅಚ್ಚರಿ ಮೂಡಿಸುತ್ತದೆ. ಹಾಗೇ ಗ್ರಾಮದ ಜ್ಞಾನ ಸಂಪತ್ತಿನ ಕುರಿತಾದ ದಾಖಲೆಗಳು ಪುಸ್ತಕದಲ್ಲಿ ಮೂಡಿ ಬರದಿರುವುದು ಅಷ್ಟೇ ಆಶ್ಚರ್ಯದ ಸಂಗತಿ ಮತ್ತು ದೊಡ್ಡ ಲೋಪ ಎನ್ನ ಬಹುದಾಗಿದೆ.

ಸ್ಥಳೀಯ ವೈವಿಧ್ಯತೆಯ ಇಷ್ಟೆಲ್ಲಾ ಮಾಹಿತಿಯನ್ನೊಳಗೊಂಡ ಪುಸ್ತಕ, ಸ್ಥಳೀಯ ಶಾಲೆಗಳಲ್ಲಿ ಪಠ್ಯಪುಸ್ತಕ ವಾದಲ್ಲಿ ದಾಖಲಾತಿಗೂ ಅರ್ಥ ಬಂದು ಬೆಳವಣಿಗೆಗೆ ನಾಂದಿಯಾದೀತು. ಇಂತಹ ದಾಖಲಾತಿಗಳು ಪ್ರತಿಯೊಂದು ಪಂಚಾಯತಿಗೂ ಮೂಡಿ ಬರುವುದು ಅತ್ಯಗತ್ಯ.

ಭತ್ತ–ರಾಸಾಯನಿಕರಹಿತವಾಗಿ ಪೀಡೆ ಮತ್ತು ರೋಗಗಳ ನಿಯಂತ್ರಣ

ಮೂಲ :– ಕೆ.ವಿಜಯಲಕ್ಷ್ಮಿ, ಸುಭಾಷಿಣಿ, ಶ್ರೀಧರ್ ಮತ್ತು ಇ. ದಾಮೋದರನ್
ಅನುವಾದ:– ಪಿ. ಶ್ರೀನಿವಾಸ್, ಬೆಲೆ: ರೂ. 35

ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರೀಸರ್ಚ್ ಅಂಡ್ ಆಕ್ಷನ್ (ICRA), ಬೆಂಗಳೂರು ಮತ್ತು ಪಿ.ಇ.ಟಿ. ಸುನಂದಾ ಟಿ.ಗೊಲ್ಲಹಳ್ಳಿ, ಬೇತಮಂಗಲ ಇವರು ಒಗ್ಗೂಡಿ ಹೊರತಂದಿರುವ ಈ ಪುಸ್ತಕ, ಸಾವಯವ ವಿಧಾನದಲ್ಲಿ ಭತ್ತ ಬೆಳೆಯುವಂತಹ ರೈತರಿಗೆ ತುಂಬ ಪ್ರಯೋಜನಕಾರಿಯಾಗಬಹುದು. ಈ ಪುಸ್ತಕದಲ್ಲಿ ಭತ್ತದ ಬೆಳೆಯನ್ನು ವಿವಿಧ ಹಂತದಲ್ಲಿ ನಾಶಪಡಿಸುವ ಪೀಡೆ ಮತ್ತು ರೋಗಗಳ ಬಗ್ಗೆ ಚಿತ್ರ ಸಮೇತ ವಿವರಣೆ ಹಾಗೂ ರಾಸಾಯನಿಕರಹಿತ ನಿಯಂತ್ರಣಗಳ ಬಗ್ಗೆ ತಿಳಿಸಲಾಗಿದೆ. ಈ ಪುಸ್ತಕದಲ್ಲಿ ತಿಳಿಸಿರುವ ವಿವರಗಳು ಅನೇಕ ರೈತರ ಯಶಸ್ವೀ ಅನುಭವಗಳಾಗಿದ್ದರೂ, ಇದನ್ನು ಅನುಸರಿಸುವವರು ಸಣ್ಣ ಪ್ರಮಾಣದಲ್ಲಿ ಮೊದಲು ಪ್ರಯತ್ನಿಸಿ, ಖಚಿತಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

ಬಾಳೆದಿಂಡಿನ ವಿಧವಿಧ ತಿನಿಸುಗಳು:

ನಮ್ಮ ಹಿರಿಯರು ಆಹಾರದಲ್ಲಿ ಕಾಯಿ, ಹಣ್ಣು, ಗಿಡಗಳನ್ನು, ಗೆಡ್ಡೆ ಗೆಣಸುಗಳನ್ನು ಅಧಿಕವಾಗಿ ಉಪಯೋಗಿಸುತ್ತಿದ್ದು, ಅವುಗಳಲ್ಲಿ ಔಷಧೀಯ ಗುಣ ಅಡಕವಾಗಿತ್ತು. ಇಂದು ಇವುಗಳ ಉಪಯೋಗ ತೀರ ಕಡಿಮೆ ಆಗಿದ್ದರೂ, ಮಲೆನಾಡಿನ ಪ್ರದೇಶಗಳಲ್ಲಿ ಇಂತಹ ಗುಣಗಳನ್ನೊಳಗೊಂಡ ಬಾಳೆ ದಿಂಡಿನಂತಹ ಪದಾರ್ಥಗಳಿಂದ ತಯಾರಿಸುವ ಅಡಿಗೆ ಸಾಮಾನ್ಯವಾಗಿದೆ. ಅದರ ಕೆಲವು ತಿನಿಸುಗಳ ಪರಿಚಯ ಇಲ್ಲಿ ಕೊಡಲಾಗಿದೆ:

ಬಾಳೆದಿಂಡಿನ ಪಲ್ಯ

ಬೇಕಾಗುವ ಸಾಮಗ್ರಿಗಳು : ತೆಂಗಿನ ಎಣ್ಣೆ ಅಥವ ಕಡಲೆ ಎಣ್ಣೆ 2-3 ಚಮಚ, ಒಣಮೆಣಸಿನ ಕಾಯಿ 3 -4, ಸಾಸಿವೆ 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಬೆಲ್ಲ ಸ್ವಲ್ಪ. **ಮಾಡುವ ವಿಧಾನ:-** ಎಣ್ಣೆ, ಮೆಣಸು, ಸಾಸುವೆ ಒಗ್ಗರಣೆಗೆ ಹೆಚ್ಚಿಟ್ಟ ಬಾಳೆದಿಂಡನ್ನು ಹಾಕಿ ನಂತರ ಉಪ್ಪು ಬೆಲ್ಲವನ್ನು ಸೇರಿಸಿ, ಸಣ್ಣ ಉರಿಯಲ್ಲಿ ಬೇಯಿಸಿ ರುಚಿಗಾಗಿ ತೆಂಗಿನ ತುರಿಯನ್ನು ಹಾಕುವುದು.

ಬಾಳೆದಿಂಡಿನ ಇಡ್ಲಿ

ಬೇಕಾಗುವ ಸಾಮಗ್ರಿಗಳು- ಅಕ್ಕಿ ರವೆ ಅಥವ ಬೆಳ್ತಿಗೆ ಅಕ್ಕಿ 2 ಪಾವು, ಉದ್ದಿನ ಬೇಳೆ 1/2 ಪಾವು, ಹೆಚ್ಚಿದ ಬಾಳೆದಿಂಡು 1 ಪಾವು ಮತ್ತು ರುಚಿಗೆ ತಕ್ಕಷ್ಟು ಉಪ್ಪು. **ಮಾಡುವ ವಿಧಾನ:-** ಉದ್ದಿನ ಬೇಳೆಯನ್ನು ನೀರಿನಲ್ಲಿ 1/2 ಗಂಟೆ ನೆನೆಸಿ, ಹೆಚ್ಚಿದ ಬಾಳೆದಿಂಡಿನಲ್ಲಿ ನಾರು ತೆಗೆದು ಉದ್ದಿನ ಬೇಳೆಯೊಂದಿಗೆ ರುಬ್ಬಿ ಅಕ್ಕಿ, ರವೆ ಮತ್ತು ಉಪ್ಪನ್ನು ಬೆರೆಸಿಟ್ಟು ಮರುದಿನ ಇಡ್ಲಿಯನ್ನು ಬೇಯಿಸುವುದು.

ಬಾಳೆದಿಂಡಿನ ಚಟ್ನಿ

ಬೇಕಾಗುವಂತಹ ಸಾಮಗ್ರಿಗಳು: ಹುರಿದ ಹಸಿ ಮೆಣಸು 3-4, ಶುಂಠಿ 1/2 ಇಂಚು, ಈರುಳ್ಳಿ 1 ಸಣ್ಣದು, ತೆಂಗಿನಕಾಯಿ 1 ಹೋಳು, ಸಣ್ಣದಾಗಿ ಹೆಚ್ಚಿದ ಬಾಳೆದಿಂಡು 1 ಲೋಟ, ರುಚಿಗೆ ಉಪ್ಪು, ಎಲ್ಲ ಸೇರಿಸಿ ರುಬ್ಬಬೇಕು.

ಬಾಳೆದಿಂಡಿನ ಸಲಾಡು

ಬೇಕಾಗುವಂತಹ ಸಾಮಗ್ರಿಗಳು: ಹೆಚ್ಚಿದ ಬಾಳೆದಿಂಡು, ಹಸಿ ಮೆಣಸಿನ ಕಾಯಿ 2, ಈರುಳ್ಳಿ 1 ಗೆಡ್ಡೆ, ಮೊಸರು 1 ಕಪ್, ಒಗ್ಗರಣೆಗೆ ಕರಿಬೇವು, ಎಣ್ಣೆ, ಸಾಸಿವೆ, ಉದ್ದಿನ ಬೇಳೆ. ***ಮಾಡುವ ವಿಧಾನ:-*** ಈರುಳ್ಳಿ, ಹಸಿಮೆಣಸಿನ ಕಾಯಿ, ಮೊಸರು, ಸಪೂರ ಹೆಚ್ಚಿದ ಬಾಳೆದಿಂಡು ಹಾಕಿ ಒಗ್ಗರಣೆ ಹಾಕುವುದು.

ಬಾಳೆದಿಂಡನ್ನು ಬೇಳೆಕಾಳುಗಳೊಂದಿಗೆ ಬೆರೆಸಿ ಹಲವಾರು ತಿಂಡಿಗಳನ್ನು ಮಾಡಬಹುದು. ಬಾಳೆದಿಂಡಿನ ರಸ ತೆಗೆದು ಅದಕ್ಕೆ ಬೆಲ್ಲ ಅಥವ ಜೇನುತುಪ್ಪ ಸೇರಿಸಿ ಕುಡಿದರೆ ದೇಹದ ಕೊಬ್ಬು ಕರಗುತ್ತದೆ ಹಾಗು ಇದರಲ್ಲಿ ಕಬ್ಬಿಣದ ಅಂಶವಿರುತ್ತದೆ ಮತ್ತು ಮೂತ್ರ ಕೋಶದಲ್ಲಿ ಕಲ್ಲು ಇದ್ದಲ್ಲಿ ಕರಗುವುದು, ಬೆನ್ನುನೋವು ಹಾಗೂ ಸಿಹಿಮೂತ್ರ ರೋಗದವರಿಗೆ, ರಕ್ತದೊತ್ತಡವಿರುವವರಿಗೆ ಇದು ಒಳ್ಳೆಯದು.

ಮೂಲ: `ನಿಸರ್ಗದತ್ತ ಆಹಾರ', ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ.

ಮಾನ್ಯರೆ,

ಸದ್ಯಕ್ಕೆ ಯಾವುದೇ ಕೃಷಿಯಲ್ಲಿ ತೊಡಗಿಲ್ಲದವರಿಗೆ, ಸಾವಯವ ಕೃಷಿ ಮಾಡಬೇಕೆನ್ನುವವರಿಗೆ, ಆರ್ಥಿಕ ಸಹಾಯ ನೀಡಲು ಯಾವುದಾದರು ಸಂಸ್ಥೆ ಇದ್ದಲ್ಲಿ ಪರಿಚಯಿಸಿ.

ಚನ್ನಬಸವರೆಡ್ಡಿ ಪಾಟೀಲ್, ಹಂಬೇರಾಳ, ರಾಯಚೂರು - 584 102

ಆರ್ಥಿಕ ಸಹಕಾರ ಅನುಮಾನ, ಆದರೆ ತಾಂತ್ರಿಕ ಸಲಹೆ, ತರಬೇತಿಗಳಿಗೆ ಬೆಂಗಳೂರಿನ ಇಕ್ರಾ, ಎ ಎಂ ಇ ನಂತ ಸಂಸ್ಥೆಗಳ ಸಹಾಯ ಸ್ವಲ್ಪ ಮಟ್ಟಿಗೆ ಸಿಗಬಹುದು - ಸಂ.

ಆತ್ಮೀಯರೆ,

ಹಿತ್ತಲಗಿಡ ಪತ್ರಿಕೆ ಕಳುಹಿಸಿದ್ದೀರಿ ತಲುಪಿದೆ, ಪತ್ರಿಕೆ ಚೆನ್ನಾಗಿದೆ, ವಿದ್ಯಾರ್ಥಿಗಳಿಗೆ ಮತ್ತು ಸಾವಯವ ಪ್ರೇಮಿಗಳಿಗೆ ಉತ್ತಮ ಕೊಡುಗೆ. ಹೇಳಿದಂತೆ ನಡೆಯೋದು ನನ್ನ ಧರ್ಮ, ಸಾವಯವ ಒಂದು ಬರಿಯ ಕೃಷಿ ವಿಧಾನವಲ್ಲ– ಜೀವನ ವಿಧಾನ, ಹೆಚ್ಚು ಹೇಳಬೇಕೆಂದರೆ ಗಾಂಧೀ ಜೀವನ ವಿಧಾನವನ್ನು ನಾವು ಸ್ವಲ್ಪ ಮಟ್ಟಿಗಾದರೂ ಅಳವಡಿಸಲೇ ಬೇಕು. ಬಟರ್‌ಫ್ಲೈ (ಚಿಟ್ಟೆ)ಗಳಂತಲ್ಲ. ನಾನು ಈಗ ವಿದ್ಯಾರ್ಥಿಗಳ ದಂಡನ್ನೇ ತಯಾರು ಮಾಡಿ ಸಮಾಜಕ್ಕೆ ನೀಡ್ತಾ– ನೋಡ್ತಾ ಇದ್ದೇನೆ. ನಿಮ್ಮಗಳ ಸಹಕಾರ, ಪರಿಸರದ ಸಹಕಾರ ಇದ್ರೆ ಈ ಶಾಂತಿಮೂಲೆ ಗುರಿ ಸೇರೋದು ಖಂಡಿತಾ. ನನ್ನಿಂದ ಏನಾದರೂ ಲೇಖನಗಳೋ, ವಿಚಾರಗಳೋ ಬೇಕಿದ್ರೆ ತಿಳಿಸಿ, ನನ್ನ ಸಹಕಾರ ಕೈಲಾದ ಮಟ್ಟಿಗೆ ಖಂಡಿತಾ ನಿಮಗಿದೆ.

ಎಂ.ಟಿ. ಶಾಂತಮೂಲೆ, 'ಸಾವಯವ' (ಸಂಚಾಲಕ), ಕುಕ್ಕುಜಡ್ಕ - 574 212

ತಮ್ಮಂತಹ ನಿಷ್ಠರು ಈ ಸಾವಯವ ಚಳುವಳಿಯಲ್ಲಿರುವುದು ನಮಗೆ ಅಪಾರ ಉತ್ಸಾಹ ಮತ್ತು ಶಕ್ತಿ ತರುತ್ತಿದೆ. ವಿದ್ಯಾರ್ಥಿಗಳಲ್ಲಿ ಹಿತ್ತಲಗಿಡದ ತತ್ವ ಗಟ್ಟಿ ಮಾಡಲು ತಮ್ಮ ನೆರವು ಅತ್ಯಗತ್ಯ. ಹಿತ್ತಲ ಗಿಡಕ್ಕೆ ದಯಮಾಡಿ ಬರೆಯಿರಿ– ಸಂ

ಮಾನ್ಯ ಶ್ರೀ - T. N. ಪ್ರಕಾಶ್‌ರವರಿಗೆ ನಮಸ್ಕಾರಗಳು,

'ಹಿತ್ತಲಗಿಡ' ಪತ್ರಿಕೆಗೆ ನಾನು ಚಂದಾದಾರನಾಗಲು ಬಯಸಿ ಈ ಪತ್ರ ಬರೆಯುತ್ತಿದ್ದೇನೆ. ರೈತಾಪಿ ದಂಧೆಯಲ್ಲಿ ಮುಳುಗಿರುವ ನಾನು ಔಷಧೀಯ ಗಿಡಮೂಲಿಕೆ ಬಗೆಗೆ ಆಸಕ್ತಿ ಹೊಂದಿದ್ದು, ಕಳೆದ ನಾಲ್ಕಾರು ವರ್ಷಗಳಿಂದ ಆ ಹವ್ಯಾಸದಲ್ಲಿ ತೊಡಗಿದ್ದೇನೆ. ಈ ಅಧ್ಯಯನ 'ಆಸಕ್ತಿ'ಯ ಹೊರತಾಗಿ ಮತ್ತಾವ ಲಾಭದ ದೃಷ್ಟಿಯಿಂದಲ್ಲ.

G.S. ಹೆಗ್ಡೆ, ಲಕ್ಕಿಸವಲಮನೆ, ಶಿರಸಿ - 581 358

ಪ್ರಿಯ ಬಂಧು, ಡಾ. ಪ್ರಕಾಶ್‌ರವರಿಗೆ,

ನನ್ನ M.D. Thesis ಗೆ 'ಭೂನಾಗ ತೈಲ' (ಎರೆಹುಳದಿಂದ ತಯಾರಿಸಲ್ಪಡುವ ಔಷಧ) ಹಾಗೂ ಅದರ ಉಪಯುಕ್ತತೆ ಬಗ್ಗೆ ಯೋಚಿಸುತ್ತಿದ್ದೇನೆ. ನೀವು ಕೃಷಿ ವಿಶ್ವವಿದ್ಯಾಲಯದಲ್ಲಿರುವುದರಿಂದ - Copper Rich ಇರುವ Fieldಗಳು, ಅಲ್ಲಿ ಸಿಗಬಹುದಾದ ಎರೆಹುಳಗಳ ಸಾಧ್ಯತೆ, per Kg ಎರೆಹುಳಕ್ಕೆ (ನನಗೆ 4-5 kg ಬೇಕಾಗಬಹುದು) ತಗುಲಬಹುದಾದ ವೆಚ್ಚ, ಜಾಂನಗರಕ್ಕೆ ತರಿಸಬಹುದಾದ ವ್ಯವಸ್ಥೆ. ಕೃಷಿ ಶಾಸ್ತ್ರ ಹೇಳುವಂತೆ, ಎರೆಹುಳ ಇರುವ ಭೂಮಿಯಲ್ಲಾಗಲೀ, ಎರೆಹುಳದ Excreta (ಮಲ) ದಲ್ಲಿರುವ Mineral/Elemats ಗಳ ಬಗ್ಗೆ ನಿಮಗೆಷ್ಟು ತಿಳಿದಿದೆಯೋ ಅಷ್ಟು ಮಾಹಿತಿ ನೀಡುವಲ್ಲಿ ಅನುವಾದರೆ ನನಗೆ ಅನುಕೂಲವಾಗುವುದು.

Dr. ಕೃಷ್ಣಮೂರ್ತಿ M.S, Scholer,
ಗುಜರಾತ್ ಆಯುರ್ವೇದ ವಿಶ್ವವಿದ್ಯಾಲಯ, ಜಾಂನಗರ್, ಗುಜರಾತ್

ನಿಮ್ಮ ಪ್ರಯತ್ನ ಶ್ಲಾಘನೀಯ. ನಮ್ಮ ಕೃಷಿ ವಿಶ್ವ ವಿದ್ಯಾಲಯದ ಡಾ:ರಾಧಾ D ಕಾಳೆಯವರಿಂದ ನಿಮ್ಮ ಪ್ರಶ್ನೆಗಳಿಗೆ ಉತ್ತರ ಸಿಗಬಹುದೇನೋ ಸಂಪರ್ಕಿಸಿರಿ– ಸಂ

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಸಭೆ

ಕೇಂದ್ರಸರ್ಕಾರದ ಮುಕ್ತ ಆಮದು ನೀತಿಯಿಂದಾಗುವ ದುಷ್ಪರಿಣಾಮಗಳ ನಿವಾರಣೆಗಾಗಿ ಕೈಗೊಳ್ಳಬೇಕಾಗಿರುವ ಕ್ರಮಗಳ ಕುರಿತು ನಿರ್ಧರಿಸಲು ರೈತ ಪ್ರತಿನಿಧಿಗಳ ಸಮ್ಮೇಳನ ದಿ - 29/07/2000ರಂದು ಜರುಗಿರುತ್ತದೆ. ಈ ಸಮ್ಮೇಳನದ ಉದ್ಘಾಟನೆಯನ್ನು ರಾಜ್ಯದ ಕೃಷಿ ಸಚಿವರೂ, ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷರೂ ಆದ ಶ್ರಿ ಟಿ. ಬಿ. ಜಯಚಂದ್ರ ಮಾಡಿದರು. ಈ ಸಭೆಯಲ್ಲಿ ರೈತರು "ವ್ಯವಸಾಯ ಮಾಡುತ್ತಿರುವ ಆಸ್ತಿವಂತ, ಆರೋಗ್ಯವಂತ ವರನಿಗೆ, ಮಧ್ಯಮ ವರ್ಗ ಕುಟುಂಬದ ಕನ್ಯೆ ಕೊಡಲು, ಮನಸ್ಸು ಮಾಡುವಷ್ಟರ ಮಟ್ಟಿಗಾದರೂ ಕೃಷಿಯ ಅಂತಸ್ತು ಹೆಚ್ಚುವ ಹಾಗೆ ಕರ್ನಾಟಕ ಕೃಷಿ ಆಯೋಗ ಪ್ರಯತ್ನಿಸುವಂತೆ" ಮಾರ್ಮಿಕವಾಗಿ ವಿನಂತಿಸಲಾಯಿತು. ಇದರಲ್ಲಿ ಕೇಂದ್ರ ಕೃಷಿ ಕಾರ್ಯಪಡೆ ನೂತನ ಅಧ್ಯಕ್ಷರಾದ ಶ್ರಿ ಶರತ್ ಜೋಶಿ, ಆಂಧ್ರ ರೈತ ಮುಖಂಡ ಶ್ರೀ. ಚಂಗಲ್‌ರೆಡ್ಡಿ, ಮುಂತಾದ ರೈತ ಮುಖಂಡರು ಭಾಗವಹಿಸಿದ್ದರು.

ಆದರೆ, ವಿಪರ್ಯಾಸದ ಸಂಗತಿ, ಈ ಸಭೆಯ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೇಂದ್ರದ ಕೃಷಿ ಕಾರ್ಯ ಪಡೆ (Task Force)ಯ ನೂತನ ಅಧ್ಯಕ್ಷ ಶ್ರಿ.ಶರದ್ ಜೋಶಿ "ಜಾಗತೀಕರಣ ಭಾರತೀಯ ರೈತರಿಗೆ ಅಪರಿಮಿತ ಅವಕಾಶ ಕಲ್ಪಿಸಿ ಕೊಡುತ್ತಿದೆ, ಭಾರತದಲ್ಲಿ ಇದುವರೆಗೆ ಸಮಾಜವಾದದ ಹೆಸರಿನಲ್ಲಿ ಸರ್ಕಾರದ ಅತೀ ಹಸ್ತಕ್ಷೇಪವಿತ್ತು. ಅದು ಈಗ ವಿಶ್ವದಾದ್ಯಂತ ಕುಸಿದು ಹೋಗಿದೆ, ಜೊತೆಗೆ ಇಂದು ನಮ್ಮ ರೈತರಿಗೆ ಜೈವಿಕ ತಂತ್ರಜ್ಞಾನಗಳಂತಹ ಮಹತ್ವದ ತಾಂತ್ರಿಕ ಆವಿಷ್ಕಾರಗಳೆಲ್ಲಾ ಸಿಗುತ್ತಿವೆ, ಇವೆಲ್ಲಾ ಅತ್ಯಂತ ಶುಭ ಸೂಚನೆಗಳು, ಇದರಿಂದ ರೈತರ ಉದ್ಧಾರವಾಗಲಿದೆ" ಎಂದಿರುವ ಮಾತುಗಳು, ಮುಂಬರುವ ದಿನಗಳಲ್ಲಿ ನಮ್ಮ ರೈತರನ್ನು ಮತ್ತಷ್ಟು ಗೊಂದಲಗಳಿಗೆ ತಳ್ಳುವ ಸೂಚನೆಗಳಾಗಿವೆ.

ಅಂತರರಾಷ್ಟ್ರೀಯ ಪರಿಸರ ಅರ್ಥಶಾಸ್ತ್ರ ಸಮ್ಮೇಳನ ದಿ: 05-07-2000, ಆಸ್ಟ್ರೇಲಿಯದ ಕ್ಯಾನ್‌ಬೆರಾ

ಈ ಸಮ್ಮೇಳನದಲ್ಲಿ ಹಿತ್ತಲಗಿಡದ ಸಂಪಾದಕರಾದ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರು ಭಾಗವಹಿಸಿದ್ದು, 'ಸುಸ್ಥಿರ ಕೃಷಿ ಅಭಿವೃದ್ಧಿ' ಮೇಲೆ ಒಂದು ಪ್ರಬಂಧ ಮಂಡಿಸಿರುವರು. ಈ ಸಮ್ಮೇಳನದಲ್ಲೇ ಅಮೇರಿಕಾದಲ್ಲಿ ನೆಲೆಸಿರುವ ಕರ್ನಾಟಕದ ಪ್ರೊ. ಮಹದೇವ ಭಟ್‌ರವರು 'ದೇಶೀಯ ಜ್ಞಾನ ಮತ್ತು ಬೌದ್ಧಿಕ ಸನದಿನ ಹಕ್ಕು' ಈ ವಿಚಾರದ ಮೇಲೆ ಪ್ರಬಂಧವೊಂದನ್ನೂ ಮಂಡಿಸಿದ್ದರು. ಸಮ್ಮೇಳನದ ಅಂಗವಾಗಿ, ಆಸ್ಟ್ರೇಲಿಯಾದ ಆದಿವಾಸಿ ಜನಾಂಗ ವಾಸಿಸುತ್ತಿರುವ ಪ್ರದೇಶ ಒಂದಕ್ಕೆ ಭೇಟಿ ನೀಡಿದುದು ವಿಶೇಷವಾಗಿತ್ತು. ದೇಶ ವಿದೇಶಗಳ ನೂರಾರು ತಜ್ಞರು ಪಾಲ್ಗೊಂಡಿದ್ದ ಈ ಸಮ್ಮೇಳನದಲ್ಲಿ 'ಪರಿಸರ ಅರ್ಥಶಾಸ್ತ್ರ'ವನ್ನು ಜನ ಮತ್ತು ಸಮಾಜದತ್ತ ಕೊಂಡೊಯ್ಯುವ ಮಾರ್ಗಗಳತ್ತ ಚರ್ಚಿಸಲಾಯಿತು.

ಕೃಷಿ ಮತ್ತು ಪರಿಸರ ಬಗೆಗಿನ ಚರ್ಚಾಗೋಷ್ಠಿಗಳು

ಈ ಮೇಲಿನ ವಿಚಾರದ ಮೇಲೆ ಎರಡು ಚರ್ಚಾಗೋಷ್ಠಿಗಳು ಶಿವಮೊಗ್ಗದ ಮಹಾತ್ಮಗಾಂಧಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ತಾ: 22-08-2000 ರಂದು ಮತ್ತು ಬನ್ನೇರುಘಟ್ಟ ರಸ್ತೆಯ 'ದಲಿತ ಮಹಿಳಾ ಚಳುವಳಿ' ಸಂಸ್ಥೆ ತಾ: 26 ನೇ ಆಗಸ್ಟ್ 2000 ರಂದು ಏರ್ಪಡಿಸಿದ್ದವು. ಇದರಲ್ಲಿ ಸಂಪಾದಕ ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ ಭಾಗವಹಿಸಿ ಮಾತನಾಡಿದರು.

ಬೆಂಗಳೂರಿನಲ್ಲಿ ಎರಡು ಮಹತ್ವದ ಮಹಾ ಮೇಳಗಳು

ಬೀಜ ಪಂಚಾಯಿತ್ತಿ

ಮಹಿಳಾ ಮತ್ತು ಪರಿಸರ ವಿಚಾರಗಳ ಖ್ಯಾತ ಹೋರಾಟಗಾರ್ತಿ ಡಾ. ವಂದನಾಶಿವರ ನೇತೃತ್ವದಲ್ಲಿ ಸುಮಾರು :24ಕ್ಕೂ ಅಧಿಕ ಸಂಘ ಸಂಸ್ಥೆಗಳು ಕೂಡಿ ಜಾಗತೀಕರಣ, ವಿಶ್ವ ವಾಣಿಜ್ಯ ಒಪ್ಪಂದ ಮತ್ತು ಜೈವಿಕ ತಂತ್ರಜ್ಞಾನದ ದಾಳಿಗಳ ಹಿನ್ನೆಲೆಯಲ್ಲಿ ಈ ಅನನ್ಯ ಮೇಳವನ್ನು ಬೆಂಗಳೂರಿನ ಗಾಂಧೀ ಭವನದಲ್ಲಿ ತಾ:24-25 ಸೆಪ್ಟೆಂಬರ್ 2000 ರಂದು ಏರ್ಪಡಿಸಲಾಗಿದೆ. ಈ ನಿಟ್ಟಿನಲ್ಲಿ ರೈತರ, ತಜ್ಞರ ಸಮ್ಮುಖದಲ್ಲಿ ಮಿತಿಮೀರಿದ ಸಾಲ, ರೈತರ ಆತ್ಮಹತ್ಯೆಗಳಂತಹ ಗಂಭೀರ ವಿಚಾರಗಳ ಬಗ್ಗೆ ಚರ್ಚಿಸಿ ಸಾರ್ವಜನಿಕ ಅಹವಾಲನ್ನು ಕೇಳಲಾಗುವುದು. ~~ಈ~~ ರೀತಿ ಬೀಜ ಪಂಚಾಯಿತ್ತಿಗಳ ಮೂಲಕ ಜೈವಿಕ ತಂತ್ರಜ್ಞಾನ, ಪೇಟೆಂಟ್‌ಗಳಂತಹ ಅಪಾಯಕಾರಿ ವಿಚಾರಗಳ ಬಗ್ಗೆ ತೀರ್ಮಾನ ಕೈಗೊಳ್ಳಲು ಯೋಚಿಸುವುದೇ ಈ ಸಮ್ಮೇಳನದ ಉದ್ದೇಶ ಎನ್ನಲಾಗಿದೆ. ಪುಟ್ಟಣ್ಣಯ್ಯ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘ ಈ ಕಾರ್ಯಕ್ರಮವನ್ನು ಸಂಘಟಿಸಿತ್ತು.

ಜಾಗತಿಕ ರೈತ ಸಮ್ಮೇಳನ

ಪ್ರೊ. ನಂಜುಂಡ ಸ್ವಾಮಿ ನೇತೃತ್ವದ ರಾಜ್ಯ ರೈತ ಸಂಘ ಇದೇ ಅಕ್ಟೋಬರ್ 2-6ರ ವರೆಗೆ ಮೂರನೇ ವಿಶ್ವ ರೈತ ಸಮ್ಮೇಳನವನ್ನು ಏರ್ಪಡಿಸಿದೆ. ವಿಶ್ವ ವಾಣಿಜ್ಯ ಒಪ್ಪಂದ, ಪೇಟೆಂಟ್ ಕಾಯ್ದೆಗಳು, ಜೈವಿಕ ತಂತ್ರಜ್ಞಾನ, ಸಾವಯವ ಕೃಷಿ ಇವೇ ಮೊದಲಾದ ವಿಚಾರಗಳ ಬಗ್ಗೆ ದೇಶ ವಿದೇಶಗಳ ಸುಮಾರು 200ಕ್ಕೂ ಅಧಿಕ ರೈತ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಇದರ ಉದ್ಘಾಟನೆಯನ್ನು ಗಾಂಧೀ ಜಯಂತಿಯ ದಿನದಂದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೆಲಾ ಮಾಡಲಿರುವರು. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಬೆಳಗಾಂನ ಸೋಗಲು ಕ್ಷೇತ್ರದಲ್ಲಿ ಆಗಸ್ಟ್ 21ರಂದು ಮತ್ತು ಚಿತ್ರದುರ್ಗದಲ್ಲಿ ಆಗಸ್ಟ್ 28 ರಂದು ರೈತ ಅಧ್ಯಯನ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಈ ಶಿಬಿರಗಳಲ್ಲಿ ಜೈವಿಕ ತಂತ್ರಜ್ಞಾನ ಮತ್ತು ಹಸಿರು ಕ್ರಾಂತಿ ತಂತ್ರಜ್ಞಾನಗಳಿಗೆ ಬದಲಾಗಿ 'ರೊಕ್ಕವಿಲ್ಲದ ಸ್ಥಳೀಯ ಮಾರುಕಟ್ಟೆ,' ಆಹಾರದ ಸಾರ್ವಭೌಮತ್ವ ಮತ್ತು ಮನೆ ಮಟ್ಟದಲ್ಲಿ ಆಹಾರ ಸ್ವಾವಲಂಬನೆ, ಹೊರಗಿನ ಹೈಬ್ರಿಡ್ ತಳಿಗಳಿಗೆ ಬದಲಾಗಿ ನಾಟೀ ತಳಿಗಳ ಬಳಕೆ, ಒಂದು ಕುಟುಂಬ ಸ್ವಯಂ ದುಡಿಮೆಯಿಂದ ಸಾಗುವಳಿ ಮಾಡುವಷ್ಟರ ಮಟ್ಟಿಗಿನ ಭೂಮಿತಿ ಮತ್ತು ಹಂಚಿಕೆ ತರುವುದು, ಹಾಗೇ ಮುಂದೆ ರೈತರು ಆತ್ಮಹತ್ಯೆಗಿಳಿಯದಂತೆ ತಡೆಗಟ್ಟುವ ಚಳುವಳಿ ಹುಟ್ಟುಹಾಕುವುದು, ಇವೇ ಮೊದಲಾದ ಮಹತ್ವದ ವಿಚಾರಗಳನ್ನು ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯ್ತು.

ವಿ.ಸೂ.: ಹಿತ್ತಲಗಿಡದ ಈ ಸಂಚಿಕೆಯನ್ನು ಪರಿಸರದ ದೃಷ್ಟಿಯಿಂದ ಹಿತವಾದ ಪುನರ್ ಬಳಕೆ ಕಾಗದದಿಂದ ಮುದ್ರಿಸಲಾಗಿದೆ.

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.40/-	ರೂ.400/-
ರೈತರು	ರೂ.50/-	ರೂ.500/-
ಇತರರು	ರೂ.60/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O) ಅಥವಾ ಡ್ರಾಫ್ಟ್ / ಚೆಕ್ ಮೂಲಕ "*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*" ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.
ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ವಿಳಾಸ :
ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು–560 065.
✆ : 8565002 (O) 8560267 (R)
e.mail: hittalu @ bgl.vsnl.net.in (R); prakashtnk@yahoo.com (O)

ಗೆ, ______________________
____
____
____

Printed by Sri.S.Sridhar, Published by Smt.K.Meenakshi (Owner). printed at "Navabharath Enterprises" No. 10, Sirur Park 'B' Street, Sheshadripuram, Bangalore - 560 020. and Published at No. 399, 14-B 'Cross New Town